

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 21 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 66 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಇಂದು ಯೋಗ ದಿನಾಚರಣೆ

ಅರಮನೆ ಆವರಣದಲ್ಲಿ 8 ಸಾವಿರಕ್ಕೂ ಅಧಿಕ ಮಂದಿ ಯೋಗ ಪ್ರದರ್ಶನ

ಮೈಸೂರು ಜಿಲ್ಲಾಡಳಿತ, ಆಯುಷ್ ಇಲಾಖೆ ನೇತೃತ್ವದಲ್ಲಿ ವಿವಿಧ ಯೋಗ ಸಂಘಟನೆಗಳು ಸಾಥ್



ಮೈಸೂರು, ಜೂ.20(ಎಂಟಿವೈ)– ಮೈಸೂರು ಅರಮನೆ ಆವರಣದಲ್ಲಿ ನಾಳೆ(ಜೂ.21) ಬೆಳಗ್ಗೆ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. 8 ಸಾವಿರಕ್ಕೂ ಹೆಚ್ಚು ಯೋಗಪಟುಗಳು ಯೋಗ ಪ್ರದರ್ಶಿಸಲಿದ್ದಾರೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಆಯುಷ್ ಇಲಾಖೆ ಹಾಗೂ ಯೋಗ ಫೆಡರೇಷನ್ ಆಫ್ ಮೈಸೂರು ಸೇರಿದಂತೆ ವಿವಿಧ ಯೋಗ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಘೋಷ ವಾಕ್ಯದೊಂದಿಗೆ ಆಚರಿಸಲಾಗುತ್ತಿದ್ದು, ಅರಮನೆ ಆವರಣದಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಅರಮನೆ ಆನೆ ಬಾಗಿಲಿನ ಮುಂಭಾಗದ ಆವರಣದಲ್ಲಿ ಬೃಹತ್ ವೇದಿಕೆ ನಿರ್ಮಿಸಲಾಗಿದ್ದು, ಯೋಗಪಟುಗಳಿಗೆ ಯೋಗಾಸನದ ಬಗ್ಗೆ ಮಾರ್ಗದರ್ಶನ ನೀಡಲು ಯೋಗ ಶಿಕ್ಷಕರಿಗಾಗಿ 120 ಚಿಕ್ಕ ವೇದಿಕೆ ನಿರ್ಮಿಸಲಾಗಿದೆ. ಈ ವೇದಿಕೆಗಳ ಮೇಲೆ ಯೋಗ ಮಾರ್ಗದರ್ಶಕರು, ಯೋಗ ಶಿಕ್ಷಕರು ಶಿಷ್ಟಾಚಾರದಂತೆ ವಿವಿಧ ಆಸನ ಪ್ರದರ್ಶಿಸಲಿದ್ದು, ಅದಕ್ಕೆ ಅನುಗುಣವಾಗಿ ಯೋಗಪಟುಗಳು ಯೋಗಾಸನ ಮಾಡಲಿದ್ದಾರೆ. ನಾಳೆ ಬೆಳಗ್ಗೆ 6ರಿಂದ 8 ಗಂಟೆವರೆಗೆ ಯೋಗ ಕಾರ್ಯಕ್ರಮ ನಡೆಯಲಿದೆ. ಯೋಗಪಟುಗಳು ಮುಂಜಾನೆ 5 ಗಂಟೆಯಿಂದಲೇ ಬಲರಾಮ (ಕೋಟೆ ಆಂಜನೇಯಸ್ವಾಮಿ ದೇವಾಲಯದ ಪಕ್ಕ) ಹಾಗೂ ವರಹಾ(ಗನ್‌ಹೌಸ್ ಎದುರು) ಗೇಟ್ ಮೂಲಕ ಅರಮನೆ ಆವರಣ ಪ್ರವೇಶಿಸಿ ಯೋಗ ಮಾಡಲು ಗುರುತಿಸಲ್ಪಟ್ಟಿರುವ ಸ್ಥಳದಲ್ಲಿ ಕುಳಿತುಕೊಳ್ಳಲು ಸೂಚಿಸಲಾಗಿದೆ. ಚಾಮುಂಡಿಬೆಟ್ಟದ ದಾಸೋಹ ಭವನದಲ್ಲಿ 8 ಸಾವಿರ ಮಂದಿಗೆ ಉಪಾಹಾರದ ವ್ಯವಸ್ಥೆ ಮಾಡಲಾಗಿದ್ದು, ಅರಮನೆಯ ▶ 10ನೇ ಪುಟಕ್ಕೆ



ಮೈಸೂರು ಅರಮನೆಯ ಆವರಣದಲ್ಲಿ ಯೋಗ ಪ್ರದರ್ಶನಕ್ಕೆ ಸಿದ್ಧತೆ

ಇಂದು ಮೈಸೂರಿನ 21 ಕೇಂದ್ರಗಳಲ್ಲಿ ನೀಟ್ ಮರು ಪರೀಕ್ಷೆ

- 7889 ವಿದ್ಯಾರ್ಥಿಗಳಿಂದ ನೋಂದಣಿ
- ಬೆಳಗ್ಗೆ 11ರಿಂದ ಮಧ್ಯಾಹ್ನ 1.30ರೊಳಗೆ ಪರೀಕ್ಷಾ ಕೇಂದ್ರ ಪ್ರವೇಶಕ್ಕೆ ಅವಕಾಶ

ಮೈಸೂರು, ಜೂ.20(ಎಂಟಿವೈ)– ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ರದ್ದಾಗಿದ್ದ ನೀಟ್ ಮತ್ತೆ ಭಾನುವಾರ (ಜೂ.21) ಮೈಸೂರಿನ 21 ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಭದ್ರತೆಯಡಿ ಜರುಗಲಿದ್ದು, ವಿದ್ಯಾರ್ಥಿಗಳು ಬೆಳಗ್ಗೆ 11ರಿಂದ ಮಧ್ಯಾಹ್ನ 1.30ರೊಳಗೆ ಪರೀಕ್ಷಾ ಕೇಂದ್ರ ಪ್ರವೇಶಿಸಲು ಅವಕಾಶ ನೀಡಲಾಗಿದೆ.

ಮತ್ತೆ ಬಿಗಿ ಭದ್ರತೆಯಡಿ ನೀಟ್ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಪ್ರಶ್ನೆಪತ್ರಿಕೆ ಸಾಗಾಟ, ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳ ಪ್ರವೇಶ ಮುನ್ನ ತಪಾಸಣೆ ಮಾಡುವ ವಿಧಾನ, ಸಿಸಿ ಕ್ಯಾಮರಾ ದೃಶ್ಯಾವಳಿ ಪರಿಶೀಲನೆ ಸೇರಿದಂತೆ ಪರೀಕ್ಷೆಗೆ ಸಂಬಂಧಿಸಿದಂತೆ ಅಣಕು (ಮಾಕ್ ಡ್ರಿಲ್) ಪ್ರದರ್ಶನ ನಡೆಸಲಾಗಿದ್ದು, ಆ ಮೂಲಕ ಪರೀಕ್ಷಾ ಸಿಬ್ಬಂದಿಯಲ್ಲಿರುವ ಗೊಂದಲ ನಿವಾರಿಸಲಾಗಿದೆ.



ಮೈಸೂರಿನ 21 ಪರೀಕ್ಷಾ ಕೇಂದ್ರಗಳಲ್ಲಿ ಮತ್ತೆ ನೀಟ್ ನಡೆಯಲಿದ್ದು, ಒಟ್ಟು 7886 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಹೆಸರು ನೋಂದಾಯಿಸಿದ್ದಾರೆ. ಮಧ್ಯಾಹ್ನ 2ರಿಂದ 5 ಗಂಟೆಯವರೆಗೆ ನೀಟ್ ಮರು ಪರೀಕ್ಷೆ ನಡೆಯಲಿದೆ. ಆದರೆ, ವಿದ್ಯಾರ್ಥಿಗಳು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30ರೊಳಗೆ ಪರೀಕ್ಷಾ ಕೇಂದ್ರ ಪ್ರವೇಶಿಸಬೇಕಾಗಿದೆ. ನಂತರ ಪರೀಕ್ಷಾ ಕೇಂದ್ರದ ಪ್ರವೇಶ ನಿರ್ಬಂಧಿಸಲಾಗುತ್ತದೆ. ಪರೀಕ್ಷಾರ್ಥಿಗಳ ಫ್ರಿಸ್ಕಿಂಗ್ ಹಾಗೂ ಬಯೋಮೆಟ್ರಿಕ್ ಪರಿಶೀಲನೆ ಪ್ರಕ್ರಿಯೆ ನಡೆಸಿದ ಬಳಿಕವಷ್ಟೇ ಪರೀಕ್ಷಾ ಕೇಂದ್ರ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತದೆ.

ಪರೀಕ್ಷಾ ಕೇಂದ್ರಗಳು: ನೀಟ್ ಪರೀಕ್ಷೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಎಂ.ಜಿ.ಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜು, ▶ 10ನೇ ಪುಟಕ್ಕೆ

ಪ್ರಜಾ ಸೇವೆ

ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲು ಪ್ರತ್ಯೇಕ ಸಚಿವಾಲಯ ಸ್ಥಾಪನೆಗೆ ಸಂಪುಟ ಮಹತ್ವದ ನಿರ್ಧಾರ

ಬೆಂಗಳೂರು, ಜೂ. 20(ಕೆಎಂಶಿ)–ಸಾಮಾನ್ಯ ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲು 'ಪ್ರಜಾಸೇವೆ' ಪ್ರತ್ಯೇಕ ಸಚಿವಾಲಯ ಸ್ಥಾಪಿಸಲು ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಮಹತ್ವದ ತೀರ್ಮಾನ ಕೈಗೊಂಡಿದೆ.



ಡಿ.ಕೆ.ಶಿವಕುಮಾರ್

ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಇಲಾಖೆಗೆ ಪ್ರತ್ಯೇಕ ಮಂತ್ರಿ ನೇಮಕ ಮಾಡಲಿದ್ದು, ಎಲ್ಲಾ ಇಲಾಖೆಗಳು ಇದರ ಅಧೀನದಲ್ಲಿ ಬರಲಿವೆ ಎಂದರು. ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು. ನಮ್ಮಿಂದ ಜನತೆಗೆ ನ್ಯಾಯ ದೊರಕಿಸಲು ಸಾಧ್ಯವೇ ಎಂಬ ಕುರಿತು ನಿರ್ಧರಿಸಲು ಈ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲಾಗುತ್ತಿದೆ. ಕಾನೂನು ಚೌಕಟ್ಟಿನಡಿ ಸಮಸ್ಯೆಗಳನ್ನು ಜನರು ಪರಿಹರಿಸಿಕೊಳ್ಳುತ್ತಾರೆ. ನಮ್ಮಿಂದಲೋ ಅಥವಾ ಅಧಿಕಾರಿಗಳಿಂದಲೋ ತಪ್ಪಾಗಿದ್ದರೆ, ಅಂತಹ ಸಮಸ್ಯೆಗಳನ್ನು ಬಗೆಹರಿಸಿ ನಾಗರಿಕರಿಗೆ ದಕ್ಕ ಬೇಕಾದ ನ್ಯಾಯ ದೊರಕಿಸಲಾಗುವುದು. ಇಲಾಖೆ ಹಿರಿಯ ಐಎಎಸ್ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ಇದು ಕಾರ್ಯ ನಿರ್ವಹಿಸಲಿದ್ದು, ಅಧಿಕಾರಿಗಳ ದೊಡ್ಡ ತಂಡವೇ ಇರಲಿದೆ. ನನಗಾಗಲೀ, ಸಚಿವರಿಗಾಗಲೀ ಸಾರ್ವಜನಿಕರು ದೂರು, ಮನವಿಗಳನ್ನು ನೀಡಿದರೆ, ಅವುಗಳನ್ನು ಪ್ರಜಾ ಸೇವೆ ಇಲಾಖೆಗೆ ಹಸ್ತಾಂತರಿಸಲಾಗುವುದು ಎಂದರು.

ಸಿಎಂಗೆ ನಾಮ ನಿರ್ದೇಶನ ಅಧಿಕಾರ: ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಐದು ಮಂದಿಯನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡುವ ಅಧಿಕಾರವನ್ನು ಸಂಪುಟ ಸಭೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನೀಡಿತು.

> “ಇನ್ನು ಮುಂದೆ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲೂ ವಾರಕ್ಕೊಮ್ಮೆ ಜನಸ್ಪಂದನ ಸಭೆಗಳು ನಡೆಯಲಿವೆ. ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರನ್ನು ಜೊತೆಗಿಟ್ಟುಕೊಂಡು ತಮ್ಮ ವ್ಯಾಪ್ತಿಯ ಒಂದು ಕ್ಷೇತ್ರದಲ್ಲಿ ಕಾಲಕಾಲಕ್ಕೆ ಸಭೆ ನಡೆಸಬೇಕು. ಸಚಿವರ ಮಟ್ಟದಲ್ಲಿ ಬಗೆಹರಿಯದ ಸಮಸ್ಯೆಗಳ ಅರ್ಜಿಗಳನ್ನು ಪ್ರಜಾ ಸೇವೆ ಇಲಾಖೆಗೆ ವರ್ಗಾಯಿಸಬೇಕು. ಅರ್ಜಿಯನ್ನು ಇಲಾಖೆ ಪರಿಶೀಲಿಸಿ ಸಾಧ್ಯವಾದಷ್ಟು ನ್ಯಾಯ ದೊರಕಿಸಲು ಪ್ರಯತ್ನಿಸಲಿದೆ. ಒಂದು ವೇಳೆ ಸಾಧ್ಯವಿಲ್ಲ ಎನ್ನುವುದಾದರೆ, ಕಾರಣ ಮತ್ತು ವಿವರಣೆ ನೀಡಿ ಅರ್ಜಿದಾರರಿಗೆ ಮುಂದೆ ಏನು ಮಾಡಬೇಕೆಂಬ ಮಾರ್ಗದರ್ಶನ ನೀಡಲಿದೆ. –ಡಿ.ಕೆ.ಶಿವಕುಮಾರ್


ತರಗತಿ ಕೊಠಡಿ: ಇದಲ್ಲದೆ, ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ 360.01 ಕೋಟಿ ರೂ. ಅಂದಾಜು ವೆಚ್ಚದಲ್ಲಿ 2,200 ತರಗತಿ ಕೊಠಡಿಗಳ ನಿರ್ಮಾಣಕ್ಕೆ ಸಂಪುಟ ಸಭೆ ಅನುಮೋದನೆ ನೀಡಿತು.

620 ಹೊಸ ಬಸ್ ಖರೀದಿ: ಪ್ರಯಾಣಿಕರ ಅನುಕೂಲಕ್ಕಾಗಿ 235 ಕೋಟಿ ರೂ. ವೆಚ್ಚದಲ್ಲಿ 620 ಹೊಸ ಬಸ್‌ಗಳ ಖರೀದಿಗೆ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಅನುಮತಿ ನೀಡಲಾಯಿತು. ಇದರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 400, ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 220, ಬಿಎಸ್–6 ಪೂರ್ಣ ನಿರ್ಮಿತ ಗ್ರಾಮೀಣ ಬಸ್‌ಗಳ ಖರೀದಿ ಸೇರಿದೆ. ಕೇಂದ್ರ ಸರ್ಕಾರದ ಯೋಜನೆಯಡಿ ರಾಜ್ಯದ ಹತ್ತು ನಗರಗಳ 11 ಸ್ಥಳಗಳಲ್ಲಿ ▶ 10ನೇ ಪುಟಕ್ಕೆ

ಮುಂದಿನ ಎರಡು ತಿಂಗಳು ಕುಡಿಯುವ ನೀರಿಗೆ ಆತಂಕವಿಲ್ಲ

- ಅಷ್ಟರಲ್ಲಿ ಮಳೆ ಬರುವ ಸಾಧ್ಯತೆ
- ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ
- ಮೇಕೆದಾಟು ಯೋಜನೆಗೆ ತಮಿಳುನಾಡು ವಿರೋಧ ಸಲ್ಲ

ಬೆಂಗಳೂರು, ಜೂ. 20(ಕೆಎಂಶಿ)–ರಾಜ್ಯದಲ್ಲಿ ಈಗ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಬಾರದೇ ಇದ್ದರೂ, ಮುಂದಿನ ಎರಡು ತಿಂಗಳಿಗೆ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಇಲ್ಲ ಎಂದು ಜಲ ಸಂಪನ್ಮೂಲ ಸಚಿವ ರಾಮಲಿಂಗಾ ರೆಡ್ಡಿ ಭರವಸೆ ನೀಡಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಗಾರು ಆರಂಭವಾಗಿ ಹಲವು ದಿನ ಕಳೆದರೂ ರಾಜ್ಯದಲ್ಲಿ ವಾಡಿಕೆಯಂತೆ ಮಳೆಯಾಗಿಲ್ಲ. ಆದರೂ, ಮುಂದಿನ ಎರಡು ತಿಂಗಳು ಕುಡಿಯುವ ನೀರಿಗೆ ಸಮಸ್ಯೆ ಇಲ್ಲ, ಜನರು ಆತಂಕಕ್ಕೆ ಒಳಗಾಗಬಾರದು ಎಂದು ಹೇಳಿದರು.

ಬೆಂಗಳೂರು ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಸುವ ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯದಲ್ಲಿ ಪ್ರಸ್ತುತ 11 ಟಿಎಂಸಿ ನೀರು ಸಂಗ್ರಹವಿದೆ. ಹವಾಮಾನ ಇಲಾಖೆ ಪ್ರಕಾರ ಮುಂದಿನ ದಿನಗಳಲ್ಲಿ ಮಳೆಯಾಗುವ ಸಂಭವ ಇರುವುದರಿಂದ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಎದುರಾಗುವುದಿಲ್ಲ.

ಮೇಕೆದಾಟು ಯೋಜನೆ ವಿರೋಧ ಸಲ್ಲ: ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಕೆ ಮಾಡುವ ಉದ್ದೇಶಿತ ಮೇಕೆದಾಟು ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸುವುದು ಸರಿಯಲ್ಲ. ಇದು ಸಂಪೂರ್ಣವಾಗಿ ಕುಡಿಯುವ ನೀರಿನ ಯೋಜನೆಯಾಗಿದೆ. ಈ ಜಲಾಶಯದಲ್ಲಿ ಸಂಗ್ರಹವಾಗುವ ನೀರನ್ನು ಕುಡಿಯುವುದಕ್ಕೆ ಅಲ್ಲದೆ, ಬೇರೆ ಉದ್ದೇಶಗಳಿಗೆ ಬಳಕೆ ಮಾಡುವುದಿಲ್ಲ ಎಂಬುದಾಗಿ ಕರ್ನಾಟಕ ತಿಳಿಸಿದ್ದರೂ, ತಮಿಳುನಾಡು ಸರ್ಕಾರ ಕ್ಯಾತೆ ತೆಗೆಯುತ್ತಿದೆ. ಮೇಕೆದಾಟು ಜಲಾಶಯ ಯೋಜನೆ, ಕರ್ನಾಟಕದ ಮಹತ್ವಾಕಾಂಕ್ಷಿ ನೀರಾವರಿ ಯೋಜನೆಗಳಲ್ಲಿ ಒಂದಾಗಿದೆ. ತಮಿಳುನಾಡು ಸರ್ಕಾರ ಅನಗತ್ಯವಾಗಿ ಯೋಜನೆಗೆ ಅಡ್ಡಿಪಡಿಸುತ್ತಿದೆ ಎಂದರು.



ರಾಮಲಿಂಗಾರೆಡ್ಡಿ

ಮೇಕೆದಾಟು ಯೋಜನೆ ಅನುಷ್ಠಾನಗೊಂಡರೆ ರಾಜಧಾನಿ ಬೆಂಗಳೂರಿಗೆ 4.75 ಟಿಎಂಸಿ ಕುಡಿಯುವ ನೀರು ಲಭ್ಯವಾಗಲಿದೆ. ಅಲ್ಲದೆ, 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಬಹುದಾಗಿದೆ. ಕೇಂದ್ರ ನಿರ್ದೇಶನದಂತೆ ತಮಿಳುನಾಡಿಗೆ ತಿಂಗಳಿಗೊಮ್ಮೆ ನೀರು ಹರಿಸಬೇಕು. ಜೂನ್‌ನಲ್ಲಿ 19 ಟಿಎಂಸಿ ನೀರು ಬಿಡಬೇಕಿದೆ. ಪ್ರಸ್ತುತ ನಮ್ಮ ಬಳಿ 16 ಟಿಎಂಸಿ ಮಾತ್ರವೇ ನೀರು ಸಂಗ್ರಹವಿದೆ. ಕುಡಿಯುವ ನೀರಿಗೆ ಕೇವಲ 3 ಟಿಎಂಸಿ ಉಳಿದಿದೆ. ಸಂಕಷ್ಟ ಸಂದರ್ಭದಲ್ಲಿ ನೀರು ಹರಿಸುವ ಕುರಿತು ಸಲಹೆ ಪಡೆಯುವ ಚಿಂತನೆ ಇದೆ.

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ವಿಪಕ್ಷ ನಾಯಕ ಅಶೋಕ್ ತಲೆದಂಡಕ್ಕೆ ವರಿಷ್ಠರ ನಿರ್ಧಾರ!

ಬೆಂಗಳೂರು,ಜೂ.20(ಕೆಎಂಶಿ)–ವಿಧಾನಸಭೆಯಿಂದ ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿಯ ಕೆಲವು ಶಾಸಕರು ಅಡ್ಡ ಮತದಾನ ಮಾಡಿದ್ದನ್ನು ಗಂಭೀರವಾಗಿ ಪರಿಗಣಿಸಿರುವ ಪಕ್ಷದ ರಾಷ್ಟ್ರೀಯ ನಾಯಕರು ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಬದಲಾವಣೆಗೆ ಮುಂದಾಗಿದ್ದಾರೆ.

ಎನ್‌ಡಿಎ ಮಿತ್ರ ಪಕ್ಷ ಜೆಡಿಎಸ್‌ನ ಕೆಲವು ಶಾಸಕರೂ ಅಡ್ಡ ಮತದಾನ ಮಾಡಿದ ವರದಿ ಇತ್ತಾದರೂ ಪಕ್ಷದ ನಾಯಕ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕರೆದ ಶಾಸಕರ ಸಭೆಯಲ್ಲಿ 17 ಮಂದಿ ಹಾಜರಾಗಿ ಅಡ್ಡ ಮತದಾನ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಶಾಸಕರೇ ಅಡ್ಡ ಮತದಾನ ಮಾಡಿರುವ ಸಂಶಯ ಉಂಟಾಗಿದ್ದು, ಮೂಲಗಳ ಪ್ರಕಾರ ಚುನಾವಣೆಯಲ್ಲಿ ತಿರಸ್ಕೃತಗೊಂಡ ಮತ ಸೇರಿದಂತೆ ಒಟ್ಟು 9 ಶಾಸಕರು ಅಡ್ಡ ಮತದಾನ ಮಾಡಿದ್ದಾರೆ ಎನ್ನಲಾಗಿದೆ. ಈ ಪೈಕಿ ಉತ್ತರ ಕರ್ನಾಟಕದ ನಾಲ್ವರು, ದಕ್ಷಿಣ ಕರ್ನಾಟಕದ ಐವರು ಶಾಸಕರು ಇರುವರೆಂಬ ಮಾಹಿತಿ ಪಕ್ಷದ ವರಿಷ್ಠರಿಗೆ ಲಭ್ಯವಾಗಿದೆ.

ಎಲ್ಲ ಶಾಸಕರನ್ನು ಒಟ್ಟಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳುವಲ್ಲಿ ನಾಯಕತ್ವ ವಿಫಲವಾಗಿದೆ ಎಂಬ ದೂರುಗಳು ವರಿಷ್ಠರಿಗೆ ತಲುಪಿದ ಮಾಹಿತಿ ಇದೆ. ಕರ್ನಾಟಕ ಬಿಜೆಪಿಯಲ್ಲಿನ ಅಡ್ಡ ಮತದಾನ ಕುರಿತು ಚರ್ಚಿಸಲು ಜೂನ್ 23ರಂದು ದೆಹಲಿಗೆ ಬರುವಂತೆ ಬಿ.ವೈ.ವಿಜಯೇಂದ್ರ ಮತ್ತು ಆರ್.ಅಶೋಕ್ ಅವರಿಗೆ ಪಕ್ಷದ ವರಿಷ್ಠರು ಕರೆದಿದ್ದು, ಸಭೆ ನಂತರ ರಾಜ್ಯ ಘಟಕದಲ್ಲಿ ಒಗ್ಗಟ್ಟು ಮೂಡಿಸಿ, ಶಿಸ್ತು ಕಾಪಾಡಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು ಉನ್ನತಮಟ್ಟದಲ್ಲಿ ಸಮಾಲೋಚನೆ ನಡೆಯಲಿದೆ. ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್ವಾಲ್, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಬದಲಾವಣೆ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. ಬರುವ ನವೆಂಬರ್ ವೇಳೆಗೆ ವಿಜಯೇಂದ್ರ ಅವರ ರಾಜ್ಯಾಧ್ಯಕ್ಷ ಅವಧಿ ಪೂರ್ಣಗೊಳ್ಳುತ್ತಿದ್ದು, ಈ ಸ್ಥಾನಕ್ಕೆ ಬೇರೊಬ್ಬರ ಆಯ್ಕೆಗೆ ಸಿದ್ಧತೆ ನಡೆದಿದೆ ಎನ್ನಲಾಗಿದೆ.







WANTED
30x40 Residential site in Vijayanagar 3rd Stage, Mysuru.
DIRECT OWNER ONLY.
NO BROKERS.
9901393618



ಗ್ರಾಮ ಪಂಚಾಯಿತ್ತಿ ಮಟ್ಟದಲ್ಲೂ ಕೆಂಪೇಗೌಡ ಜಯಂತಿ ಆಚರಣೆಗೆ ಒಕ್ಕಲಿಗರ ಒಕ್ಕೂಟ ಆಗ್ರಹ

ಶಾಲಾ–ಕಾಲೇಜಲ್ಲೂ ಶ್ರೇಯುತರ ವಿಚಾರ ಪಠ್ಯವಾಗಿಸಲು ಒತ್ತಾಯ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಮಾತನಾಡಿದರು.

ಮೈಸೂರು, ಜೂ.20(ಜಿಎ)–ರಾಜ್ಯದಲ್ಲಿ ಜೂ.27ರಂದು ನಡೆಯುತ್ತಿರುವ ಕೆಂಪೇಗೌಡ ಜಯಂತಿಯನ್ನು ಇತರ ಮಹನೀಯರ ಜಯಂತಿಯಂತೆ ಗ್ರಾಮ ಪಂಚಾಯತ್, ಶಾಲಾ–ಕಾಲೇಜುಗಳಲ್ಲಿ ಆಚರಿಸುವಂತೆ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸತೀಶ್‌ಗೌಡರು ಬೀಡನಹಳ್ಳಿ ಮಾತನಾಡಿ, 2016ರಿಂದ ರಾಜ್ಯದಲ್ಲಿ ಅಧಿಕೃತವಾಗಿ ಕೆಂಪೇಗೌಡ ಜಯಂತಿಯನ್ನು ಆಚರಿಸಲಾಗುತ್ತಿದೆ. ಆದರೆ, ಜಯಂತಿಯನ್ನು ಸರ್ಕಾರದ ಆದೇಶದ ಮೇರೆಗೆ ಕೇವಲ ಜಿಲ್ಲಾಡಳಿತ, ತಾಲೂಕು ಆಡಳಿತಗಳು ಮಾತ್ರ ಆಚರಿಸುತ್ತಿವೆ. ಸರ್ಕಾರದ ಇತರ ಕಚೇರಿಯಲ್ಲಿ ಜಯಂತಿಯನ್ನು ಇತರೆ ಜಯಂತಿಗಳಂತೆ ಆಚರಿಸುವುದಿಲ್ಲ. ಕಾಟಾಚಾರಕ್ಕೆ ಆಚರಿಸುತ್ತಿದ್ದಾರೆ ಎಂದು ಅನ್ನಿಸುತ್ತಿದೆ ಎಂದು ದೂರಿದರು.

ಈ ಹಿಂದೆ 2015ರಲ್ಲಿ ನಡೆದ ಕೆಂಪೇಗೌಡ ಜಯಂತಿ ಸ್ಮರಣೋತ್ಸವ ವೇದಿಕೆ ಪ್ರಮುಖ ಮೈಲಿಗಲ್ಲಾಯಿತು. ಮತ್ತೊಂದೆಡೆ ಸಮುದಾಯದ ಪರವಾಗಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಶ್ರೀಗಳು ರಜೆಗಾಗಿ ನಮಗೆ ಜಯಂತಿ ಬೇಡ. ಬದಲಾಗಿ ಜಯಂತಿಗಾಗಿ ಜಯಂತಿ ಬೇಕು ಎಂದು ಸರ್ಕಾರದ ಗಮನ ಸೆಳೆದಿದ್ದರು. ಆದರೂ ಅದು ಅನುಷ್ಠಾನಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಕೆಂಪೇಗೌಡರ ಜಯಂತಿಯನ್ನು ಗ್ರಾಮ ಪಂಚಾಯಿತಿ ಮಟ್ಟ ಹಾಗೂ ಎಲ್ಲಾ ಶಾಲಾ–ಕಾಲೇಜುಗಳಲ್ಲಿ ಆಚರಿಸಬೇಕು ಎಂದು ಆಗ್ರಹಿಸಿದರು.

ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಮಾತನಾಡಿ, ನಾಡಿನ ಅಪ್ರತಿಮ ನಾಯಕ ಕೆಂಪೇಗೌಡರ ಬಗ್ಗೆ ಎಲ್ಲರಿಗೂ ತಿಳಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಶಾಲಾ ಪಠ್ಯಕ್ರಮದಲ್ಲಿ ಅವರ ಕುರಿತು ವಿಷಯ ಸೇರಿಸಬೇಕು. ಜೊತೆಗೆ ಎಲ್ಲಾ ಸರ್ಕಾರಿ ಕಚೇರಿಯಲ್ಲಿ ಭಾವಚಿತ್ರವನ್ನು ಕಡ್ಡಾಯವಾಗಿ ಹಾಕಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಮರಿಸ್ವಾಮಿ, ಪ್ರಶಾಂತ್‌ಗೌಡ, ಎ.ರವಿ, ಗಿರೀಶ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ಪಾಲಿಕೆಯಿಂದ ಮುಂದುವರೆದ ಕಾರ್ಯಾಚರಣೆ; 13 ಉದ್ದಿಮೆಗಳಿಗೆ ಬೀಗ

ಮೈಸೂರು,ಜೂ.20(ಪಿಎಂ)– ದಟ್ಟಗಳ್ಳಿ ರೆಸ್ಟೋಬಾರ್ ಅಗ್ನಿ ದುರಂತದಿಂದ ಎಚ್ಚೆತ್ತುಕೊಂಡಿರುವ ಮೈಸೂರು ಮಹಾನಗರ ಪಾಲಿಕೆ, ಶನಿವಾರ ಎರಡನೇ ದಿನದ ಕಾರ್ಯಾಚರಣೆ ಮುಂದುವರೆಸಿ ಒಟ್ಟು 39 ಉದ್ದಿಮೆಗಳ ವಿರುದ್ಧ ಕ್ರಮ ಕೈಗೊಂಡಿದ್ದು, ಈ ಪೈಕಿ 13 ಉದ್ದಿಮೆಗಳಿಗೆ ಬೀಗ ಜಡಿಯಲಾಗಿದೆ.



ಪಾಲಿಕೆ ಅಧಿಕಾರಿ ಮತ್ತು ಸಿಬ್ಬಂದಿ ತಂಡದಿಂದ ಶನಿವಾರವೂ ಕಾರ್ಯಾಚರಣೆ ನಡೆಯಿತು.

ಪಾಲಿಕೆ ವ್ಯಾಪ್ತಿಯ ಹೋಟೆಲ್, ಬಾರ್, ರೆಸ್ಟೋರೆಂಟ್, ರೂಫ್‌ಟಾಪ್ ರೆಸ್ಟೋರೆಂಟ್, ಪಬ್, ಸರ್ವೀಸ್ ಅಪಾರ್ಟ್‌ಮೆಂಟ್, ವಾಣಿಜ್ಯ ಉದ್ದಿಮೆಗಳು ಸೇರಿದಂತೆ ಇತರೆ ಟ್ರೇಡ್ ಸ್ಥಾಪನೆಗಳಲ್ಲಿ ಟ್ರೇಡ್ ಲೈಸೆನ್ಸ್, ಅಗ್ನಿ ಸುರಕ್ಷತೆ, ಸಾರ್ವಜನಿಕ ಸುರಕ್ಷತೆ, ಸ್ವಚ್ಛತೆ, ನೈರ್ಮಲ್ಯ ಸಂಬಂಧ ನಿಯಮಾವಳಿ ಪಾಲನೆ ಹಾಗೂ ನಿಯಮಾನುಸಾರ ಅನುಮತಿಗಳ ಪಡೆದಿರುವ ಕುರಿತು ಪಾಲಿಕೆಯಿಂದ ವಿಶೇಷ ಪರಿಶೀಲನಾ ಕಾರ್ಯಾಚರಣೆ ನಡೆಸಲಾಯಿತು. ಪಾಲಿಕೆಯ ವಲಯವಾರು ಸಹಾಯಕ ಆಯುಕ್ತರು, ಆರೋಗ್ಯ ನಿರೀಕ್ಷಕರು, ಪರಿಸರ ಅಭಿಯಂತರರು, ಸಿವಿಲ್ ಅಭಿಯಂತರರು ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ವಲಯವಾರು ಕ್ರಮ: ಪಾಲಿಕೆಯ ವಲಯ–1ರ ವ್ಯಾಪ್ತಿಯಲ್ಲಿ ಹೊಯ್ಸಳ ರೆಸ್ಟೋ ಪಬ್, ಥಿಂಕ್ ಗ್ಲಾಸ್, ಜಮುನಾ ಬಾರ್ ಮತ್ತು ರೆಸ್ಟೋರೆಂಟ್, ಅಕ್ಷಯ ಬಾರ್ ಮತ್ತು ರೆಸ್ಟೋರೆಂಟ್, ಸೊಕೊ ದಿ ಹೌಸ್ ಕಾಮನ್ಸ್, ಮಾನ್ಯತಾ ಡಿಸ್ಟ್ರಿಬ್ಯೂಟರ್ ಹಾಗೂ ಸೆಂಥಿಲ್ ಕುಮಾರ್ ಟೆಕ್ಸ್‌ಟೈಲ್ಸ್ ಸೇರಿದಂತೆ ಒಟ್ಟು 7 ಉದ್ದಿಮೆಗಳಿಗೆ ವಿವಿಧ ನಿಯಮಗಳ ಉಲ್ಲಂಘನೆ ಹಿನ್ನೆಲೆಯಲ್ಲಿ ನೋಟಿಸ್ ಜಾರಿಗೊಳಿಸಲಾಗಿದೆ.

ವಲಯ–2ರಲ್ಲಿ ಹೋಟೆಲ್ ಸೋಹೊ ರೂಫ್‌ಟಾಪ್ ರೆಸ್ಟೋರೆಂಟ್ ಮತ್ತು ದಿ ಕ್ರೇವ್ ರೂಫ್‌ಟಾಪ್ ರೆಸ್ಟೋರೆಂಟ್‌ಗೆ ಬೀಗ ಜಡಿಯಲಾಗಿದೆ. ವಲಯ–3ರಲ್ಲಿ ಕಪೂರ್ಸ್ ಕೆಫೆ, ಎಲಾನ್ ರೆಸ್ಟೋ ಬಾರ್, ಚಾಮುಂಡೇಶ್ವರಿ ಬಾರ್, ತಶನ್ ಢಾಬಾ ಮತ್ತು ಉಚಿಹ ಕಿಚನ್ ಸೇರಿದಂತೆ 5 ಉದ್ದಿಮೆಗಳನ್ನು ಮುಚ್ಚಿಸಲಾಗಿದೆ. ವಲಯ–4ರಲ್ಲಿ ಮೇಷ ಲೌಂಜ್, ಲಾಫ್ಟ್ ಕೆಫೆ, ಹವಾನಾ, ಬಿರಿಯಾನಿ ಬೈ ಕಿಲೋ, ಕ್ಯೂರ್ಸ್ ಫುಡ್ ಪ್ರೈವೇಟ್ ಲಿಮಿಟೆಡ್ ಸೇರಿದಂತೆ 5 ಉದ್ದಿಮೆಗಳನ್ನು ಮುಚ್ಚಿಸಲಾಗಿದೆ. ಲಾಸ್ಟ್ ಅಂಡ್ ಫೌಂಡ್ ಲೌಂಜ್ ಬಾರ್ ಅಂಡ್ ರೆಸ್ಟೋರೆಂಟ್‌ಗೆ ನೋಟಿಸ್ ಜಾರಿಗೊಳಿಸಲಾಗಿದೆ.

ವಲಯ–5ರಲ್ಲಿ ಬ್ಲೂ ಮೂನ್ ಬಾರ್ ಅಂಡ್ ರೆಸ್ಟೋ ಪಬ್, ಆರ್ಕೋರ್ ಹೋಟೆಲ್, ಮಿಲ್ಟನ್ ಕೆಫೆ, ಬೈರವೇಶ್ವರ ಬಾರ್ ಅಂಡ್ ರೆಸ್ಟೋರೆಂಟ್, ಅನ್ನಪೂರ್ಣೇಶ್ವರಿ ಬಾರ್ ಅಂಡ್ ರೆಸ್ಟೋರೆಂಟ್ ಹಾಗೂ ಬಿಂಬ ಹೋಟೆಲ್‌ಗೆ ನೋಟಿಸ್ ಜಾರಿಗೊಳಿಸಲಾಗಿದೆ. ವಲಯ–6ರ ವ್ಯಾಪ್ತಿಯಲ್ಲಿ ಹೈಪಾರ್ಕ್ ಹೋಟೆಲ್ ಅನ್ನು ಮುಚ್ಚಿಸಲಾಗಿದೆ.

ವಲಯ–7ರ ವ್ಯಾಪ್ತಿಯಲ್ಲಿ ರೆಸ್ಟೋರೈಲ್ ಕೆಫೆ, ಬ್ರಾಡ್‌ವೇ ಇನ್, ರುಚಿಮನೆ, ರಿದ್ಧಿಕ್ರಿಶ್ ಸರ್ವೀಸ್ ಅಪಾರ್ಟ್‌ಮೆಂಟ್, ಶೈನ್ ಗ್ರೂಪ್ಸ್ ಆಫ್ ಹೋಟೇಲ್, ಝುಮ್ ಝುಮ್ ರೆಸ್ಟೋರೆಂಟ್ ಮತ್ತು ಉಡುಪಿ ಹೋಟೆಲ್‌ಗೆ ನೋಟಿಸ್ ಜಾರಿ ಮಾಡಲಾಗಿದೆ. ವಲಯ–8ರಲ್ಲಿ ಸನ್‌ರೂಫ್ ಕೆಫೆ ಅಂಡ್ ರೆಸ್ಟೋರೆಂಟ್, ಎಫ್‌ಝುಡ್ ಎಂಟರ್‌ಪ್ರೈಸಸ್, ಐಬಿ ಟ್ರೈರ್, ಹಮ್ಜಾಜ್ ಮಲ್ಟಿಕ್ಯೂಸಿನ್ ರೆಸ್ಟೋರೆಂಟ್ ಮತ್ತು ಮದರ್ಸ್ ಕ್ಯಾಟರಿಂಗ್ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ವಲಯ–9ರ ವಾರ್ಡ್ ಸಂಖ್ಯೆ 37ರ ಸೆಪ್ಪಾ ಉದ್ದಿಮೆಯ ಪರಿಶೀಲನೆಯ ಸಂದರ್ಭದಲ್ಲಿ ಇದು ಅನಧಿಕೃತ ಕಟ್ಟಡ ಎಂದು ಕಂಡುಬಂದ ಹಿನ್ನೆಲೆಯಲ್ಲಿ ನೋಟಿಸ್ ಜಾರಿಗೊಳಿಸಲಾಗಿದೆ.

ಪಾಲಿಕೆಯಿಂದ ಎಚ್ಚರಿಕೆ: ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಟ್ರೇಡ್ ಮತ್ತು ವಾಣಿಜ್ಯ ಉದ್ದಿಮೆಗಳು ಕಡ್ಡಾಯವಾಗಿ ಟ್ರೇಡ್ ಲೈಸೆನ್ಸ್ ಷರತ್ತುಗಳು, ಅಗ್ನಿ ಸುರಕ್ಷತಾ ನಿಯಮಗಳು, ಸಾರ್ವಜನಿಕ ಸುರಕ್ಷತಾ ಕ್ರಮಗಳು, ಸ್ವಚ್ಛತೆ ಮತ್ತು ನೈರ್ಮಲ್ಯ ಮಾನದಂಡಗಳು, ಕಟ್ಟಡ ಅನುಮತಿ ಷರತ್ತುಗಳು ಹಾಗೂ ಅನ್ವಯಿಸುವ ಇತರೆ ಕಾನೂನು ನಿಯಮಗಳನ್ನು ಪಾಲಿಸಬೇಕು.

ಅನುಮತಿಯಿಲ್ಲದೆ ಕಾರ್ಯ ನಿರ್ವಹಿಸುವುದು, ಅನುಮತಿಗಿಂತ ಭಿನ್ನವಾಗಿ ಬಳಕೆ ಮಾಡುವುದು, ಅಗ್ನಿ ಸುರಕ್ಷತಾ, ಸಾರ್ವಜನಿಕ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸುವುದು, ಟ್ರೇಡ್ ಲೈಸೆನ್ಸ್ ಷರತ್ತುಗಳನ್ನು ಪಾಲಿಸದಿರುವುದು ಅಥವಾ ಕಟ್ಟಡ ನಿಯಮಗಳನ್ನು ಉಲ್ಲಂಘಿಸುವುದು ಕಂಡುಬಂದಲ್ಲಿ ಅಂತಹ ಉದ್ದಿಮೆಗಳ ವಿರುದ್ಧ ಮುಚ್ಚುವಿಕೆ, ಟ್ರೇಡ್ ಲೈಸೆನ್ಸ್ ಅಮಾನತು ಹಾಗೂ ರದ್ದುಪಡಿಸುವಿಕೆ ಸೇರಿದಂತೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪಾಲಿಕೆ ಎಚ್ಚರಿಕೆ ನೀಡಿದೆ.

ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ, ನಗದು ಕಳವು

ಮೈಸೂರು, ಜೂ.20(ಪಿಎಂ)– ಕೆಆರ್ ಮೊಹಲ್ಲಾದ ವೀಣೆ ಶೇಷಣ್ಣ ರಸ್ತೆಯ ಮನೆಯೊಂದರಲ್ಲಿ ಒಟ್ಟು 182 ಗ್ರಾಂ ವಿವಿಧ ರೀತಿಯ ಚಿನ್ನಾಭರಣ, ಒಟ್ಟು 1800 ಗ್ರಾಂ ಬೆಳ್ಳಿ ಪದಾರ್ಥಗಳು ಹಾಗೂ 8.60 ಲಕ್ಷ ರೂ. ನಗದು ಕಳ್ಳತನವಾಗಿರುವ ಸಂಬಂಧ ಕೆಆರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಳೇ ಸಂತೆಪೇಟೆಯಲ್ಲಿ ಕೃಷಿ ಉಪಕರಣ ಮಳಿಗೆ ಹೊಂದಿರುವ ಲಡಾರಾಮ್ ಮಾಲಿ ಎಂಬುವರ ಮನೆಯಲ್ಲಿ ಈ ಕಳ್ಳತನ ನಡೆದಿದೆ. ಏ.10ರಂದು ಪತ್ನಿಯೊಂದಿಗೆ ರಾಜಸ್ಥಾನಕ್ಕೆ ಹೋಗಿದ್ದೆ. ಮನೆಯಲ್ಲಿ ನನ್ನ ಇಬ್ಬರು ಮಕ್ಕಳು ಹಾಗೂ ನಮ್ಮ ಮಳಿಗೆಯಲ್ಲಿ ಕೆಲಸ ಮಾಡುವ ಮಹಾವೀರ ಎಂಬಾತ ಇದ್ದರು. ಮೇ 21ರಂದು ನಾವು ಮೈಸೂರಿಗೆ ಮರಳಿದ್ದರೂ ಬೀರುವನ್ನು ತೆಗೆದು ನೋಡಿರಲಿಲ್ಲ. ಜೂ.14ರಂದು ವ್ಯಾಪಾರ ವಹಿವಾಟು ಸಂಬಂಧ ಹಣ ತೆಗೆದುಕೊಳ್ಳಲು ಬೀರು ತೆಗೆದು ನೋಡಿದಾಗ, ಸದರಿ ನಗದು, ಚಿನ್ನಾಭರಣ ಮತ್ತು ಬೆಳ್ಳಿ ಪದಾರ್ಥಗಳು ಇರಲಿಲ್ಲ. ನಮ್ಮ ಮಳಿಗೆಯಲ್ಲಿ ಕೆಲಸ ಮಾಡುವ ಮಹಾವೀರ ಎಂಬಾತನ ಬಗ್ಗೆ ಅನುಮಾನ ಇದೆ ಎಂದು ಆರೋಪಿಸಿ ಲಡಾರಾಮ್ ಮಾಲಿ ನೀಡಿದ ದೂರಿನನ್ವಯ ಜೂ.19ರಂದು ಎಫ್‌ಐಆರ್ ದಾಖಲಾಗಿದೆ.

ಮೈಸೂರಲ್ಲಿ ಅವೈಜ್ಞಾನಿಕ ಸಿಗ್ನಲ್ ಲೈಟುಗಳಿಗೆ ಸಾರ್ವಜನಿಕರ ಹಣ ದುರುಪಯೋಗ

ಗೃಹ ಸಚಿವ ಪ್ರಿಯಾಂಕ್ ಖರ್ಗೆಗೆ ಅ.ಮ.ಭಾಸ್ಕರ್ ಪತ್ರ



ಮೈಸೂರು, ಜೂ.20(ಜಿಎ)–ಮೈಸೂರಿನಲ್ಲಿ ಅವೈಜ್ಞಾನಿಕ ಸಿಗ್ನಲ್‌ಗಳಿಗೆ ಸಾರ್ವಜನಿಕರ ತೆರಿಗೆ ಹಣ ದುರುಪಯೋಗ ಆಗುತ್ತಿದೆ ಎಂದು ಆರೋಪಿಸಿ ಗೃಹ ಸಚಿವ ಪ್ರಿಯಾಂಕ್ ಖರ್ಗೆಗೆ ಮೈಸೂರಿನ ಹಿರಿಯ ವಕೀಲ ಅ.ಮ ಭಾಸ್ಕರ್ ಪತ್ರ ಬರೆದಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಕೀಲ ಅ.ಮ ಭಾಸ್ಕರ್ ಮಾತನಾಡಿ, ನಗರದಾದ್ಯಂತ ಹೊಸದಾಗಿ ಅಳವಡಿಕೆ ಮಾಡಿರುವ ಸಿಗ್ನಲ್‌ಗಳಿಗೆ ಬರೋಬ್ಬರಿ 8,25,18,487 ರೂ. ದುರುಪಯೋಗ ಆಗಿದೆ. ನಗರದಲ್ಲಿ ಭಾರತೀಯ ರಸ್ತೆ ಕಾಂಗ್ರೆಸ್ ಮಾರ್ಗಸೂಚಿ ಪಾಲನೆ ಮಾಡದೇ ಅವೈಜ್ಞಾನಿಕವಾಗಿ ಸಿಗ್ನಲ್‌ಗಳನ್ನು ಅಳವಡಿಕೆ ಮಾಡಲಾಗಿದೆ ಎಂದು ಆರೋಪಿಸಿದರು.

ಹೊಸದಾಗಿ ಸಿಗ್ನಲ್‌ಗಳನ್ನು ಅಳವಡಿಕೆ ಮಾಡಿ ಟ್ರಾಫಿಕ್ ಕಡಿಮೆ ಆಗಿದೆ ಅಂತಾ ಸಂಬಂಧಪಟ್ಟ ಇಲಾಖೆ ಅಳವಡಿಕೆ ಮುನ್ನ ಮತ್ತು ನಂತರದ ಫೋಟೋ ಹಾಕಿ ಪ್ರಚಾರ ಮಾಡುತ್ತಿದೆ. ಆದರೆ ಹೊಸ ಸಿಗ್ನಲ್‌ಗಳಿಂದ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿದೆ ಎಂದರು.

ಆರ್‌ಟಿಐ ಕಾಯ್ದೆ ಅಡಿಯಲ್ಲಿ ಪಡೆದ ಮಾಹಿತಿ ಪ್ರಕಾರ ಈ ಸಿಗ್ನಲ್‌ಗಳು ವೈಜ್ಞಾನಿಕ ಎಂಬ ಬಗ್ಗೆ ಎಲ್ಲಿಯೂ ದಾಖಲೆ ಇಲ್ಲ. ಈ ಯೋಜನೆಯಲ್ಲಿ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿರುವ ಅನುಮಾನ ಇದೆ. ಕೂಡಲೇ ಈ ವಿಚಾರವಾಗಿ ಉನ್ನತ ಮಟ್ಟದ ಸ್ವತಂತ್ರ ತಾಂತ್ರಿಕ ತನಿಖೆ ನಡೆಸಬೇಕು.

ಈ ಸಂಬಂಧ ಗೃಹಸಚಿವರಿಗೆ ಪತ್ರ ಬರೆದಿರುವ ಅವರು, ಮೈಸೂರು ನಗರದಲ್ಲಿ ರೂ. 8,25,18,487 ರೂ. ವೆಚ್ಚದ ಅಡಾಪ್ಟಿವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್ ಯೋಜನೆ ಅನುಷ್ಠಾನದಲ್ಲಿ ಸಾರ್ವಜನಿಕರ ತೆರಿಗೆ ಹಣದ ದುರುಪಯೋಗ ಹಾಗೂ ಭಾರತೀಯ ರಸ್ತೆ ಕಾಂಗ್ರೆಸ್ ಮಾರ್ಗಸೂಚಿಗಳನ್ನು ಪಾಲಿಸದೇ ಹಾಗೂ ಯಾವುದೇ ವೈಜ್ಞಾನಿಕ ವರದಿಯಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಟ್ರಾಫಿಕ್ ಸಿಗ್ನಲ್‌ಗಳ ಕುರಿತು ಉನ್ನತ ಮಟ್ಟದ ತನಿಖೆ ನಡೆಸಿ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜೂ. 20– ಬೆಂಗಳೂರು ಬಸವ ಅಕ್ಕೂ ಅಕಾಡೆಮಿ ವತಿಯಿಂದ ಜೂ.27ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಲಕ್ಷ್ಮೀಪುರಂನ ಸಿ.ಕೆ.ಸಿ. ಕಾನ್ವೆಂಟ್ ಎದುರು ಇರುವ ಪಂಚವಟಿ ಹೋಟೆಲ್‌ನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 99452 92629, 9741729288 ಸಂಪರ್ಕಿಸಬಹುದು.

ನಾಲ್ವಡಿ ಅವರ 142ನೇ ಜಯಂತ್ಯೋತ್ಸವ ಅಂಗವಾಗಿ ನಾಳೆ ರಸಮಂಜರಿ: ಸಾಧಕರಿಗೆ ಸನ್ಮಾನ

ಮೈಸೂರು, ಜೂ.20(ಜಿಎ)–ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 142ನೇ ಜಯಂತ್ಯೋತ್ಸವದ ಅಂಗವಾಗಿ ರಸಮಂಜರಿ ಕಾರ್ಯಕ್ರಮ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಪಾತಿ ಫೌಂಡೇಷನ್ ವತಿಯಿಂದ ಜೂನ್ 22ರಂದು ಸಂಜೆ 5 ಗಂಟೆಗೆ ನಾದಬ್ರಹ್ಮ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಪಾರ್ಥ ಸಾರಥಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಕುಂದೂರು ಮಠದ ಶ್ರೀ ಶರತ್ ಚಂದ್ರ ಸ್ವಾಮಿ, ಆರ್‌ಎಸ್‌ಎಸ್‌ನ ವೆಂಕಟರಾಮ್ ಜಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಮಾಜ ಸೇವಕ ರಘುರಾಂ ವಾಜಪೇಯಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮತ್ತಿತರರು ಆಗಮಿಸಲಿದ್ದಾರೆ.

ವಿವಿಧ ಕ್ಷೇತ್ರದ ಸಾಧಕರಾದ ಯೋಗ ಕ್ಷೇತ್ರದ ಡಾ.ಚಂದ್ರಶೇಖರ್, ಯೋಗ ಪ್ರಕಾಶ್, ಸೀಮಾ, ಎಸ್.ವಿ.ವೆಂಕಟೇಶಯ್ಯ, ಕ್ರೀಡಾ ಕ್ಷೇತ್ರದ ಡಾ.ಪಿ.ಎಂ. ಗಣೇಶ್‌ಕುಮಾರ್, ವೈದ್ಯಕೀಯ ಡಾ.ಕಾವ್ಯ, ಧಾರ್ಮಿಕ ಕ್ಷೇತ್ರದ ಕೆ.ಎನ್. ಸುರೇಶ್ ಹಾಗೂ ನಿರೂಪಣೆ ವಿಭಾಗದಿಂದ ಸುಮಾ ರಾಜ್‌ಕುಮಾರ್ ಅವರನ್ನು ಅಭಿನಂದಿಸಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೃಷ್ಣಮೂರ್ತಿ, ಮಹದೇವಪ್ಪ, ಜಯಪ್ಪ ಚಿದಾನಂದ ಶ್ರೀನಿವಾಸ್, ಗೋಲ್ಡನ್ ಸುರೇಶ್, ಬಸವರಾಜು, ಕುಮಾರ್ ಆರಾಧ್ಯ ಉಪಸ್ಥಿತರಿದ್ದರು.

ಜೂ.23ಕ್ಕೆ ಶ್ರೀ ದುರ್ಗಾ ಸಪ್ತಶತೀ ಪಾರಾಯಣ, ಚಂಡಿಕಾ ಮಹಾಯಾಗ

ಮೈಸೂರು, ಜೂ.20 (ಜಿಎ)– ಶ್ರೀ ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ ಲೋಕ ಕಲ್ಯಾಣಾರ್ಥವಾಗಿ ಶ್ರೀ ದುರ್ಗಾ ಸಪ್ತಶತೀ ಪಾರಾಯಣ ಹಾಗೂ ಚಂಡಿಕಾ ಮಹಾಯಾಗವನ್ನು ಜೂ.23ರಂದು ಮೈಸೂರಿನ ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿ ಏರ್ಪಡಿಸಲಾಗಿದೆ ಎಂದು ಟ್ರಸ್ಟ್‌ನ ನಾಗಭೂಷಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 7ಕ್ಕೆ ಚಂಡಿಕಾ ಮಹಾಯಾಗ ಆರಂಭವಾಗಲಿದ್ದು, ಸುಹಾಸಿನಿಯರಿಂದ ಕುಂಕುಮಾರ್ಚನೆ ಸೇವೆ, ವಿವಿಧ ಭಜನಾ ಮಂಡಳಿಗಳಿಂದ ಸಾಮೂಹಿಕ ಭಜನಾ ಕಾರ್ಯಕ್ರಮದ ಬಳಿಕ ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ ಹಾಗೂ ಮಹಾಪ್ರಸಾದ ವಿನಿಯೋಗ ಜರುಗಲಿದೆ ಎಂದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಶ್ರೀ ಡಾ.ಭಾಷ್ಯಂ ಸ್ವಾಮೀಜಿ, ರಾಮಕೃಷ್ಣ ಮಠದ ಶ್ರೀ ಸ್ವಾಮಿ ಮುಕ್ತಿದಾನಂದಜೀ ಸಾನಿಧ್ಯ ವಹಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಚಂಡಿಕಾ ಮಹಾಯಾಗದ ಹಿನ್ನೆಲೆಯಲ್ಲಿ ಜೂ.22ರಂದು ಸಂಜೆ 5ಕ್ಕೆ ದೇವತಾ ಪ್ರಾರ್ಥನೆ, ಗಣಪತಿ ಪೂಜೆ, ಪುಣ್ಯಾಹ ವಾಚನ, ಋತ್ವಿಗ್ವರ್ಣನ, ಕಲಶ ಸ್ಥಾಪನೆ, ಶ್ರೀ ದುರ್ಗಾ ಸಪ್ತಶತೀ ಪಾರಾಯಣ, ಕಲಶ ಪೂಜೆ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಲಿವೆ. ಸುದ್ದಿಗೋಷ್ಠಿಯಲ್ಲಿ ಮಾದೇಶ್, ರವಿ, ವೆಂಕಟೇಶ್, ಸೂರ್ಯನಾರಾಯಣ ಭಟ್, ಸುಬ್ಬರಾವ್, ಪುಟ್ಟಸ್ವಾಮಿ ಉಪಸ್ಥಿತರಿದ್ದರು.

ನಿಧನ

ಸಾಜೀದಾ ಬೇಗಂ

ಮೈಸೂರು, ಜೂ. 20–ಮೈಸೂರಿನ ಲಷ್ಕರ್ ಮೊಹಲ್ಲಾದ ಸಾಡೇ ರಸ್ತೆ ನಿವಾಸಿ ಹಾಗೂ ಬಂಬೂ ಬಜಾರ್‌ನ ಮೆ|| ಜನತಾ ಸಾ ಮಿಲ್ ಮಾಲೀಕರಾದ ಲೇಟ್ ಫೈರೋಜ್ ಅಹಮದ್ ಅವರ ಪತ್ನಿ ಸಾಜೀದಾ ಬೇಗಂ ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಓರ್ವ ಪುತ್ರಿ, ಹಜರತ್ ಮೌಲಾನಾ ಖಾರಿ ಅಬ್ದುಲ್ ಸಲಾಂ ರಜ್ವಿ ಖತೀಬ್ ಸೇರಿದಂತೆ 9 ಜನ ಪುತ್ರರು ಮತ್ತು ಅಪಾರ ಬಂಧುಗಳು, ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಜೂ. 21) ಭಾನುವಾರ ಬೆಳಗ್ಗೆ 11 ಗಂಟೆಗೆ ದರ್ಗಾಹಿ ಮಸೀದಿ, ಸಾಡೇ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು ಇಲ್ಲಿ ನಮಾಜ್–ಎ–ಜನಾಜಾ (ಅಂತ್ಯಕ್ರಿಯೆಯ ಪ್ರಾರ್ಥನೆ) ನೆರವೇರಲಿದೆ. ನಂತರ ಮೈಸೂರಿನ ಮಂಡಿ ಮೊಹಲ್ಲಾದ ಮಸ್ಜಿದ್ ರುದ್ರಭೂಮಿ ಗೇಟ್ ನಂ.2 ರಲ್ಲಿ ಮೃತರ ಅಂತ್ಯ ಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.06.2026 ಭಾನುವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಕಾಮಾಕ್ಷಿ ಆಸ್ಪತ್ರೆ** : 12ನೇ ಅಂತರರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಯೋಗಾಮೃತವ್ ಕಾರ್ಯಕ್ರಮ, ಸ್ಥಳ: ಕಾಮಾಕ್ಷಿ ಆಸ್ಪತ್ರೆ, ಜೆ.ಪಿ.ನಗರ, ಬೆಳಗ್ಗೆ 7 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್, ಕುತ್ತಿಗೆ ನೋವು ಹಾಗೂ ಬೆನ್ನು ನೋವಿಗೆ ತಪಾಸಣಾ ಚಿಕಿತ್ಸಾ ಶಿಬಿರ, ಸಯಾಟೀಕ್/ಗೃಧ್ರಸಿ ರೋಗ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ), ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ**: ರುಮಾಟಾಯ್ಡ್ ಅರ್ಥ್ರೈಟಿಸ್ (ಆಮವಾತ), ತುರಿಕೆ, ಮಕ್ಕಳಲ್ಲಿ ಕಂಡುಬರುವ ಕೆಮ್ಮು, ಜ್ವರ, ಅಸ್ತಮಾ ಸಮಸ್ಯೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಮೈಸೂರು, ಬೆಳಗ್ಗೆ 9.30 ರಿಂದ.

■ **ಮೈಸೂರು ಲೇಡೀಸ್ ಅಸೋಸಿಯೇಷನ್, ಮೈಸೂರು** : ಬೆಳ್ಳಿ ಹಬ್ಬದ ಮಹೋತ್ಸವ, ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಸಮಾವೇಶ, ಉದ್ಘಾಟನೆ : ಶಾಸಕ ಹರೀಶ್‌ಗೌಡ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ. ದೇವೇಗೌಡ, ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಭಾಷಣಕಾರರು : ವಕೀಲೆ ಶ್ರೀಮತಿ ಸುಮನ, ಅಧ್ಯಕ್ಷತೆ : ಅಸೋಸಿಯೇಷನ್ ಅಧ್ಯಕ್ಷೆ ಶ್ರೀಮತಿ ಮಲ್ಲಿಗೆ ವೀರೇಶ್, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಬೆಳಗ್ಗೆ 10ಕ್ಕೆ.

■ **ದೀಪ್ತಿ ಸಾಂಸ್ಕೃತಿಕ ವೇದಿಕೆ, ರಾಮಕೃಷ್ಣನಗರ** : 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಕಾಳಿಹುಂಡಿ ಶಿವಕುಮಾರ್ ಸಂಗ್ರಹಿಸಿರುವ ಯೋಗದ ಕುರಿತಾಗಿ ಪತ್ರಿಕೆಗಳಲ್ಲಿ ಬಂದಿರುವ ಚಿತ್ರ–ಲೇಖನಗಳ ಪ್ರದರ್ಶನ, ಯೋಗ ಸಾಧಕರಿಗೆ "ದೀಪ್ತಿ ಯೋಗಸಾಧಕರು" ಪ್ರಶಸ್ತಿ ಸಮಾರಂಭ, ಉದ್ಘಾಟನೆ : ಹೆಚ್.ವಿ. ರಮೇಶ್, ಮುಖ್ಯ ಅತಿಥಿಗಳು : ಎ.ಜಿ. ದೇವರಾಜು, ಅಧ್ಯಕ್ಷತೆ : ಹಿರಿಯ ಶುಶ್ರೂಷಕ ರಾದ ಕಣ್ಣೂರು ವಿ. ಗೋವಿಂದಾಚಾರಿ, ಸನ್ಮಾನಿತರು : ಯೋಗರತ್ನ ಕೆ.ಎಸ್. ಮುಕುಂದನ್, ಉಪಸ್ಥಿತರು : ಲೇಖಕ ಕಾಳಿಹುಂಡಿ ಶಿವಕುಮಾರ್, ಸ್ಥಳ: ಸಾರ್ವಜನಿಕ ಗ್ರಂಥಾಲಯ,ನಗರ ಕೇಂದ್ರ ಗ್ರಂಥಾಲಯ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ಶ್ರೀ ಹರಿ ಡಯಾಬಿಟೀಸ್ ಫೌಂಡೇಷನ್** : ಮಧುಮೇಹವನ್ನು ಸಂಪೂರ್ಣವಾಗಿ ವಾಸಿ ಮಾಡಬಹುದೇ ಎಂಬ ವೈಜ್ಞಾನಿಕ ವಿಚಾರಧಾರೆಯನ್ನೊಳಗೊಂಡ ವಿಶೇಷ ಕೃತಿ ಮಧುಮೇಹ ಮನುಕುಲದ ಅಗೋಚರ ಶತ್ರು 9ನೇ ಮುದ್ರಣ ಕೃತಿ ಲೋಕಾರ್ಪಣೆ ಕಾರ್ಯಕ್ರಮ, ಕೃತಿ ಲೋಕಾರ್ಪಣೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೃತಿ ಕುರಿತು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪೂರ್ವಾಧ್ಯಕ್ಷ ಡಾ. ಪ್ರಧಾನ್ ಗುರುದತ್ತ, ಲೇಖಕರು : ಮಧುಮೇಹ ತಜ್ಞ ಡಾ. ವಿ. ಲಕ್ಷ್ಮೀನಾರಾಯಣ್, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ. ಚಿದಾನಂದಗೌಡ, ಉಪಕುಲಪತಿ ಡಾ. ಎಚ್.ಬಸವನಗೌಡ, ಹಿರಿಯ ಪತ್ರಕರ್ತ ರವೀಂದ್ರ ಭಟ್ಟ, ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಆರ್. ರಘು ಕೌಟಿಲ್ಯ, ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಡಾ. ಎಂ.ಜಿ.ಆರ್. ಅರಸ್, ಆರ್. ದೊಡ್ಡೇಗೌಡ, ಸ್ಥಳ: ಗಾನಭಾರತೀ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಚಾರ್ವಾಕ ಸಂಸ್ಥೆ** : ಚಾರ್ವಾಕ ರೂಪಿಸುತ್ತಿರುವ ಬೆಸುಗೆ ಕಾರ್ಯಕ್ರಮದ ಅಂಗವಾಗಿ ರಾಜ್ಯ ಮಟ್ಟದ ಒಂದು ದಿನದ ವಿಚಾರ ಸಂಕಿರಣ, ವಿಷಯ : ಡಾ. ಬಿ.ಆರ್. ಅಂಬೇಡ್ಕರ್ ಅವರ ಅಸ್ಪೃಶ್ಯರು ಆಳುವ ವರ್ಗವಾಗಬೇಕು ಎಂಬ ಕನಸನ್ನು ನನಸು ಮಾಡಲು ಎಡ–ಬಲ ಸಮುದಾಯಗಳ ಜವಾಬ್ದಾರಿಗಳು, ಉದ್ಘಾಟನೆ : ಮಾಜಿ ಸಚಿವ ಬಿ. ಸೋಮಶೇಖರ್, ಅಧ್ಯಕ್ಷತೆ : ಹಿರಿಯ ಡಿಎಸ್‌ಎಸ್ ಮುಖಂಡ ಹರಿಹರ ಆನಂದಸ್ವಾಮಿ, ಸ್ಥಳ: ಶ್ರೀರಂಗ ರಂಗಾಯಣ ಆವರಣ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಮೈಸೂರಿನ ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್** : ಬೆಳಗ್ಗೆ 11ಕ್ಕೆ 'ನೇಗಿಲೋತ್ಸವ–ಸಮ್ಮಿಲನ–ಸತ್ಸಂಗ–ಸಂಗೀತ' ವಿನೂತನ ಕಾರ್ಯಕ್ರಮ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ್‌ಗೌಡ, ಉದ್ಘಾಟನೆ : ಕಾವೇರಿ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಜಿ.ಆರ್.ಚಂದ್ರಶೇಖರ್, ಮಧ್ಯಾಹ್ನ 2 ಗಂಟೆಗೆ ಸತ್ಸಂಗ ಮತ್ತು ಸಂಗೀತ ಕಾರ್ಯಕ್ರಮ, ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರಿಂದ ಸತ್ಸಂಗ ಕಾರ್ಯಕ್ರಮ, ಸ್ಥಳ: ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣ.

■ **ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್** : ಎಐಟಿಯುಸಿ ಜಿಲ್ಲಾ ಸಮಿತಿಯ 12ನೇ ಜಿಲ್ಲಾ ಸಮ್ಮೇಳನ, ಉಪಸ್ಥಿತರು : ಉಪ ಪ್ರಧಾನ ಕಾರ್ಯದರ್ಶಿ ಹೆಚ್.ಬಿ. ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಹೆಚ್.ಆರ್. ಶೇಷಾದ್ರಿ, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11 ರಿಂದ.

■ **ಮೈಸೂರು ಕನ್ನಡ ವೇದಿಕೆ** : ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯೋತ್ಸವ, ಉದ್ಘಾಟನೆ : ಅಪರ ಜಿಲ್ಲಾಧಿಕಾರಿ ಶ್ರೀಮತಿ ಆರ್. ಐಶ್ವರ್ಯ, ಪ್ರಧಾನ ಭಾಷಣ : ಚಿಂತಕ ಪ್ರೊ. ಕೆ. ಕಾಳಚನ್ನೇಗೌಡ, ಪ್ರಶಸ್ತಿ ಪ್ರಧಾನಿಸುವವರು : ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ್ ಬಾಲದಂಡಿ, ಮುಖ್ಯ ಅತಿಥಿಗಳು : ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಡಾ. ಕೆ.ಬಿ. ಲಿಂಗರಾಜು, ಅಧ್ಯಕ್ಷತೆ : ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಉಪಸ್ಥಿತರು : ನಾಲಾಬೀದಿ ರವಿ, ಮನೋಹರ್, ಸಾಲುಂಡಿ ದೊರೆಸ್ವಾಮಿ, ಸ್ಥಳ: ಸ್ವಾತಂತ್ರ್ಯ ಉದ್ಯಾನವನ, ಬೆಳಗ್ಗೆ 11.30ಕ್ಕೆ.

■ **ಮಹರ್ಷಿ ವಾಲ್ಮೀಕಿ ಸಾಹಿತ್ಯ ಪರಿಷತ್ತು** : ವಾಲ್ಮೀಕಿ ಜನಾಂಗ : ಸಾಂಸ್ಕೃತಿಕ ಪ್ರಜ್ಞೆಗಳು ಪುಸ್ತಕ ಬಿಡುಗಡೆ ಕಾರ್ಯಕ್ರಮ, ಅಧ್ಯಕ್ಷತೆ : ಮಹರ್ಷಿ ವಾಲ್ಮೀಕಿ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ನಂಜುಂಡಸ್ವಾಮಿ, ಉದ್ಘಾಟನೆ : ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಕನ್ನಡ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಮುಖ್ಯ ಅತಿಥಿಗಳು : ಹಿರಿಯ ಪ್ರಾಧ್ಯಾಪಕ ಪ್ರೊ. ಪ್ರಶಾಂತ್ ನಾಯಕ್, ಸ್ಥಳ: ರೋಟರಿ ಕ್ಲಬ್, ಮುಡಾ ಎದುರು, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಅರುಣರಾಗ ಕ್ರಿಯೇಷನ್ಸ್** : ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಹುಟ್ಟುಹಬ್ಬದ ನೆನಪಿನಲ್ಲಿ ಮರೆಯದ ನೆನಪು–2026 ಸಂಗೀತ ಸಂಜೆ, ಅತಿಥಿಗಳು : ಚಲನಚಿತ್ರ ನಟಿ ಶ್ರೀಮತಿ ಭವ್ಯ, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ವಿ. ನಾಗರಾಜ ಬೈರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಡಾ. ಮಲ್ಲಿಕಾರ್ಜುನಸ್ವಾಮಿ, ಶ್ರೀಮತಿ ಡಾ. ರೇಖಾ ಅರುಣ್, ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೆ. ವಿಜಯಕುಮಾರ್, ಶ್ರೀನಿವಾಸ್ ಅಣ್ಣ, ಸ್ಥಳ: ಮೈಸೂರು ಬಿಲ್ಡರ್ಸ್ ಅಸೋಸಿಯೇಷನ್ ಆಡಿಟೋರಿಯಂ, ವಿಶ್ವೇಶ್ವರನಗರ, ಸಂಜೆ 4 ರಿಂದ.

■ **ಯೇಸುವಿನ ಪವಿತ್ರ ಹೃದಯ ದೇವಾಲಯ** : ದೇವಾಲಯದ ವಾರ್ಷಿಕೋತ್ಸವ, ಮೈಸೂರು ಧರ್ಮಾಧ್ಯಕ್ಷರು ಹಾಗೂ ಸಹ ಗುರುಗಳಾದ ಡಾ. ಫ್ರಾನ್ಸಿಸ್ ಸೆರಾವೊ ಎಸ್.ಜೆ. ಅವರಿಂದ ದಿವ್ಯ ಬಲಿಪೂಜೆ, ಸ್ಥಳ: ಯೇಸುವಿನ ಪವಿತ್ರ ಹೃದಯ ದೇವಾಲಯ, ಯಾದವಗಿರಿ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಮೈಸೂರಿನ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ(ಐಐಇಟಿ)** : ದಿವಂಗತ ಕಮ್ತಾನಾಥ್ ಕೃತಿ ಆಧಾರಿತ 'ಸಂಕ್ರಮಣ' ನಾಟಕ ಪ್ರದರ್ಶನ, ನಿರ್ದೇಶನ : ಅರು ಸ್ವಾತಿ ವ್ಯಾಸ್, ಸ್ಥಳ: ಹಾರ್ಡ್‌ವಿಕ್ ಶಾಲೆಯ ಐಐಇಟಿ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಎಸ್‌ಪಿಎಂ ಟ್ರಸ್ಟ್ ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್** : 17ನೇ ತಂಡದ ಇಂಟರ್‌ನ್ಯಾಷನಲ್ ಯೋಗ ಟೀಚರ್ಸ್ ಟ್ರೈನಿಂಗ್ ಕೋರ್ಸ್ ಶಿಬಿರದ ಉದ್ಘಾಟನೆ, ಉಪಸ್ಥಿತರು : ಯೋಗ ಪ್ರವೀಣ ಶಿವಪ್ರಕಾಶ್ ಗುರೂಜಿ, ಡಾ. ಆರ್. ಭಾವನಾ, ಶ್ರೀಮತಿ ಬಿ.ಕೆ. ಲಕ್ಷ್ಮಿ, ಶ್ರೀಮತಿ ಪೂರ್ಣಿಮಾ ಆಚಾರ್ಯ, ವಿಜಯಕುಮಾರ್, ಶ್ರೀಮತಿ ಯಶಸ್ವಿನಿ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಸಪ್ತಸ್ವರ ಬಳಗ ಟ್ರಸ್ಟ್, ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ, ನೃಪತುಂಗ ಕನ್ನಡ ಶಾಲೆ** : ಸಪ್ತಸ್ವರ ಬಳಗದ ಸ್ಥಾಪಕ ಅಧ್ಯಕ್ಷರಾಗಿದ್ದ ಪ್ರೊ.ಬಿ ಸೋಮಶೇಖರ್ ಸ್ಮರಣೆಯ ಸಂಗೀತ ಕಾರ್ಯಕ್ರಮ, ಪಂಡಿತ್ ರಮೇಶ್ ಕೋಲ್ಕುಂದ ಧಾರವಾಡ ಅವರಿಂದ ಗಾಯನ, ಮೈಸೂರಿನ ಪಂ.ವೀರಭದ್ರಯ್ಯ ಹಿರೇಮಠ್–ಹಾರ್ಮೋನಿಯಂ, ಪಂ.ರಮೇಶ್ ಧನೂರ್–ತಬಲ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಡಾ. ಜಿ. ಸಿದ್ದೇಶ್, ಉಪಸ್ಥಿತರು : ಕಾರ್ಯದರ್ಶಿ ಶ್ರೀಮತಿ ದಾಕ್ಷಾಯಣಿ ಸೋಮಶೇಖರ್, ವಿದ್ವಾನ್ ಪ್ರೊ. ಎಸ್. ಶಿವಾಜಿ ಜೋಯಿಸ್, ಸ್ಥಳ: ನೃಪತುಂಗ ಕನ್ನಡ ಶಾಲೆಯ ರಮಾ ಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ** : ಶ್ರೀಮನ್ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಕಾರ್ಯಕ್ರಮ, ಉದ್ಘಾಟನೆ : ಆದಿತ್ಯ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್. ಚಂದ್ರಶೇಖರ್, ವಿದ್ವಾನ್ ಎನ್.ಆರ್. ಪ್ರಶಾಂತ್ ಅವರಿಂದ ಗಾಯನ, ವಿದುಷಿ ವೀಣಾ ಸುರೇಶ್–ಪಿಟೀಲು, ವಿದ್ವಾನ್ ತುಮಕೂರು ರವಿಶಂಕರ್–ಮೃದಂಗ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6ಕ್ಕೆ.

■ **ರಂಗಾಯಣ** : ಶಿವಮೊಗ್ಗ ರಂಗಾಯಣದ ಕಲಾವಿದರಿಂದ ಸ್ವಾತಂತ್ರ್ಯದ ಓಟ ನಾಟಕ ಪ್ರದರ್ಶನ, ನಿರ್ದೇಶನ : ನಟರಾಜ್ ಹೊನ್ನವಳ್ಳಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಅಷ್ಟಾಂಗಯೋಗ ವಿಜ್ಞಾನ ಮಂದಿರಂ** : ಡಾ. ಕೆ.ಎಲ್. ಶಂಕರನಾರಾಯಣ ಜೋಯಿಸ್ ಅವರಿಂದ ಕಾವ್ಯರತ್ನ ಅಭಿಜ್ಞಾನ ಶಾಕುಂತಲ–2 ಕುರಿತು ಪ್ರವಚನ, ಸ್ಥಳ: ಅಷ್ಟಾಂಗಯೋಗ ವಿಜ್ಞಾನ ಮಂದಿರಂ, ಲಕ್ಷ್ಮೀಪುರಂ, ಸಂಜೆ 6.45ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ : 6.10 ಗೀತಾರಾಧನ, 6.30 ಗೌರವಾನ್ವಿತ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರ ಉಪಸ್ಥಿತಿಯಲ್ಲಿ, ಪಶ್ಚಿಮ ಬಂಗಾಳದ ಕೊಲ್ಕತ್ತಾದ ರೆಡ್ ರೋಡ್ ಮೈದಾನದಲ್ಲಿ ನಡೆಯುವ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ನೇರ ಪ್ರಸಾರ, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ರೂಪಕ 'ನಾದಯೋಗ', 8.45 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಈ ಕುರಿತು ಸಂವಾದ. ಭಾಗವಹಿಸುತ್ತಾರೆ – ಮೈಸೂರಿನ ತಜ್ಞ ಆಯುರ್ವೇದ ವೈದ್ಯರು ಹಾಗೂ ಯೋಗ ಚಿಕಿತ್ಸಕರಾದ ಡಾ. ಎ.ಎಸ್. ಚಂದ್ರಶೇಖರ್ ಹಾಗೂ ಡಾ. ಬಿ ಗುರುಬಸವರಾಜ, ಪ್ರಸ್ತುತಿ– ಎನ್ ಕೇಶವಮೂರ್ತಿ, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ–ನೇರ ಫೋನ್–ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಯೋಗಪಟು ವೇದಿಕಾ ಮಾನ್ಯ ಶಿವಂ ಹಾಗೂ ವಿಶ್ವ ಸಂಗೀತ ದಿನದ ಪ್ರಯುಕ್ತ ಉದಯೋನ್ಮುಖ ಹಾಡುಗಾರ್ತಿ ಸಹನಾ.ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್ ಬಿ., 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, ಯೋಗದಿಂದ ಆರೋಗ್ಯಕರ ಜೀವನ– ಯೋಗ ತಜ್ಞರಾದ ಡಾ ನವ್ಯಾ ಆರಾಧ್ಯ ಅವರೊಂದಿಗೆ ಸಂದರ್ಶನ, 12.35 ಭಕ್ತಿಗೀತೆಗಳು :ಅದಿತಿ, 12.45 ಜನಪದ ಸಂಗೀತ – ತಂಬೂರಿ ಮಾದಪ್ಪ ಮತ್ತು ಸಂಗಡಿಗರಿಂದ ಮಾದೇಶ್ವರನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ– ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ಪ್ರಚೇತ್ ಕುಲಕರ್ಣಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಕಾಸಿದ್ರೆ ಕೈಲಾಸ, 3.40 ಸಿರಿಗನ್ನಡಂ ಗೆಲ್ಗೆ. ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ರೇಣುಕಾ ಮಹಾತ್ಮೆ, ಪ್ರಸ್ತುತಿ–ನೀಲಾವರ ಲಕ್ಷ್ಮೀ ನಾರಾಯಣರಾವ್ ಹಾಗೂ ತಂಡದವರು, 4.45 ಚಿತ್ರಗೀತೆಗಳು, 6.51 Running commentary of ICC Women's T20 World Cup Cricket match between India and South Africa being played at Old Trafford Cricket Ground, Manchester.


ಶ್ರೀಮತಿ ಹೇಮ ಮತ್ತು ಶ್ರೀ ಬಸಪ್ಪ
ರವರ 25ನೇ ವರ್ಷದ ವಿವಾಹ ವಾರ್ಷಿಕೋತ್ಸವದ
ಹಾರ್ದಿಕ ಶುಭಾಶಯಗಳು
ಶ್ರೀಮತಿ ಶ್ರುತಿ ಮತ್ತು ಈ. ಎಂ.ರಾಜೇಶ್
ಶ್ರೀಮತಿ ತನುಜ ಮತ್ತು ಎನ್. ಯೋಗಾನಂದ
ಶ್ರೀಮತಿ ಪೂರ್ಣದರ್ಶಿನಿ ಮತ್ತು ಅಭಿಷೇಕ್
ಶ್ರೀಮತಿ ಭೂಮಿಕಾ ಮತ್ತು ಶ್ರೀ ಅನಿಲ್
ಶ್ರೀಮತಿ ವಿನುತಾ ಮತ್ತು ಸಂತೋಷ್
ಶ್ರೀಮತಿ ರಶ್ಮಿತಾ ಮತ್ತು ನಿಶ್ಚಿತ್.ಎಂ
ಶುಭಕೋರುವವರು
ಶ್ರೀಮತಿ ನಿಂಗಮ್ಮ ಮತ್ತು ಲೇಟ್ ಮಹಾದೇವೇಗೌಡರ
ಕುಟುಂಬ ಈರೇಗೌಡನಹುಂಡಿ
ಶ್ರೀಮತಿ ಭಾಗ್ಯಮ್ಮ ಮತ್ತು ಲೇಟ್ ನರಸಿಂಹೇಗೌಡರ
ಕುಟುಂಬ. ಪಡುವಾರಹಳ್ಳಿ


HAPPY BIRTHDAY
PRATHAP SIMHA
ಮೈಸೂರು-ಕೊಡಗು ಕ್ಷೇತ್ರದ ಮಾಜಿ ಸಂಸದರಾದ
ಶ್ರೀ ಪ್ರತಾಪ ಸಿಂಹ
ರವರಿಗೆ
ಹುಟ್ಟು ಹಬ್ಬದ
ಶುಭಾಶಯಗಳು
ಶುಭಕೋರುವವರು
ಜಿ.ವಿ.ಪ್ರಶಾಂತ್
ಉದ್ಯಮಿ


ಅಭಿವೃದ್ಧಿಯ ಹೊಸ ಭರವಸೆ, ಯುವ ಚೈತನ್ಯ , ಸಮಾಜಮುಖೀ
ರಾಜಕಾರಣಿ, ನುಡಿದಂತೆ ನಡೆದು ನಾಯಕ ಸಮುದಾಯದ ಪರ್ಯಾಯ ಪದವಾದ
"ಪರಿವಾರ"ವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಪ್ರಮುಖ ಪಾತ್ರವಹಿಸಿದ
ಸನ್ಮಾನ್ಯ ಶ್ರೀ
ಪ್ರತಾಪ್ ಸಿಂಹ
ಅವರಿಗೆ ಜನುಮದಿನದ
ಶುಭಾಶಯಗಳು
ಶುಭಕೋರುವವರು :
ನಾಯಕ ಸಮುದಾಯ
ಮುಖಂಡರು ಮೈಸೂರು
ಟೆನ್ನಿಸ್ ಗೋಪಿ


ಮಾಜಿ ಸಂಸದರಾದ
ಪ್ರತಾಪ್ ಸಿಂಹ ಅಣ್ಣ
ರವರಿಗೆ
ಜನ್ಮದಿನದ ಶುಭಾಶಯಗಳು
ನಾಣಿಗೌಡ
ನರಸಿಂಹರಾಜ ಕ್ಷೇತ್ರ ವಾರ್ಡ್ ನಂ-15
ಬಿ.ಜೆ.ಪಿ. ಯುವ ಮುಖಂಡರು
ಪುನೀತ್ ವಾರ್ಡ್-16
ನರಸಿಂಹರಾಜ ಕ್ಷೇತ್ರ
ಶ್ರೀನಿವಾಸ್ ವಾರ್ಡ್-18
ಚಾಮರಾಜ ಕ್ಷೇತ್ರ
ಜಾಹಿದ್

ನಕ್ಕರೆ ಅದೇ ಸ್ವರ್ಗ

ಸಂದರ್ಶಕ : 20 ವರ್ಷ ವಯಸ್ಸಿನ ನೀನು 30 ವರ್ಷ ಅನುಭವ ಎಂದು ಹಾಕಿದ್ದೀಯಲ್ಲ?

ಅಭ್ಯರ್ಥಿ : ಓವರ್ ಟೈಮ್ ಮಾಡುತ್ತಿದ್ದೆ.

ಮೈಸೂರು ಮಿತ್ರ

ಭಾನುವಾರ, ಜೂನ್ 21, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸಂಬಂಧಗಳು ಜೀವಕ್ಕಿಂತ ಮುಖ್ಯ. ಸಂಬಂಧಗಳಲ್ಲಿ ಜೀವವಿರುವುದು ಅದಕ್ಕಿಂತ ಮುಖ್ಯ. – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಹಂಪಿಗೆ ಹೋಗುವುದಕ್ಕಿಂತ ಕೊಂಪೆಯಲ್ಲಿರುವುದೇ ಲೇಸು.

ನಿಮ್ಮ ಪತ್ರಗಳು

ಗೆಜ್ಜಗಳ್ಳಿ ಗ್ರಾಮದಲ್ಲಿ ತ್ಯಾಜ್ಯ ವಸ್ತು ವಿಲೇವಾರಿ ಸಮಸ್ಯೆ ಬಗೆಹರಿಸಿ

ಮಾನ್ಯರೆ,

ಮೈಸೂರಿನ ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಗೆಜ್ಜಗಳ್ಳಿಯಲ್ಲಿ ಸುಮಾರು ಹತ್ತು ವರ್ಷಗಳಿಂದ ಕೃತಿಕಾ ಲೇಔಟ್, ಪುನರ್ವಸು ಬಡಾವಣೆ, ಸ್ವಸ್ತಿಕ್ ಬಡಾವಣೆಗಳಲ್ಲಿ ನೂರಕ್ಕಿಂತ ಹೆಚ್ಚು ಮನೆಗಳು ನಿರ್ಮಾಣವಾಗಿವೆ. ಇಲ್ಲಿನ ನಿವಾಸಿಗಳು ಕಡಕೊಳ ಪಟ್ಟಣ ಪಂಚಾಯಿತಿಗೆ ತಮ್ಮ ಆಸ್ತಿ ತೆರಿಗೆ ಪಾವತಿಸುತ್ತಿದ್ದಾರೆ. ಈ ಮನೆಗಳ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ವಿಲೇವಾರಿ ಮಾಡುವ ಜವಾಬ್ದಾರಿ ಕಡಕೊಳ ಪಟ್ಟಣ ಪಂಚಾಯತಿಗೆ ಸೇರಿದ್ದಾಗಿದೆ.

ಈ ಸಂಬಂಧ ಗೆಜ್ಜಗಳ್ಳಿಯ ನಿವಾಸಿಗಳಾದ ನಾವು 6 ತಿಂಗಳ ಹಿಂದೆ ನಮ್ಮ ಮನೆಗಳ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವಂತೆ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳು, ಆರೋಗ್ಯ ಪರಿವೀಕ್ಷಕರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ಪಟ್ಟಣ ಪಂಚಾಯಿತಿಯಲ್ಲಿ ವಾಹನಗಳ ಕೊರತೆ ಇದೆ ಎಂದು ಉತ್ತರ ನೀಡುತ್ತಿದ್ದಾರೆ. ಇದರಿಂದ ಗೆಜ್ಜಗಳ್ಳಿಯ ನಿವಾಸಿಗಳು ತಮ್ಮ ಮನೆಗಳ ತ್ಯಾಜ್ಯವನ್ನು ಅನಿವಾರ್ಯವಾಗಿ ರಸ್ತೆ ಬದಿಯಲ್ಲಿ ಬಿಸಾಡುವ ಪರಿಸ್ಥಿತಿ ಉಂಟಾಗಿದೆ. ಇದರಿಂದ ನಿವಾಸಿಗಳಿಗೆ ಆರೋಗ್ಯ ಸಮಸ್ಯೆಗಳು ಉದ್ಭವವಾಗುತ್ತಿವೆ. ದುರ್ವಾಸನೆಯಿಂದ ಬೀದಿಗಳಲ್ಲಿ ಓಡಾಡಲು ಆಗುತ್ತಿಲ್ಲ. ಆದ್ದರಿಂದ ಗೆಜ್ಜಗಳ್ಳಿಯ ನಿವಾಸಿಗಳ ಆರೋಗ್ಯದ ಹಿತದೃಷ್ಟಿಯಿಂದ ಪಟ್ಟಣ ಪಂಚಾಯಿತಿಯವರು ಕನಿಷ್ಠ ಎರಡು ದಿನಗಳಿಗೆ ಒಮ್ಮೆ ಮನೆ ಮನೆಗಳಿಂದ ತ್ಯಾಜ್ಯ ವಸ್ತುಗಳನ್ನು ವಾಹನಗಳ ಮೂಲಕ ಸಂಗ್ರಹಿಸಿ ವಿಲೇವಾರಿ ಮಾಡುವಂತೆ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕು ಎಂದು ಇಲ್ಲಿನ ನಿವಾಸಿಗಳ ಪರವಾಗಿ ಮನವಿ ಮಾಡುತ್ತೇನೆ.

– ಬಸವರಾಜು.ಕೆ., ಗೆಜ್ಜಗಳ್ಳಿ

ದಡ್ಡ ಮತದಾರರು!!

ಮಾನ್ಯರೆ,

ಜೂನ್ 18 ರ ಗುರುವಾರ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಶಾಸಕರಿಂದ ಅಡ್ಡಮತದಾನವಾಗಿರುವುದು ಕಂಡುಬಂದಿದೆ. ಅಡ್ಡ ಮತದಾನ ಮಾಡಿದ ಶಾಸಕರನ್ನು ಅಡ್ಡ ಮತದಾರರು ಎಂದು ಕರೆಯಲಾಗುತ್ತಿದೆ. ಅಡ್ಡ ಮತದಾನ ಮಾಡಿದ ಶಾಸಕರನ್ನು ಅಡ್ಡಮತದಾರರು ಎನ್ನುವುದಾದರೆ ಈ ಶಾಸಕರನ್ನು ಚುನಾಯಿಸಿದ ಮತದಾರರನ್ನು ದಡ್ಡಮತದಾರರು ಎನ್ನಬಹುದಲ್ಲವೆ?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಬ್ಯಾಂಕ್‌ಗಳು ಆಧುನಿಕ ತಂತ್ರಜ್ಞಾನ ಬಳಸಲಿ

ಮಾನ್ಯರೆ,

ಕಳೆದ ಆರ್ಥಿಕ ವರ್ಷದಲ್ಲಿ (2025–26), ನಮ್ಮ ಭಾರತೀಯ ಬ್ಯಾಂಕ್‌ಗಳು, ಕೇವಲ ಪೆನ್ನು, ಪೇಪರ್, ಸ್ಟೇಷನರಿ ವಸ್ತುಗಳು ಮತ್ತು ಮುದ್ರಣಕ್ಕಾಗಿ ರೂ. 3,870 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿವೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಅಚ್ಚರಿಯ ಸಂಗತಿ ಎಂದರೆ, ಭಾರತೀಯ ಸ್ಟೇಟ್ ಬ್ಯಾಂಕ್ ಒಂದೇ ಸುಮಾರು ಒಂದು ಸಾವಿರ ಕೋಟಿ ಹಣವನ್ನು ಸ್ಟೇಷನರಿಗಾಗಿ ಖರ್ಚು ಮಾಡಿದೆ. ಬ್ಯಾಂಕ್‌ನಲ್ಲಿ ಗ್ರಾಹಕರು ಚೆಕ್ ಬುಕ್ ಪಡೆದಾಗ ಇಂತಿಷ್ಟು ಹಣವನ್ನು ಗ್ರಾಹಕರಿಂದಲೇ ವಸೂಲಿ ಮಾಡುತ್ತಿವೆ. ಗ್ರಾಹಕರ ಎಸ್‌ಬಿ ಖಾತೆಯಿಂದ ಈ ಹಣ ಡೆಬಿಟ್ ಆಗುವುದರಿಂದ ಬಹುಪಾಲು ಗ್ರಾಹಕರು, ಚೆಕ್ ಬುಕ್ ಅನ್ನು ಬ್ಯಾಂಕ್‌ಗಳು ಫ್ರೀ ನೀಡುತ್ತಿವೆ ಎಂದುಕೊಂಡಿದ್ದಾರೆ. ಕೇಂದ್ರ ಸರ್ಕಾರವು ದೇಶ ಎಲ್ಲ ಕಚೇರಿಗಳಲ್ಲಿ ಕಾಗದ ರಹಿತ ಆಡಳಿತ ನಡೆಸಲು ಮುಂದಾಗಿದೆ. ಆದರೆ, ಭಾರತೀಯ ಬ್ಯಾಂಕ್‌ಗಳು ಇನ್ನೂ ಓಬಿರಾಯನ ಕಾಲದಲ್ಲೇ ಇವೆ. ಇವು ಇನ್ನು ಮುಂದಾದರೂ ಆಧುನಿಕ ತಂತ್ರಜ್ಞಾನ ಬಳಸಿಕೊಂಡು, ಖರ್ಚು ಕಡಿಮೆ ಮಾಡಿ, ಗ್ರಾಹಕರಿಗೆ ಉತ್ತಮ ಸೇವೆ ನೀಡುವಂತಾಗಬೇಕು. –ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಸರ್ಕಾರಕ್ಕೆ ಹೀಗೊಂದು ಮನವಿ

ಮಾನ್ಯರೆ,

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸದ್ಯ, ಪೊಲೀಸ್ ಇಲಾಖೆಯ ಮೂರು ಸಾವಿರಕ್ಕೂ ಅಧಿಕ ಹುದ್ದೆಗಳ ನೇಮಕಾತಿ ಅಧಿಸೂಚನೆ ಹೊರಡಿಸಿ ಅಂದೇ ಲಿಖಿತ ಪರೀಕ್ಷಾ ದಿನಾಂಕ ಕೂಡ ನಿಗದಿ ಮಾಡಿದೆ. ಹಲವಾರು ವರ್ಷಗಳಿಂದ ಹುದ್ದೆ ಬಯಸಿ ಅಧ್ಯಯನದಲ್ಲಿ ತೊಡಗಿರುವ ಆಕಾಂಕ್ಷಿಗಳಿಗೆ ಖಂಡಿತ ತೊಂದರೆ ಆಗದು. ಆದರೆ, ಖಾಸಗಿ ಹುದ್ದೆಗಳಲ್ಲಿ ಇನ್ನಿತರ ಕಡೆ ಅರೆ ಕಾಲಿಕ ಕೆಲಸ ನಿರ್ವಹಿಸುತ್ತಾ ತಮ್ಮ ಕುಟುಂಬದ ಜೀವನಕ್ಕೂ ಸಹಾಯ ಮಾಡುತ್ತಾ ಇತ್ತ, ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತಯಾರಿ ನಡೆಸುವ ಅಸಂಖ್ಯಾತ ಅಭ್ಯರ್ಥಿಗಳಿಗೆ ಸಮಯಾವಕಾಶ ಇಲ್ಲದೆ ಈ ವೇಳಾಪಟ್ಟಿಯಂತೂ ಸದ್ಯ ಕಬ್ಬಿಣದ ಕಡಲೆ ಆಗಿದೆ.

ಇನ್ನಾದರೂ, ಮುಂಬರುವ ಅಧಿಸೂಚನೆಗಳಲ್ಲಿ ರಾಜ್ಯ ಸರ್ಕಾರದ ಪ್ರತಿಯೊಂದು ಪರೀಕ್ಷೆಯನ್ನೂ ವಿವಿಧ ಸ್ತರದ ಅಭ್ಯರ್ಥಿಗಳನ್ನು ಪರಿಗಣಿಸಿ ಸರ್ಕಾರಿಗೂ ಒಳಿತಾಗುವ ದೃಷ್ಟಿಯಿಂದ ಕೆಪಿಎಸ್ಸಿ ಅಥವಾ ಕೆಇಎ ಆಗಲಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿದ ನಂತರ ಪರೀಕ್ಷೆ ಬರೆಯುವ ದಿನಾಂಕವನ್ನು ಕನಿಷ್ಠ ನೂರು ದಿನಗಳ ಕಾಲಾವಕಾಶ ಮಿತಿ ಕಡ್ಡಾಯವಾಗಿ ನೀಡಬೇಕಿದೆ.

– ಅನಿಲ್ ಕುಮಾರ್, ನಂಜನಗೂಡು.

ಕಿಡಿಗೇಡಿಗಳಿಗೆ ತಕ್ಕ ಕಠಿಣ ಶಿಕ್ಷೆ ಆಗಲಿ

ಮಾನ್ಯರೆ,

ಭಾರತರತ್ನ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರು ರಾಷ್ಟ್ರದ ಒಬ್ಬ ಮಹಾನ್ ವ್ಯಕ್ತಿ. ಇವರು ಸಂವಿಧಾನ ರಚನೆ ಮಾಡದೇ ಇದ್ದರೆ ರಾಷ್ಟ್ರದಲ್ಲಿ ಅಶಾಂತಿ ವಾತಾವರಣ ನಿರ್ಮಾಣವಾಗುತ್ತಿತ್ತು. ಹೀಗಿರುವಾಗ ಪದೇ ಪದೆ ಇವರ ಭಾವಚಿತ್ರಕ್ಕೆ ಕಿಡಿಗೇಡಿಗಳು ಹಾನಿಮಾಡುವುದು ಯಾವ ರೀತಿ ಸರಿ. ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಮಾಸಗಾಪುರ –ಚಾಟಿಪುರ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರದ ಫಲಕಕ್ಕೆ ಅಪಮಾನ ಮಾಡಿರುವುದು ಖಂಡನೀಯ. ಇಂತಹ ಘಟನೆಗಳು ಹೆಚ್ಚಾಗಿ ಚಾಮರಾಜನಗರ ಸುತ್ತಮುತ್ತ ಕಾಣುತ್ತಿದ್ದೇವೆ. ಇಂತಹ ಮಹಾನಾಯಕರ ಭಾವಚಿತ್ರ ಹಾಗೂ ಪುತ್ಥಳಿಗಳಿಗೆ ಹಾನಿ ಮಾಡುವವರ ವಿರುದ್ಧ ಸರ್ಕಾರ ಕೂಡಲೇ ಕಠಿಣ ಕ್ರಮ ಕೈಗೊಳ್ಳುವಂತೆ ಮನವಿ ಮಾಡುತ್ತೇವೆ.

–ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ, ಹೆಚ್. ಡಿ. ಕೋಟೆ ತಾ.

ನಮ್ಮೂರ ಆದರ್ಶಪ್ರಾಯರು...




ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೋ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

(ಜೂ.14ರ ಸಂಚಿಕೆಯಿಂದ)

9. ಡಿ.ಸೀತಾರಾಮರಾವ್




ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

1904ರಲ್ಲಿ ನಗರಾಭಿವೃದ್ಧಿ ಸಮಿತಿ ಅಸ್ತಿತ್ವಕ್ಕೆ ಬಂದು ಸೀತಾರಾಮರಾವ್ ಅಧ್ಯಕ್ಷರಾಗುವ ವೇಳೆಗಾಗಲೇ ನಗರದ ಅಭಿವೃದ್ಧಿ ಕಾರ್ಯಗಳು ಪ್ರಾರಂಭವಾಗಿ ಮೂರು ನಾಲ್ಕು ದಶಕಗಳೇ ಕಳೆದಿದ್ದವು. ನಗರದ ಮಧ್ಯೆ ಹಾದುಹೋಗುತ್ತಿದ್ದು ಹಲವಾರು ಖಾಯಿಲೆ ಗಳಿಗೆ ಕಾರಣವಾಗುತ್ತಿದ್ದ ಪೂರ್ಣಯ್ಯ ನಾಲೆಯನ್ನು ಮುಚ್ಚುವ ಕಾರ್ಯ, ಅರಮನೆ ಮತ್ತು ಕೋಟೆಯೊಳಗೆ ಪೈಪುಗಳನ್ನು ಹಾಕಿ ಒಳಚರಂಡಿಗಳನ್ನು ನಿರ್ಮಿಸುವ ಕಾರ್ಯ, ಲಷ್ಕರ್ ಮತ್ತು ಮಂಡಿ ಮೊಹಲ್ಲಾಗಳಿಂದ ಹೊಲಸು ನೀರನ್ನು ಹೊರಕ್ಕೆ ತೆಗೆದುಕೊಂಡು ಹೋಗುವ ಕಾರ್ಯ, ಹೊಲಸು ನೀರನ್ನು ಸಾಗಿಸಲು ದೇವರಾಜ ಮೊಹಲ್ಲಾದಲ್ಲಿ ಪೈಪುಗಳನ್ನು ಹಾಕುವ ಕೆಲಸ, ಕೃಷ್ಣರಾಜ ಮೊಹಲ್ಲಾದಲ್ಲಿ ಹೊಲಸು ನೀರಿನ ಮುಖ್ಯ ಪೈಪು ಹಾಕುವ ಕೆಲಸ, ಚಾಮರಾಜಪುರ(ಂ) ಬಡಾವಣೆ ನಿರ್ಮಾಣ, ಕೋಟೆಯ ಹೊರಭಾಗದ ಸುತ್ತಲಿನ ಕಂದಕವನ್ನು ಮುಚ್ಚಿ ಉದ್ಯಾನವನವನ್ನು ರೂಪಿಸುವ ಯೋಜನೆ, ಕುಕ್ಕರಹಳ್ಳಿ ಕೆರೆಯಿಂದ ಪೈಪುಗಳ ಮೂಲಕ ಕುಡಿಯುವ ನೀರು ಒದಗಿಸುವ ಕಾರ್ಯಗಳು ಪ್ರಾರಂಭವಾಗಿ ವಿವಿಧ ಹಂತಗಳಲ್ಲಿ ಕೆಲಸಗಳು ನಡೆಯುತ್ತಿದ್ದವಾದರೂ ಈ ಕಾರ್ಯಗಳು ಅಲ್ಲಲ್ಲಿ ಅಷ್ಟಷ್ಟು ಮಾತ್ರ ಜರುಗುತ್ತಿದ್ದು, ರೂಪಿತ ಯೋಜನೆಗಳ ಪ್ರಕಾರ ಶಿಸ್ತುಬದ್ಧವಾಗಿ ಸಾಗುತ್ತಿರಲಿಲ್ಲ.

1904ರಲ್ಲಿ ನಗರಾಭಿವೃದ್ಧಿ ಸಮಿತಿ ಇದಕ್ಕಾಗಿ ರಚಿತವಾಗಿ ಶಿಸ್ತುಬದ್ಧವಾಗಿ ಯೋಜನೆಗಳನ್ನು ರಚಿಸಿ ಈ ಕಾರ್ಯಗಳನ್ನು ಕೈಗೊಳ್ಳುವಂತಾಯಿತು.

ನಗರದ ಕೆಲವು ಪ್ರದೇಶಗಳಲ್ಲಿದ್ದ ಅನಾರೋಗ್ಯಪೀಡಿತ ಜಾಗಗಳನ್ನು ತೆಗೆದು, ಸಣ್ಣಪುಟ್ಟ ಬೀದಿಗಳನ್ನು ಅಗಲ ಮಾಡುವ ಕಾರ್ಯ, ಚರಂಡಿ ನೀರು ಸುಲಭವಾಗಿ ಹರಿದು ಹೋಗಲು ಚರಂಡಿಗಳ ನಿರ್ಮಾಣ, ಗಾಳಿ ಬೆಳಕು ಸಾಕಷ್ಟಿಲ್ಲದ ಸಣ್ಣ ಪುಟ್ಟ ಮನೆಗಳನ್ನು ಕೆಡವಿ ಮನೆಗಳನ್ನು ಕಳೆದುಕೊಂಡ ಜನರಿಗೆ ಹೊಸ ಬಡಾವಣೆಗಳನ್ನು ರೂಪಿಸಿ ಒಳ್ಳೆಯ ಮನೆಗಳನ್ನು ಕಟ್ಟಿಕೊಡುವ ಕಾರ್ಯ ಮುಂತಾದ ಕಾರ್ಯಗಳೂ ಯೋಜಿತ ರೀತಿಯಲ್ಲಿ ಪ್ರಾರಂಭವಾದವು. ಈ ಮಹತ್ವದ ಬದಲಾವಣೆಯ ಪ್ರಾರಂಭದ ಅವಧಿಯಲ್ಲಿ ಸೀತಾರಾಮರಾವ್ ಹೊಸದಾಗಿ ಅಸ್ತಿತ್ವಕ್ಕೆ ಬಂದ ನಗರಾಭಿವೃದ್ಧಿಯ ಮೊದಲ ಅಧ್ಯಕ್ಷರಾಗಿದ್ದು ಮೂರು ವರ್ಷಗಳು ಈ ಕಾರ್ಯಗಳು ಜರುಗುವಂತೆ ನೋಡಿಕೊಳ್ಳುವ ಮೂಲಕ ಮೈಸೂರು ನಗರ ಆಧುನಿಕವಾಗಿ ರೂಪುಗೊಳ್ಳುವ ಕಾರ್ಯಕ್ಕೆ ಕಾರಣಕರ್ತರಾದರು. ಮೈಸೂರು ನಗರದ ಅಭಿವೃದ್ಧಿಗೆ ಪೂರಕವಾದ ಕಾರ್ಯಗಳು ಈ ಅವಧಿಯಲ್ಲಿ ಜರುಗಿ ಮೈಸೂರು ಇನ್ನಷ್ಟು ಯೋಜಿತವಾಗಿ, ಕಾನೂನುಬದ್ಧವಾಗಿ ಬೆಳೆಯಲು ನಾಂದಿಯಾಯಿತು.


ನಗರಾಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಸೀತಾರಾಮರಾಯರು ಮೈಸೂರು ನಗರ ಅಧುನಿಕವಾಗಿ ಬದಲಾಗಲು ಮಾಡಿದ ಪ್ರಾರಂಭಿಕ ಕೆಲಸಗಳಿಂದಾಗಿ 1911–12ರ ಹೊತ್ತಿಗೆ ಸಮಿತಿಯು ಆರು ಸಾವಿರ ಮನೆಗಳನ್ನು ವಶಕ್ಕೆ ತೆಗೆದುಕೊಂಡಿತ್ತು. 13.5 ಲಕ್ಷ ರೂಪಾಯಿಗಳನ್ನು ಪರಿಹಾರವನ್ನಾಗಿ ಮನೆ ಕಳೆದುಕೊಂಡವರಿಗೆ ಹಂಚಲಾಗಿತ್ತು. ಒಂಬತ್ತು ಲಕ್ಷ ರೂಪಾಯಿಗಳನ್ನು ಚರಂಡಿ ಮತ್ತಿತರ ಅಭಿವೃದ್ಧಿ ಕೆಲಸಗಳಿಗೆ ಖರ್ಚು ಮಾಡಲಾಗಿತ್ತು. ಛೀಫ್ ಇಂಜಿನಿಯರ್ ಆಗಿದ್ದ ಸರ್ ಎಂ.ವಿಶ್ವೇಶ್ವರಯ್ಯನವರ ಸಲಹೆಯ ಮೇರೆ ದೊಡ್ಡಕೆರೆಯ ಬಳಿ ಸೆಪ್ಟಿಕ್ ಟ್ಯಾಂಕ್ ಕಟ್ಟಿಸಿ ಅಲ್ಲಿಗೆ ಒಳಚರಂಡಿಯ ನೀರು ಹರಿದುಹೋಗುವಂತೆ, ಆ ನೀರು ವ್ಯವಸಾಯಕ್ಕೆ ಬಳಸಿಕೊಳ್ಳಲು ಅನುಕೂಲವಾಗುವಂತೆ ಮಾಡಲಾಯಿತು. ಮುಂದೆ 1931 ಮತ್ತು ಅದರ ನಂತರ ಒಂದು ಲಕ್ಷಕ್ಕೂ ಮೀರಿ ಬೆಳೆಯುವ ಜನಸಂಖ್ಯೆ ಮತ್ತು ತೀವ್ರಗತಿಯ ನಗರೀಕರಣವನ್ನು ಗಮನದಲ್ಲಿಟ್ಟುಕೊಂಡು ಯೋಜನಾ ರೀತಿ ಖರ್ಚು ಮಾಡಲಾಗಿತ್ತು.

ಇದರಿಂದಾಗಿ ಮೈಸೂರು ನಗರದಲ್ಲಿ ಬುಲೇವಾರ್ಡ್‌ಗಳು, ಉದ್ಯಾನವನಗಳು, ಆಧುನಿಕ ಸೌಲಭ್ಯಗಳು ಉಂಟಾಗಿ ಅದು ವ್ಯವಸ್ಥಿತ ಬೆಳವಣಿಗೆಯಲ್ಲಿ ದೇಶದ ಮೊದಲ ರಾಜ್ಯಗಳಲ್ಲಿ ಒಂದಾಗಿ ಹೆಸರು ಪಡೆಯಿತು. ಮಾದರಿ ನಗರವಾಗಿ ರೂಪುಗೊಂಡಿತು. ಈ ಕಾರ್ಯಕ್ಕೆ ಅಡಿಪಾಯ ಹಾಕಿದ್ದರು ನಗರಾಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿದ್ದ ಡಿ.ಸೀತಾರಾಮರಾವ್.

ಸೀತಾರಾಮರಾಯರು ತಮ್ಮ ಎಂದಿನ ಚಾತುರ್ಯ ಮತ್ತು ಸಾಮರ್ಥ್ಯದಿಂದ ಮೈಸೂರು ನಗರದ ಅಭಿವೃದ್ಧಿಗೆ ಮಾಡಿದ ಕಾರ್ಯಗಳನ್ನು ಮೆಚ್ಚಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಸರ್ಕಾರ ಪ್ರಶಂಸೆ ಹಾಗೂ ಕೃತಜ್ಞತೆಗಳನ್ನು ಸೂಚಿಸಿತು. ಮಂಡಳಿಯ ಅಧ್ಯಕ್ಷರಾಗಿದ್ದಾಗಲೇ ಸರ್ಕಾರ ಅವರನ್ನು ಪ್ರಥಮ ದರ್ಜೆಗೆ ಏರಿಸಿತು. 1908ರಲ್ಲಿ ಅವರನ್ನು ಪಶ್ಚಿಮ ವೃತ್ತದ ಸೂಪರಿಂಟೆಂಡಿಂಗ್ ಇಂಜಿನಿಯರ್ ಸ್ಥಾನಕ್ಕೆ ನೇಮಿಸಿತು.

ಪ್ರಿನ್ಸ್ ಆಫ್ ವೇಲ್ಸ್ ದಂಪತಿ ಮೈಸೂರು ಮತ್ತು ಬೆಂಗಳೂರಿಗೆ ಬಂದಿದ್ದಾಗ ಸೀತಾರಾಮರಾಯರು ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿ ಮಾಡಿದ ಮಾದರಿ ವ್ಯವಸ್ಥೆಗಳನ್ನು ಸರ್ಕಾರ ಗುರುತಿಸಿ ಮಹಾರಾಜರು ತಮ್ಮ ದರ್ಬಾರಿನಲ್ಲಿ ಅವರಿಗೆ ಖಿಲ್ಲತ್ತನ್ನು ಕೊಟ್ಟು ಗೌರವಿಸಿದರು. ಡಿ.ಸೀತಾರಾಮರಾವ್ ಅವರ ನೆನಪಿನಲ್ಲಿ ಲಕ್ಷ್ಮೀಪುರದ ಒಂದು ರಸ್ತೆಗೆ ಅವರ ಹೆಸರನ್ನು ಇಡಲಾಗಿದೆ. (ಮುಗಿಯಿತು)

ನೆನೆದವರ ಮನದಲ್ಲಿ ಜಿಟಿಎನ್ ಚಿರಸ್ಥಾಯಿ



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಮ್ಮ ಜಿಟಿಎನ್ ಅವರು ಬದುಕಿದ್ದರೆ, ಅವರಿಗೆ ನೂರು ವರುಷಗಳಾಗುತ್ತಿತ್ತು. ಅದರ ಸ್ಮರಣೆಗಾಗಿ ಅವರ ಜನ್ಮ ಶತಾಬ್ಧಿಯನ್ನು ಗಾನಭಾರತೀ ಸಂಸ್ಥೆಯು ಹಮ್ಮಿಕೊಂಡಿತ್ತು. ಜಿಟಿಎನ್ ಅವರು ಅತ್ಯಂತ ನಿಕಟವರ್ತಿಗಳಾಗಿದ್ದ, ಅದರ ಏಳಿಗೆಗಾಗಿ ಅಹರ್ನಿಶಿ ದುಡಿದ ಸಂಸ್ಥೆ ಗಾನಭಾರತೀ.

ಅದರ ಕಟ್ಟಡವಾದ ವೀಣೆ ಶೇಷಣ್ಣ ಭವನದ ನಿರ್ಮಾಣಕ್ಕಾಗಿ ಹಣ ಸಂಗ್ರಹಿಸಲು ಅವರು ತಮ್ಮ ಹೆಗಲಿಗೆ ಜೋಳಿಗೆ ಏರಿಸಿ, ಅದೆಷ್ಟು ದೇಣಿಗೆಯನ್ನು ಒಟ್ಟುಗೂಡಿಸಿದರೆಂದರೆ, ಅವರ ನಿಸ್ವಾರ್ಥ ಸೇವೆಯನ್ನು ಗಾನಭಾರತಿಯು ಎಂದೂ ಮರೆಯುವಂತೆಯೇ ಇಲ್ಲ. ಅಮೆರಿಕದಲ್ಲಿ ನೆಲೆಸಿದ್ದ ನೊಬೆಲ್ ಪ್ರಶಸ್ತಿ ವಿಜೇತ ಭಾರತದ ವಿಜ್ಞಾನಿ ಸುಬ್ರಮಣ್ಯ ಚಂದ್ರಶೇಖರ್ ಅವರಿಂದಲೂ ಸಹ ಗಾನಭಾರತಿಗೆ ಅವರು ಕಾಣಿಕೆಯನ್ನು ತಂದಿದ್ದರು. ದೇಣಿಗೆಯ ಮೊತ್ತ ಎಷ್ಟೇ ಸಣ್ಣದಿರಲಿ, ದೊಡ್ಡದಿರಲಿ, ಆ ಕೂಡಲೇ ಅದಕ್ಕೆ ರಸೀತಿ ಬರೆಯುವುದನ್ನು ತಪ್ಪಿಸುತ್ತಿರಲಿಲ್ಲ.

ಗಾನಭಾರತಿಯ ಆರಂಭದಿಂದಲೂ ಅದರೊಡನೆ ಇದ್ದ ಶ್ರೀ ಜಿ.ಟಿ. ನಾರಾಯಣರಾವ್ ಅವರ ಜನ್ಮ ಶತಾಬ್ಧಿಯನ್ನು ಅದು ಹಮ್ಮಿಕೊಂಡಿದುದು ಸಹಜವೇ ಆಗಿತ್ತು. ಜೂನ್ 6ರಂದು ವೀಣೆ ಶೇಷಣ್ಣ ಭವನದಲ್ಲಿ, ನಾಡಿನ ಹಿರಿಯ ವಿದ್ವಾಂಸರಾದ ಶ್ರೀ ಟಿ.ವಿ.ವೆಂಕಟಾಚಲಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದ ಉದ್ದಕ್ಕೂ ಜಿ.ಟಿ.ನಾರಾಯಣರಾಯರ ಸದ್ಗುಣಗಳ ನೆನಪು ದಟ್ಟವಾಗಿತ್ತು.

ಅವರಿಗೆ ನುಡಿನಮನ ಸಲ್ಲಿಸಲು ಆಗಮಿಸಿದ್ದ ಮತ್ತೊಬ್ಬ ಹಿರಿಯ ವಿದುಷಿ ಡಾ.ಟಿ.ಎನ್.ನಾಗರತ್ನ ಅವರು ಬಹಳ ಆತ್ಮೀಯವಾಗಿ ಅವರೊಡನೆ ಇದ್ದ ತಮ್ಮ ಬಾಂಧವ್ಯವನ್ನು ನೆನಪಿಸಿಕೊಂಡರು. ಗಾನಭಾರತಿಯ ಆರಂಭದಿಂದಲೂ ಅವರೊಡನೆ ಇದ್ದ ಮತ್ತೊಬ್ಬ ವ್ಯಕ್ತಿ ಡಾ.ಸಿ.ಜಿ.ನರಸಿಂಹನ್ ಅವರೂ ಸಹ ಗಾನಭಾರತಿಯೊಂದಿಗಿನ ಅವರ ಒಡನಾಟವನ್ನು ಸ್ಮರಿಸಿದರು. ಗಾನಭಾರತಿ ಅಧ್ಯಕ್ಷರಾದ ಶ್ರೀ ಸುಂದರೇಶನ್ ಅವರೂ ಸಹ ಮಾತನಾಡಿ ಜಿಟಿಎನ್ ಅವರನ್ನು ಸ್ಮರಿಸಿದರು.



ಜಿ.ಟಿ.ನಾರಾಯಣರಾಯರು

ನಾರಾಯಣ ರಾಯರು ಹೊಸ ಪ್ರಯೋಗಗಳನ್ನು ಉತ್ತೇಜಿಸುತ್ತಿದ್ದರು ಎಂಬ ಕಾರಣದಿಂದಲೋ ಏನೋ ಅಂದು ಪ್ರತಿಬಿಂಬ ತಂಡದವರಿಂದ ದ.ರಾ.ಬೇಂದ್ರೆಯವರ ಗೀತೆಗಳನ್ನಾಧರಿಸಿದ ಒಂದು ನೃತ್ಯರೂಪಕವನ್ನು ಪ್ರಸ್ತುತಪಡಿಸಲಾಯಿತು.

ಬೇಂದ್ರೆಯವರ ಕವನಗಳ ಮೂಲಕವೇ ಅವರ ಬದುಕಿನ ಒಂದು ಕಿರುನೋಟವನ್ನು, ಅವರ ಆಶಯಗಳನ್ನು, ವ್ಯಕ್ತಿತ್ವವನ್ನು ಹಿಡಿದಿಡುವ ಒಂದು ವಿನೂತನ ಪ್ರಯೋಗ ಇದಾಗಿತ್ತು. ಆಧುನಿಕ ತಂತ್ರಜ್ಞಾನವನ್ನೂ ಒಳಗೊಂಡ ಇದರಲ್ಲಿ ಭಾಗವಹಿಸಿದವರು ಪ್ರತಿಭಾ ರಾಮಸ್ವಾಮಿ ಮತ್ತು ಜನನಿ ಮುರಳಿ ಅವರು.

ಭಾವಗೀತೆಗಳ ಮೂಲಕ ಬೇಂದ್ರೆಯವರ ಬದುಕನ್ನು ಕಟ್ಟಿಕೊಟ್ಟ ಪರಿ ನಿಜಕ್ಕೂ ಹೊಸ ಅನುಭವವನ್ನು ನೀಡಿತು. ಇದು ಅವರ ಪ್ರತಿಭೆಗೆ ಒಡ್ಡಿದ ಸವಾಲೂ ಹೌದು. ಬುದ್ಧಿವಂತಿಕೆಯಿಂದ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡಿದ್ದ ಈ ಪ್ರಯೋಗವನ್ನು ಒಪ್ಪಿಕೊಳ್ಳಲು ಸಾಂಪ್ರದಾಯಿಕ, ಶಾಸ್ತ್ರೀಯ ಭರತನಾಟ್ಯಕ್ಕೆ ಒಗ್ಗಿಕೊಂಡಿರುವ ಮನಸುಗಳಿಗೆ ಸ್ವಲ್ಪ ಸಮಯ ಬೇಕಾಗಬಹುದು.

ಆದರೆ, ಇಂತಹ ಪ್ರಯತ್ನವನ್ನು ಮಾಡಿದ ಕಲಾವಿದೆಯರು ನಿಜಕ್ಕೂ ಅಭಿನಂದನಾರ್ಹರೇ ಸರಿ. ಬೇಂದ್ರೆಯವರ ಗಣಿತ ಪ್ರೇಮ, ಆಧ್ಯಾತ್ಮ, ಠಾಕೂರರ ಪ್ರಭಾವ, ದಾಂಪತ್ಯ ಹೀಗೆ ಅನೇಕ ವಿಷಯಗಳನ್ನು ಈ ರೂಪಕವು ಒಳಗೊಂಡಿತ್ತು. ಆಕರ್ಷಕ ಹಿನ್ನೆಲೆ ಸಂಗೀತ ಇದರ ಮತ್ತೊಂದು ಶಕ್ತಿ. ಇಬ್ಬರೂ ಕಲಾವಿದೆಯರ ಪ್ರಾಮಾಣಿಕ ತೊಡಗಿಕೊಳ್ಳುವಿಕೆಯು ಇದರ ಯಶಸ್ಸಿಗೆ ಕಾರಣವಾಗಿತ್ತು ಎನ್ನಲು ಅಡ್ಡಿಯಿಲ್ಲ.

ಮೆಚ್ಚುವ ಕಾರ್ಯಕ್ರಮ: ಇದೇ ಜೂನ್ 17ರಂದು ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರಿನಲ್ಲಿ ಒಂದು ಏಕವ್ಯಕ್ತಿ ಪ್ರದರ್ಶನ ನಡೆಯಿತು. ನಾದಿರಾ ಬಬ್ಬರ್ ಅವರು ಹಿಂದಿಯಲ್ಲಿ ರಚಿಸಿರುವ ಇದರ ಕನ್ನಡ ಅನುವಾದವನ್ನು ಡಾ.ಡಿ.ಎಸ್. ಚೌಗಲೆಯವರು ಮಾಡಿದ್ದಾರೆ. ನುಡಿ ಸುದರ್ಶನ ಅವರ ಅಭಿನಯದ ಈ ಏಕವ್ಯಕ್ತಿ ಪ್ರದರ್ಶನದ ನಿರ್ದೇಶನ ಹುಲುಗಪ್ಪ ಕಟ್ಟೀಮನಿ ಅವರದು. ಸಂಗೀತವನ್ನು ರಾಮಚಂದ್ರ ಗಿರಿಯವರು ಒದಗಿಸಿದ್ದು, ಮಧು ಮಳವಳ್ಳಿಯವರು ಬೆಳಕಿನ ವಿನ್ಯಾಸದ ಹೊಣೆಯನ್ನು ಹೊತ್ತಿದ್ದರು. ಒಬ್ಬ ಮನೆಗೆಲಸದ ಹೆಣ್ಣಿನ ಬದುಕಿನ ಒಳನೋಟವು ಅನಾವರಣಗೊಳ್ಳುತ್ತಾ ಹೋದಂತೆ, ಮನುಷ್ಯರ ಸ್ವಭಾವದ ಹಲವು ಮಗ್ಗುಲುಗಳೂ ತೆರೆದುಕೊಳ್ಳುತ್ತಾ ಹೋಗುವ ಈ ನಾಟಕವು ಪ್ರೇಕ್ಷಕರನ್ನು ಹಿಡಿದಿಡುವಲ್ಲಿ ಯಶಸ್ವಿ ಆಯಿತು.

ಅದರ ಕೇಂದ್ರಬಿಂದುವಾದ ಸಕೂಬಾಯಿ ಪಾತ್ರಧಾರಿಯಾಗಿದ್ದ ನುಡಿ ಸುದರ್ಶನ ಅವರ ಸಹಜ ಅಭಿನಯವು ನಾಟಕದ ಉದ್ದಕ್ಕೂ ಲವಲವಿಕೆಯಿಂದ, ಚುರುಕಾದ ಸಂಭಾಷಣೆಯಿಂದ ಮತ್ತು ಮನುಷ್ಯನ ಕುಟಿಲತೆಯನ್ನು ಬಿಚ್ಚಿಡುವುದರಲ್ಲಿ ಪ್ರಮುಖ ಪಾತ್ರ ವಹಿಸಿತು. ಕೆಲಸದಾಕೆ ಅಂದಮೇಲೆ ಅಲ್ಲಿ ಬಡತನದ ಇರುವಿಕೆ ಅನಿವಾರ್ಯ. ಮನೆಯ ಹಿರಿ ಮಗಳಾದ ಸಕೂಬಾಯಿ ಸೊಟ್ಟ ಕೈನ ಅಪ್ಪ, ಸಂಸಾರಕ್ಕಾಗಿ ಒದ್ದಾಡುವ ಆಯಿ, ತಮ್ಮ ತಂಗಿಯರ ನಡುವೆ ಆ ಸಂಸಾರದ ಹೊಣೆಗೆ ತನ್ನ ಕೈಯನ್ನು ಜೋಡಿಸುತ್ತಲೇ ತನ್ನ ಬದುಕಿನ ಕತೆಯನ್ನು ಎಳೆಎಳೆಯಾಗಿ ಬಿಚ್ಚಿಡುತ್ತಾ ಹೋಗುವ ಪರಿ ಪ್ರೇಕ್ಷಕರ ಮನ ಮುಟ್ಟುವಲ್ಲಿ ಯಶಸ್ವಿ ಆಯಿತು. ಸೊಟ್ಟಕೈಯಿಂದಲೇ ದುಡಿದರೂ ಚಿಕ್ಕಪ್ಪಂದಿರ ತಾತ್ಸಾರಕ್ಕೆ ಗುರಿಯಾಗುವ ಅಪ್ಪ, ಸ್ವಂತ ಮಾವನಿಂದ ಸಣ್ಣವಳಿದ್ದಾಗಲೇ ಅತ್ಯಾಚಾರಕ್ಕೆ ಒಳಗಾಗುವ ಸಕೂಬಾಯಿ ತನ್ನ ಆಕ್ರಂದನವನ್ನು ನುಂಗಿಕೊಳ್ಳುವ ಅಸಹಾಯಕ ಹೆಣ್ಣಿನ ಪರಿಸ್ಥಿತಿಯ ಪ್ರತಿ ಬಿಂಬದಂತೆ ತೋರುತ್ತಾಳೆ. ಗುಂಡಗೆ, ಸುಂದರವಾಗಿ ಕಾಣುತ್ತಿದ್ದ ತಂಗಿಯು, ರಿಕ್ಷಾವಾಲಾನೊಡನೆ ಮನೆಬಿಟ್ಟು ಓಡಿಹೋಗಿ, ಮುಂದೆ ಕಾಮಾಟಿಪುರ ಸೇರುವ ವಾಸ್ತವ ಮನ ಕಲಕುತ್ತದೆ. ತಾನು ಕಲಿಯಬೇಕೆಂಬ ಆಸೆಯನ್ನು ಬಲಿಗೊಟ್ಟು, ತಮ್ಮನ ಓದಿಗಾಗಿ ತಾಯಿಯೊಡನೆ ಮುಂಬಯಿ ಸೇರುವ ಸಕೂಭಾಯಿಯ ಮುಂದೆ ಮುಂಬಯಿಯ ಬದುಕಿನ ಕರಾಳ ರೂಪವೂ ತೆರೆದುಕೊಳ್ಳುತ್ತದೆ. ಅದರ ಥಳಕು ಬಳುಕಿನ ಬದುಕನ್ನು ಸರಳ ಮೌಲ್ಯಗಳ ಜೊತೆ ಬೆಳೆದ ಸಕೂಬಾಯಿ ಒಂದು ರೀತಿಯ ತಿರಸ್ಕಾರದ ನೋಟದಿಂದಲೇ ನೋಡುತ್ತಾಳೆ. ಅವಳಿಗೂ ಮದುವೆ ಆಗುತ್ತದೆ. ಗಂಡ ಒಳ್ಳೆಯವನೇ.

ಆದರೆ ಮತ್ತೊಂದು ಹೆಣ್ಣಿನ ಸಂಗ ಇದ್ದವ. ಬದುಕಿನ ಈ ಅನಿವಾರ್ಯವನ್ನೂ ಒಪ್ಪಿಕೊಳ್ಳಲೇಬೇಕಾದ ಆಕೆ, ತನ್ನ ಗಂಡ ಒಳ್ಳೆಯವನೇ ಎಂಬ ಭಾವನೆಯನ್ನು ಮನದಿಂದ ಹೊರ ಹಾಕುವುದಿಲ್ಲ. ಕೊನೆಗೆ ಆತ ಏಡ್ಸ್‌ಪೀಡಿತನಾಗಿ ತನ್ನ ರೋಗವು ಪತ್ನಿ, ಮಗಳಿಗೆ ಬಾರದಿರಲೆಂದು ಮುಂಬಯಿ ಬಿಟ್ಟು ತನ್ನ ಹುಟ್ಟೂರಿಗೆ ಮರಳಿ ಹೋಗುತ್ತಾನೆ. ಆತನ ಸ್ಥಿತಿ ಗಂಭೀರವಾಗಿದೆ ಎಂಬ ತಾರು ಬಂದಾಗ ಮಗಳೊಡನೆ ಅಲ್ಲಿಗೆ ಧಾವಿಸುವ ಸಕೂಬಾಯಿ ಅವನ ಮೃತದೇಹವನ್ನು ನೋಡಿ ಹಿಂದಿರುಗುತ್ತಾಳೆ. ಅವನ ಕ್ರಿಯಾ ಕರ್ಮಗಳಿಗೆ ಆದ ವೆಚ್ಚದ ದುಡ್ಡನ್ನು ಹಿಂದಿರುಗಿಸಲು ಮರೆಯುವುದಿಲ್ಲ. ಪ್ರಾಮಾಣಿಕತೆ ಎಂಬುದು ಸಮಾಜದ ಇಂತಹ ಕೆಳವರ್ಗದವರಲ್ಲಿ ಹೆಚ್ಚಾಗಿ ಕಾಣುವ ಗುಣ ಎಂಬಂತೆ!.

ತಾನು ಮನೆಗೆಲಸ ಮಾಡುವ ಮನೆಯ ಮಾಲೀಕಳಿಗೆ ಅನ್ಯಾಯ ಆಗಬಾರದೆಂಬ ಕಳಕಳಿ, ಮಾಲೀಕನು ಮಡದಿಗೆ ಮಾಡುತ್ತಿರುವ ಮೋಸ ಇವೆಲ್ಲವೂ ಅವಳ ಮನಸ್ಸನ್ನು ಕಲಕುವ ಸಂಗತಿಗಳೇ. ತಂದೆ ತಾಯಿಯರನ್ನು, ರೋಗದಿಂದ ನರಳಿ ಸತ್ತ ತನ್ನ ತಂಗಿಯನ್ನು ನೆನೆದು ದುಃಖಿಸುವ, ತನ್ನ ಮಗಳು ತನಗೆ ಅಕ್ಷರ ಕಲಿಸುತ್ತೇನೆಂದಾಗ ಹಿಗ್ಗುವ ಸಕೂಬಾಯಿ ಬಹಳ ಕಾಲ ಮನಸ್ಸನ್ನು ತಟ್ಟುವುದರಲ್ಲಿ ಸಂಶಯವಿಲ್ಲ. ನುಡಿ ಸುರ್ಶನ ಅವರ ಸಮರ್ಥ ಅಭಿನಯ ಈ ಏಕವ್ಯಕ್ತಿ ಪ್ರದರ್ಶನದ ಜೀವಾಳ. ಉತ್ತಮ ನಿರ್ದೇಶನ, ಹಿನ್ನೆಲೆ ಸಂಗೀತದ ಪರಿಪಕ್ವ ನಿರ್ವಹಣೆ ಮತ್ತು ಬೆಳಕಿನ ವಿನ್ಯಾಸ ಇವೆಲ್ಲವೂ ಇದರ ಧನಾತ್ಮಕ ಅಂಶಗಳು. ಒಟ್ಟಾರೆ ಇದು ಒಂದು ಉತ್ತಮ ಪ್ರದರ್ಶನ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಂದು ಸುಯೋಗ್ ಆಸ್ಪತ್ರೆಯಲ್ಲಿ ಯೋಗ ದಿನಾಚರಣೆ

ಮೈಸೂರು, ಜೂ.20– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆ, ಮೈಸೂರಿನ ರಾಮಕೃಷ್ಣ ನಗರದಲ್ಲಿರುವ ಸುಯೋಗ್ ಆಸ್ಪತ್ರೆ, ಸುಯೋಗ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜೂ. 21 ರಂದು ಬೆಳಗ್ಗೆ ಆಸ್ಪತ್ರೆಯ ಮುಂಭಾಗದಲ್ಲಿ ಯೋಗ ಕಾರ್ಯಕ್ರಮ ಹಾಗೂ ಯೋಗದ ಕುರಿತು ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಸುಯೋಗ್ ಆಸ್ಪತ್ರೆಯ ಅಧ್ಯಕ್ಷರಾದ ಡಾ.ಎಸ್.ಪಿ.ಯೋಗಣ್ಣ ಯೋಗದ ಮಹತ್ವ ಕುರಿತು ಉಪನ್ಯಾಸ ನೀಡಲಿದ್ದು, ಯೋಗ ಶಿಕ್ಷಕಿ ಶ್ರೀಮತಿ ಶೈಲಜಾ ಅವರ ಮಾರ್ಗದರ್ಶನದಲ್ಲಿ ಯೋಗ ಪ್ರದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶೀಘ್ರದಲ್ಲೇ ಬಸ್ ಪ್ರಯಾಣ ದರ ಹೆಚ್ಚಳ?

ರಾಜ್ಯದ ಹಿತಕ್ಕಾಗಿ ಕ್ರಮ ಎಂದ ಸಿಎಂ ಡಿಕೆ ಶಿವಕುಮಾರ್

ಬೆಂಗಳೂರು: ರಾಜ್ಯದ ಜನತೆಗೆ ಶೀಘ್ರದಲ್ಲೇ ಮತ್ತೊಂದು ಬೆಲೆ ಏರಿಕೆ ಬಿಸಿ ತಟ್ಟಲಿದ್ದು, ಡೀಸೆಲ್ ದರ ಏರಿಕೆ ಹಿನ್ನೆಲೆಯಲ್ಲಿ ಬಸ್ ಟಿಕೆಟ್ ದರ ಹೆಚ್ಚಿಸಲು ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿವೆ.

ವಿಧಾನಸೌಧದಲ್ಲಿ ಶನಿವಾರ ತಮ್ಮ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು, ಡೀಸೆಲ್ ಬೆಲೆ ತೀವ್ರ ಹೆಚ್ಚಾಗಿದೆ. ಡಿಪೋದ ಬೆಲೆಗೂ, ಖಾಸಗೀಯಾಗಿ ಸಿಗುವ ಡೀಸೆಲ್ ಬೆಲೆಗೂ ಅಜಗಾಂತರ ವ್ಯತ್ಯಾಸ ಇದೆ ಎಂದು ಹೇಳುವ ಮೂಲಕ ಪರೋಕ್ಷವಾಗಿ ಬಸ್ ಪ್ರಯಾಣ ದರ ಹೆಚ್ಚಳದ ಸುಳಿವು ನೀಡಿದ್ದಾರೆ.

ಸಾರಿಗೆ ಇಲಾಖೆಯು ಟಿಕೆಟ್ ದರ ಹೆಚ್ಚಳಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಶೀಲನೆ ನಡೆಸುತ್ತಿದೆ. ಡಿಪೋಗಳಲ್ಲಿ ಖರೀದಿಸುವ ಡೀಸೆಲ್ ಮತ್ತು ಖಾಸಗಿಯಾಗಿ ಲಭ್ಯವಿರುವ ಡೀಸೆಲ್ ಬೆಲೆಗಳ ನಡುವೆ ಸುಮಾರು 40 ರೂಪಾಯಿಗಳ ದೊಡ್ಡ ವ್ಯತ್ಯಾಸವಿದೆ. ಈ ಬೆಲೆ ವ್ಯತ್ಯಾಸದಿಂದಾಗಿ, ಕೆಲವು ಖಾಸಗಿ ಸಾರಿಗೆ ನಿರ್ವಾಹಕರು ಡಿಪೋದಿಂದ ಡೀಸೆಲ್ ಖರೀದಿಸುವುದನ್ನು ಬಿಟ್ಟು, ಸಾರ್ವಜನಿಕ ಪೆಟ್ರೋಲ್ ಬಂಕ್‌ಗಳಿಂದ ಡೀಸೆಲ್ ಹಾಕಿಸಿಕೊಳ್ಳುತ್ತಿದ್ದಾರೆ ಎಂದರು.

ಪುಸ್ತಕ ಬಿಡುಗಡೆ

ಮೈಸೂರು, ಜೂ.20– ಮೈಸೂರಿನ ಮಹರ್ಷಿ ವಾಲ್ಮೀಕಿ ಸಾಹಿತ್ಯ ಪರಿಷತ್ತಿನ ವತಿಯಿಂದ ಹೊರ ತಂದಿರುವ 'ವಾಲ್ಮೀಕಿ ಜನಾಂಗದ ಸಾಂಸ್ಕೃತಿಕ ಪ್ರಶ್ನೆಗಳು' ಪುಸ್ತಕ ಬಿಡುಗಡೆ ಸಮಾರಂಭವನ್ನು ಜೂ.21 ರಂದು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಕ್ಲಬ್‌ನಲ್ಲಿ ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ರಾಜ್ಯ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಮಾನಸ ಅವರು ಉದ್ಘಾಟಿಸಲಿದ್ದಾರೆ. ಈ ಈ ವೇಳೆ ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ.ನಂಜುಂಡಸ್ವಾಮಿ, ಕನ್ನಡ ಕಲಾ ಕೂಟದ ಅಧ್ಯಕ್ಷರಾದ ಎಂ.ಚಂದ್ರಶೇಖರ್, ಶಿವಮೊಗ್ಗದ ಕುವೆಂಪು ವಿವಿಯ ನಿರ್ದೇಶಕರಾದ ಪ್ರೊ. ಪ್ರಶಾಂತ್ ನಾಯಕ, ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ ನಿರ್ದೇಶಕ ಸರ್ವೇಶ್, ಮಾನವ ಬಂಧುತ್ವ ವೇದಿಕೆಯ ಸಂಚಾಲಕ ದ್ಯಾವಪ್ಪ ನಾಯಕ ಸೇರಿದಂತೆ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

PUBLIC NOTICE

Under instructions of my Client **Smt. SITHARA K.S.** wife of Sri. Vicky Muthanna B.H. resident of Mutharmudi Village, Murnad Post, Madikeri Taluk, Kodagu District-571 252. negotiating to purchase the property more fully described in the schedule below from its Owner **SRI. PRAVEEN P.R.,** son of Sri. Ravindranathan residing at No. 239, RMP Colony, Yelwala, Mysore 571130. Any person/s, interested parties, claimants, Agreement Holders, Banks, Financial institutions and/or statutory authorities having/asserting any right, title, interest, claims of any nature or any lien, charge, enforceable right or intending to oppose the development and/or has/have any objections of any nature to the aforesaid transaction should lodge such claims or objections in writing to the undersigned together with documentary proof/supporting documents within **SEVEN DAYS** from the date of publication of this notice, failing which it will be presumed that no valid claims or objections subsist and where after no such claims will be entertained.

All that piece and parcel of residential vacant **Site No.34, Block 'B', in Sky Top Green City, SBI Officers Layout, situated at Karakanahalli Village,** Yelwala Grama Panchayath, Yelwala Hobli, Mysore Taluk bearing **Property No.71/6/34** of Yelwala Grama Panchayath and Property No. 152200403160020178 and the said vacant Site is **measuring East to West: 12.00 Meters and North to South 18.00 Meters totally measuring 216.00 Square meters** and the said vacant site has been carved in the land bearing Sy. No. 57 extent 05 acre 16 guntas, Sy. No. 59 extent 01 acre 20 guntas, Sy. No. 69 extent 01 acre 30 guntas, Sy. No. 68/1 extent 02 acre 21 guntas and Sy. No. 70/3 extent 02 acres 06 guntas, totally 13 acre 13 guntas, and all the lands are situated at Karakanahalli Village, Yelwala Hobli, Mysore Taluk bounded on: East by: Site No. 33; West by: Site No. 35; North by: Road; South by: Site No.48.

Sd/- **A.N. Puttaswamygowda.**
B.A. LL.B., ADVOCATE & NOTARY
324/1, D. Subbaiah Road
MYSURU-570 004
Mobile: 96205 62745
Date: 20.06.2026

50ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಷಯಗಳು


ಶ್ರೀಮತಿ ಗಾಯಿತ್ರಿ & ಶಿವನಂಜೇಗೌಡ
ಶುಭಕೋರುವವರು:
ಶ್ರೀಮತಿ ಎಸ್.ಆರ್. ಶಕುಂತಲ & ಎನ್.ಸಿ. ನಂಜುಂಡಸ್ವಾಮಿ ಮತ್ತು ಕುಟುಂಬವರ್ಗ, ಹೆಬ್ಬಾಳು, ಮೈಸೂರು

WANTED
D.Ed/B.Ed/Post Graduate Fluent in English for English Medium School in Mandya. Salary: Rs. 25000/- Onwards
6360801993 / 9380378219

ತಕ್ಷಣ ಬೇಕಾಗಿದ್ದಾರೆ
ವಿರಾಜಪೇಟೆ, ಮಡಿಕೇರಿ, ಕುಶಾಲನಗರ ಸುತ್ತಮುತ್ತ ಸೆಕ್ಯೂರಿಟಿ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಉಚಿತ ಊಟ, ವಸತಿ, ಆಕರ್ಷಕ ವೇತನ, ಪಿಎಫ್, ಇಎಸ್‌ಐ ಸೌಲಭ್ಯ ನೀಡಲಾಗುತ್ತದೆ. ಸಂಪರ್ಕಿಸಿ:
8762806366 / 9111094442

ವಧು ಬೇಕಾಗಿದೆ
SC (Adi Karnataka)
ಮೂಲತಹ ಮೈಸೂರಿನವರಾದ 28 ವರ್ಷ ಪ್ರಾಯದ, ಹೈದ್ರಾಬಾದ್‌ನಲ್ಲಿ ನೆಲೆಸಿರುವ ಸುಂದರ್ ಪದವೀಧರ Software ಕೆಲಸದಲ್ಲಿರುವ ಯುವಕನಿಗೆ ಸುಂದರ್ ಪದವೀಧರೆ ಸುಸಂಸ್ಕೃತ ಕುಟುಂಬ ಹಿನ್ನೆಲೆ ಕೆಲಸದಲ್ಲಿರುವ ಅದೇ ಸಮುದಾಯದ ವಧು ಬೇಕಾಗಿದೆ.
ಸಂಪರ್ಕಿಸಿ:
9949674388 / 9845346039

FOR SALE
40'x60' (G+2)
[3 storey built house]
with all modern amenities at Sardar Vallabhbhai Patel Nagar, Mysuru. Contact:
Mob: 6360059032


ಕಾಣೆಯಾದ ಹಸ್ಕಿ ನಾಯಿ "ವೀರ್"
ವಿವರಗಳು: ವಯಸ್ಸು: 1.6 ವರ್ಷ, ಕಪ್ಪು–ಬಿಳಿ ಬಣ್ಣ, ದಟ್ಟವಾದ ಕೂದಲು, ಎಡ ಕಣ್ಣಿನ ಭಾಗದಲ್ಲಿ ಅರ್ಧ ಬಿಳಿ, ಅರ್ಧ ಕಪ್ಪು ಬಣ್ಣದ ವಿಶಿಷ್ಟ ಗುರುತು ಇದೆ. ಸ್ವಭಾವದಲ್ಲಿ ಸ್ನೇಹಪರ ಕೊನೆಯದಾಗಿ ಶ್ರೀರಂಗಪಟ್ಟಣ Post Office ರೋಡ್, ಕಾವೇರಿ ಶಾಲೆ ಹತ್ತಿರ, ಮಂಗಳವಾರ ರಾತ್ರಿ 10:00 ಗಂಟೆಗೆ. ಕಾಣೆಯಾಗಿದೆ. ಯಾರಿಗಾದರೂ ಈ ನಾಯಿಯ ಬಗ್ಗೆ ಮಾಹಿತಿ ದೊರೆತಲ್ಲಿ ದಯವಿಟ್ಟು ಕೆಳಗಿನ ಸಂಖ್ಯೆಗಳಿಗೆ ಸಂಪರ್ಕಿಸಿ: ನಿಖರ ಮಾಹಿತಿ ನೀಡಿದವರಿಗೆ ಸೂಕ್ತ ಬಹುಮಾನ ನೀಡಲಾಗುವುದು.
8904165493 / 7676911162

47
ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಜೈ ಶ್ರೀ ಗುರುದೇವ್
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ
ವಿಜಯನಗರ, ಬೆಂಗಳೂರು - 560040
ಉನ್ನತ ವ್ಯಾಸಂಗಕ್ಕಾಗಿ ಬೆಂಗಳೂರು ನಗರಕ್ಕೆ ಬರುವ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ಸುಸಜ್ಜಿತವಾದ ವಿದ್ಯಾರ್ಥಿ/ ವಿದ್ಯಾರ್ಥಿನಿ ನಿಲಯಗಳ ವ್ಯವಸ್ಥೆ ಇರುತ್ತದೆ
ಅವಶ್ಯಕತೆ ಇರುವವರು ಸಂಪರ್ಕಿಸಿ-080 41270081

Hi! TAXI
ONLY ONE WAY TAXI CHARGE
MYSORE to BANGALORE
City drop or Pick up
BANGALORE to MYSORE
Airport drop or Pick up
MYSURU
9611177599

5ನೇ ವರ್ಷದ ಪುಣ್ಯಸ್ಮರಣೆ

1959-2021
ಶ್ರೀ ಬಿ.ಶಂಭಣ್ಣ ಎಸ್.ಎಂ. ಟೆಂಟ್‌ಹೌಸ್ ಮಾಲೀಕರು
ನೀವು ನಮ್ಮನ್ನಗಲಿ ಇಂದಿಗೆ ೫ ವರ್ಷ ಕಳೆದರೂ ನಿಮ್ಮ ನೆನಪಿನಲ್ಲೇ ಇರುವ
ದುಃಖತಪ್ತರು: ಪತ್ನಿ ಕೆಂಪಮ್ಮ, ಮಕ್ಕಳು ಹಾಗೂ ಮೊಮ್ಮಕ್ಕಳು
ಜಯನಗರ, ಮೈಸೂರು

SITES FOR SALE
Near Vajamangala, T.Narasipura Road & Near Upkar Layout, Hunsur. Contact:
8123387555
7259348777

FOR SALE
Commercial Property Nr BEML Arch, Srirampura
20x30,20x35, 30x40 Sites @ Bogadi,Rainbow School
30x50, 40x60, 50x80 Sites Near RT Nagar, Defence Apartments
2&3 BHK Apartments, With All Amenities @ Ramkrishna Nagar.
40x60 Site @ Sharadha Layout & 30x50 House Near Infosys
95386 90359, 90359 90359

COMMERCIAL SPACE FOR RENT
BASEMENT: 2600 SqFt.,
GROUND FLOOR: 2350 SqFt.,
FIRST FLOOR: 2950 SqFt.,
SECOND FLOOR: 2950 SqFt.,
ROOF TOP: 2950 SqFt.,
CONTACT:
9449254477 / 9141446761
Add: KHB 80ft Road, Hootagalli, Mysore

Teakwood Doors
10 YEARS WARRANTY
@ DEPOT RATES
9901291267
9845426862

ವರ ಬೇಕಾಗಿದ್ದಾರೆ
28 ವರ್ಷದ ಉದ್ಯೋಗಸ್ಥ ಕನ್ಯೆಗೆ ನಾಯಕ ಜನಾಂಗದ ವರ ಬೇಕಾಗಿದ್ದಾರೆ.
9448801367
8310884510

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ


REQUIRED TEACHERS
- B.Sc., B.Ed. (Mathematics)
- B.A., B.Ed. (English)
- B.Sc., B.Com. (English Fluency)
- Montessori Trainer (LKG & UKG)
- B.Ped / M.Ped

kalabharathi1991@gmail.com
9535333467
9611987171

HP
ಕೇವಲ ₹749/ ಪ್ರತಿ ಚದರ ಅಡಿ
ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಶಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಬುಕಿಂಗ್ ಪ್ರಾರಂಭವಾಗಿದೆ
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ
30x40 | 30x50
40x60 | 50x80
ಅಲತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
MUDA LIMITS
ಸುಲಭ 4 ಕಂತುಗಳ ಸೌಲಭ್ಯವಿದೆ
ಹೈಲ್ಯಾಂಡ್ ಪ್ರಾಪರ್ಟೀಸ್
88840 71010
90713 86615

JNANA GANGOTRI CONVENT
English medium, Rajendra Nagara, Mysore
WE ARE HIRING HEAD MISTRESS
For Grades I to X
Graduate / Post-graduate with B.Ed., Administration & Teaching experience, ability to teach English subject.
WALK IN WITH ORIGINALS
Contact: 9113980741

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಸೇಲ್
UPTO 80% OFF
ಮಹಿಳೆಯರ ಬ್ರಾಂಡೆಡ್ ಬ್ರಾಗಳು, ಒಳ ಉಡುಪುಗಳು, ಜಾಕೆಟ್, ಪುಲ್‌ಓವರ್, ಶೇಪ್‌ವೇರ್ ನೈಟ್‌ವೇರ್ ಮತ್ತು ಟ್ರ್ಯಾಕ್‌ಪ್ಯಾಂಟ್
ಪುರುಷರ ಜೀನ್ಸ್ | ಶರ್ಟ್ಸ್ ಟಿ–ಶರ್ಟ್ಸ್ | ಕಾಟನ್ ಪ್ಯಾಂಟ್ಸ್ | ಫಾರ್ಮಲ್ ಶರ್ಟ್ಸ್
ಫಾರ್ಮಲ್ ಪ್ಯಾಂಟ್ಸ್ ಮತ್ತು ಇನ್ನೂ ಮುಂತಾದ ಉಡುಪುಗಳು ದೊರೆಯುತ್ತದೆ
ಸ್ಥಳ : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್
ಜೆ.ಎಲ್.ಬಿ. ರಸ್ತೆ, ಮೈಸೂರು – 05 | TIME : 10 AM TO 10 PM

"Yoga is an invaluable gift of India's ancient tradition, indeed it is the rejuvenation for your Body Mind & Soul"
Wishing Peace & Harmony on the occasion of
INTERNATIONAL YOGA DAY 21.6.2026

NIRVANA yoga shala (Mystic School)
FOUNDER Shashi Guruji
- Ashtanga yoga
- Hatha Yoga
- Restorative yoga
- Pranayama
- Meditation

Nirvana Yoga Shala
100, 3rd 'A' Main Road, Gokulam 2nd Stage, Near the Park, Mysuru - 570 002. Contact:
Mob: 8050658555 / 9019140645/
Ph:+91 821 – 4288490.
Email: info@mysoreyoga.in

NEW HORIZON ENGINEERING Pvt. Ltd. (NHE), Regd.
Works : B3, KSSIDC Industrial Area, Nanjangud - 571 302
Manufacturer of Rubber and Engineering Plastic Components for automobile and non-automobile applications.
Position : ENGINEER – QUALITY
(Plastic Injection Moulding Operations)
REQUIREMENTS :
Qualification : Degree -
B.Sc., / Any Diploma Engineering / CIPET / GTTC
Minimum 4 to 5 years experience in Plastics Injection Moulding.
Exposure to ISO / IATF Quality Management systems
Male candidate, age below 45 years preferred.
Email : hbramesha@newhorizonengineering.in

TODAY LAST DAY
12th JUNE - 21st JUNE 2026
ಫರ್ನಿಚರ್ ಎಕ್ಸ್‌ಪೋ 2026
FURNITURE EXPO 2026
UPTO 70% OFF ON ENTIRE RANGE
KERALA SAMAJAM
80ft Road, Vijaynagar 2nd Stage, Mysore
LOCATION

LUXURY SOFA COLLECTION · PREMIUM SOFA COLLECTION · MODERN SOFA RANGE · MAHAGANI DINING SETS · TEAK BEDROOM SETS
RECLINER · ELEGANT
WHOLE SALE PRICE
DIRECT FACTORY SALE
BIG BRANDS BIG DISCOUNTS
DON'T MISS IT!
DIRECTLY FROM MANUFACTURER · BEST QUALITY GUARANTEED · WHOLESALE PRICES FOR EVERYONE · DELIVERY & INSTALLATION AVAILABLE
DON'T MISS IT!
BEST QUALITY FURNITURE · UNBEATABLE PRICES · DIRECT FACTORY SALE
Timings 10.30am to 9.00pm
Visit & Experience the Difference
CAR PARKING | ENTRY FREE 80500 80099

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರುರವರ ಕಛೇರಿ, ವಿದ್ಯುತ್ ವಿಭಾಗ,
ವಾಣಿವಿಲಾಸ ಆವರಣ, ಕೆ.ಆರ್.ಎಸ್ ಮುಖ್ಯ ರಸ್ತೆ, ಯಾದವಗಿರಿ, ಮೈಸೂರು– 570 020.

ಟೆಂ.ಪ್ರ.ಸಂ:ಮೈನಪಾ/ಕಾಅ(ವಿ)/ಟಿಎನ್–06/59/2026–27 ದಿನಾಂಕ: 16.06.2026

ಟೆಂಡರ್ ಪ್ರಕಟಣೆ ಸಂಖ್ಯೆ–06

ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ

ಕ್ರ ಸಂ	ವಿವರ	ಕಾಮಗಾರಿಗಳ ಸಂಖ್ಯೆ	ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಪ್ರೀ–ಬಿಡ್ ಮೀಟಿಂಗ್	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ಆರ್ಥಿಕ ಬಿಡ್ ತೆರೆಯುವ ದಿನಾಂಕ
1	Goods Tender Works	06	ಕೆಪಿಪಿ ಪೋರ್ಟಲ್ ಅನ್ನು ಸಂಪರ್ಕಿಸಿ				

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ವಿ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/357/ಎಸ್‌ಎಸ್ಸಿ/2026–27

ಮಹಾರಾಜ ಟ್ರೋಫಿಗೆ ಅದ್ಧೂರಿ ಚಾಲನೆ: ಕ್ರೀಡಾ ಸಂಭ್ರಮದಲ್ಲಿ ಮಿಂದೆದ್ದ ಮಾನಸ ಗಂಗೋತ್ರಿ



ಮಹಾರಾಜ ಟ್ರೋಫಿ ಟಿ20 ಟೂರ್ನಿಯ ಟ್ರೋಫಿ ಅನಾವರಣಗೊಳಿಸಿದ ಕ್ರಿಕೆಟ್ ದಿಗ್ಗಜ ರೋಜರ್ ಬಿನ್ನಿ ಹಾಗೂ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಇತರ ಗಣ್ಯರು ಉಪಸ್ಥಿತರಿದ್ದಾರೆ.

ಮೈಸೂರು, ಜೂ.20(ವಿವಿಹೆಚ್)- ತಂಪಾದ ಗಾಳಿಯ ಸ್ಪರ್ಶ, ಹಚ್ಚಹಸಿರು ಹುಲ್ಲುಹಾಸಿನ ಹೊದಿಕೆಯಲ್ಲಿ ಮಿಂದೆದ್ದ ಮಾನಸ ಗಂಗೋತ್ರಿ ಆವರಣ, ಕ್ರಿಕೆಟ್ ಉತ್ಸಾಹದಿಂದ ಕಂಗೊಳಿಸಿದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣ... ಇಂತಹ ಹಿತಕರ ವಾತಾವರಣದಲ್ಲಿ ಶನಿವಾರ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಗೆ ವಿದ್ಯುಕ್ತ ಚಾಲನೆ ದೊರೆಯಿತು.

ಮೈದಾನಕ್ಕಿಳಿದ ಆಟಗಾರರ ಉತ್ಸಾಹ, ಪ್ರೇಕ್ಷಕರ ಕೇಕೆ-ಚಪ್ಪಾಳೆಗಳು, ಹಿತಕರ ವಾತಾವರಣ ಆರಂಭದ ಕ್ಷಣಗಳಿಗೆ ವಿಶೇಷ ಮೆರುಗು ನೀಡಿದವು. ಅಲ್ಲದೇ ಯುವ ಪ್ರತಿಭೆಗಳ ಕನಸುಗಳಿಗೆ ಹೊಸ ವೇದಿಕೆಯಾಯಿತು.

ಮಹಾರಾಜ ಟ್ರೋಫಿಯ ಮೊದಲ ದಿನದ ಪಂದ್ಯಗಳು ಕ್ರೀಡಾಭಿಮಾನಿಗಳಿಗೆ ರೋಚಕ ಕ್ಷಣಗಳನ್ನು ನೀಡುವ ಮೂಲಕ ಮೈಸೂರು ಮತ್ತೊಮ್ಮೆ ಕ್ರಿಕೆಟ್ ಸಂಭ್ರಮಕ್ಕೆ ಸಾಕ್ಷಿಯಾಯಿತು.

ಕ್ರಿಕೆಟ್ ಪ್ರೇಮಿಗಳಿಗೆ ಮೊದಲ ದಿನವೇ ರೋಚಕ ಮನರಂಜನೆ ನೀಡಿ ಪ್ರೇಕ್ಷಕ ಮಹೋದಯರ ಮನಗೆದ್ದ ಮಹಾರಾಜ ಟ್ರೋಫಿ, ಯುವ ಪ್ರತಿಭೆಗಳಿಗೆ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ವೇದಿಕೆಯಾಗಿರುವುದು ಮಾತ್ರವಲ್ಲದೇ, ಮುಂದಿನ ದಿನಗಳಲ್ಲಿ ಹಲವು ರೋಚಕ ಪಂದ್ಯಗಳಿಗೆ ಸಾಕ್ಷಿಯಾಗಲಿದೆ.



ಗ್ಲೇಡ್ಸ್ ಮೈದಾನದಲ್ಲಿ ಗಾಯಕ ವಿಜಯ್ ಪ್ರಕಾಶ್ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಗಂಗೋತ್ರಿ ಕ್ರೀಡಾಂಗಣದಲ್ಲಿ ಕ್ರೀಡಾ ಕೌಶಲ್ಯ, ಉತ್ಸಾಹ ಮತ್ತು ಗೆಲುವಿನ ಹೋರಾಟದ ವಾತಾವರಣ ನಿರ್ಮಾಣವಾಗಿದ್ದು, ಅಭಿಮಾನಿಗಳು ತಮ್ಮ ನೆಚ್ಚಿನ ತಂಡಗಳ ಪ್ರದರ್ಶನಕ್ಕಾಗಿ ಕಾತರದಿಂದ ಕಾಯುತ್ತಾ, ಬೆಂಬಲ ನೀಡುವ ಘೋಷಣೆಗಳ ಮೇಳೈಸುತ್ತ, ಆಟಗಾರರ ಆಟವನ್ನು ಆಸ್ವಾದಿಸುತ್ತಿರುವುದು ಕಂಡುಬಂದಿದ್ದು ವಿಶೇಷ.

ಟ್ರೋಫಿ ಅನಾವರಣಗೊಳಿಸಿದ ರೋಜರ್ ಬಿನ್ನಿ-ಪ್ರೊ.ಎನ್.ಕೆ.ಲೋಕನಾಥ್: ಐದನೇ ಆವೃತ್ತಿಯ ಮಹಾರಾಜ ಟ್ರೋಫಿ ಪಂದ್ಯಾವಳಿಯ ಕ್ರಿಕೆಟ್ ಅಭಿಮಾನಿಗಳ ಕುತೂಹಲ ಹೆಚ್ಚಿಸಿದ ಮಹತ್ವದ ಕ್ಷಣಕ್ಕೆ ಸಾಕ್ಷಿಯಾದ ಕಾರ್ಯಕ್ರಮದಲ್ಲಿ, ಟ್ರೋಫಿಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮಾಜಿ ಅಧ್ಯಕ್ಷ ರೋಜರ್ ಬಿನ್ನಿ ಹಾಗೂ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅನಾವರಣಗೊಳಿಸಿದರು.

ಸಂಭ್ರಮದ ವಾತಾವರಣದಲ್ಲಿ ನಡೆದ ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ ಗಣ್ಯರು, ಆಟಗಾರರು ಹಾಗೂ ಅಭಿಮಾನಿಗಳು ಭಾಗವಹಿಸಿ ಕ್ರಿಕೆಟ್ ಹಬ್ಬದ ಕಳೆ ಹೆಚ್ಚಿಸಿದರು. ಟ್ರೋಫಿಯ ಅನಾವರಣದೊಂದಿಗೆ ಮತ್ತಷ್ಟು ಕಳೆಗಟ್ಟಿದ ಈ ಕಾರ್ಯಕ್ರಮ, ಮುಂದಿನ ದಿನಗಳಲ್ಲಿ ನಡೆಯಲಿರುವ ಕ್ರಿಕೆಟ್ ಸಮರಕ್ಕೆ ಭರ್ಜರಿ ಮುನ್ನುಡಿ ಬರೆದಂತಾಯಿತು.

ಮೋಡಿ ಮಾಡಿದ ವಿಜಯ್ ಪ್ರಕಾಶ್ ಗಾಯನ: ಇನ್ನು ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ನೀಡಿದ ಗಾಯಕ ವಿಜಯ್ ಪ್ರಕಾಶ್ ತಮ್ಮ ವಿಶೇಷ ಗಾಯನದಿಂದ ನೆರೆದಿದ್ದವರ ಮೋಡಿ ಮಾಡಿದರು. ಬೆಳಗೆದ್ದು ಯಾರ ಮುಖವ ನಾನು ನೋಡಿದೆ..., ಸಿಂಗಾರ ಸಿರಿಯೇ..., ಹ್ಯಾಂಡ್ಸ್ ಅಪ್..., ಬೊಂಬೆ ಹೇಳುತೈತೆ..., ಜೈ ಹೋ... ಸೇರಿದಂತೆ ಹಲವು ಗೀತೆಗಳನ್ನು ಸಾದರಪಡಿಸುವ ಮೂಲಕ ಕ್ರೀಡಾಸಕ್ತರನ್ನು ಸಂಗೀತ ಕಡಲಲ್ಲಿ ಮುಳುಗುವಂತೆ ಮಾಡಿದರು.

ಉದ್ಘಾಟನಾ ಪಂದ್ಯದಲ್ಲಿ ಬೆಂಗಳೂರು ಶುಭಾರಂಭ

ನಾಯಕ ಶುಭಾಂಗ್ ಹೆಗ್ಡೆ ಆಲ್‌ರೌಂಡರ್ ಪ್ರದರ್ಶನದ ನೆರವಿನಿಂದ ಗುಲ್ಬರ್ಗಾ ಮಿಸ್ಟಿಕ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಮಹಾರಾಜ ಟ್ರೋಫಿ ಟಿ20 ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಉದ್ಘಾಟನಾ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ಮಿಸ್ಟಿಕ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 201 ರನ್ ಕಲೆಹಾಕಿತು. ಈ ಮೊತ್ತ ಬೆನ್ನತ್ತಿದ್ದ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 202 ಬಾರಿಸಿ ಗೆಲುವಿನ ನಗೆ ಬೀರಿತು.

ಮೈಸೂರು ವಾರಿಯರ್ಸ್ ಮಣಿಸಿದ ಶಿವಮೊಗ್ಗ ಯೋಧಾಸ್

ಮೈಸೂರು, ಜೂ.20(ವಿವಿಹೆಚ್)- ಇಲ್ಲಿನ ಗ್ಲೇಡ್ಸ್ ಮೈದಾನದಲ್ಲಿ ನಡೆದ ಟೂರ್ನಿಯ ಎರಡನೇ ಪಂದ್ಯದಲ್ಲಿ ಅತಿಥೇಯ ಮೈಸೂರು ವಾರಿಯರ್ಸ್ ವಿರುದ್ಧ 90 ರನ್‌ಗಳ ಗೆಲುವು ದಾಖಲಿಸಿದ ಶಿವಮೊಗ್ಗ ಯೋಧಾಸ್ ಭರ್ಜರಿ ಆರಂಭ ಪಡೆಯಿತು.

ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 190 ರನ್ ಗಳಿಸಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಮೈಸೂರು 14.5 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 100 ರನ್ ಗಳಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ ತಂಡಕ್ಕೆ ಸಿಸೋಡಿಯಾ 58(38), ತುಷಾರ್ ಸಿಂಗ್ 33(21) ಉತ್ತಮ ಆರಂಭ ಒದಗಿಸಿಕೊಟ್ಟರು. ಇವರ ಬಳಿಕ ಬಂದ ಕೆ.ವಿ.ಅನೀಶ್ ಗೋಲ್ಡನ್ ಡಕ್ ಆದರೆ, ನಾಯಕ ಸಮರ್ ರವಿಚಂದ್ರನ್ 36(227) ಹಾಗೂ ಹರ್ಷಿಲ್ ಧರ್ಮಾನಿ 36(19) ರನ್ ಚಚ್ಚಿದರು. ಉಳಿದಂತೆ ಆದರ್ಶ್ ಪ್ರಜ್ವಲ್ 12(7), ಪರಣ್ಣಾಪ್ 4(3), ನವೀನ್ ಎಂ.ಜಿ., 3(3) ರನ್ ಕಲೆಹಾಕಿದರು. ಮೈಸೂರು ಪರ ನಾಯಕ ವಿಜಯ್ ಕುಮಾರ್ ವೈಶಾಖ್ ಹಾಗೂ ಮನೋಜ್ ಭಂಡಗೆ ತಲಾ 2 ವಿಕೆಟ್, ಲವಿಷ್ ಕುಶಾಲ್, ಮೊನೀಶ್ ರೆಡ್ಡಿ ಹಾಗೂ ಮಾಧವ್ ಬಜಾಜ್ ತಲಾ ಒಂದೊಂದು ವಿಕೆಟ್ ಪಡೆದರು.

ಈ ಮೊತ್ತ ಬೆನ್ನತ್ತಲು ಮುಂದಾದ ಮೈಸೂರು ವಾರಿಯರ್ಸ್, ಶಿವಮೊಗ್ಗ ದಾಳಿಗೆ ತತ್ತರಿಸಿತು. ಎಸ್.ಯು.ಕಾರ್ತಿಕ್ 16(15), ರಿತೇಶ್ ಭಟ್ಕಳ್ 17(13) ಹಾಗೂ ನಾಯಕ ವಿಜಯ್‌ಕುಮಾರ್ ವೈಶಾಖ್ 13(9) ಹೊರತುಪಡಿಸಿ ತಂಡದ 8 ಮಂದಿ ಆಟಗಾರರು ಒಂದಂಕಿ ಮೊತ್ತಕ್ಕೆ ಔಟಾದರು. ಮಧ್ಯಮ ಕ್ರಮಾಂಕದ ದಿಢೀರ್ ಕುಸಿತ ತಂಡ ಸೋಲಿಗೆ ಪ್ರಮುಖ ಕಾರಣವಾಯಿತು.

ಮೈಸೂರಲ್ಲಿ ಮತ್ತೆ ಅಗ್ನಿ ಅವಘಡ; ಮಕ್ಕಳ ಬಟ್ಟೆ-ಆಟಿಕೆ ಮಾರಾಟ ಮಳಿಗೆಯಲ್ಲಿ ದುರಂತ

● ಸುಟ್ಟು ಕರಕಲಾದ ಅರ್ಧಕ್ಕರ್ಧ ಸಾಮಗ್ರಿಗಳು ● ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡ ಶಂಕೆ ● ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಇಲ್ಲ ● ಕುವೆಂಪುನಗರದ ಪಂಚಮಂತ್ರ ರಸ್ತೆಯಲ್ಲಿರುವ ಮಳಿಗೆ

ಮೈಸೂರು,ಜೂ.20(ಪಿಎಂ)- ದಟ್ಟಗಳ್ಳಿ ರೆಸ್ಟೋರೆಂಟ್‌ನಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಇಬ್ಬರು ಸಜೀವ ದಹನವಾದ ಘಟನೆ ಜನರ ಮನಸ್ಸಿನಿಂದ ಮಾಸುವ ಮುನ್ನವೇ ಮೈಸೂರು ನಗರದಲ್ಲಿ ಶನಿವಾರ ಮಳಿಗೆಯೊಂದರಲ್ಲಿ ನಡೆದ ಅಗ್ನಿ ದುರಂತದಲ್ಲಿ ಸಾಮಗ್ರಿಗಳು ಸುಟ್ಟು ಭಸ್ಮವಾಗಿವೆ. ಅದೃಷ್ಟವಶಾತ್ ಈ ಅಗ್ನಿ ದುರಂತದಲ್ಲಿ ಯಾವುದೇ ಪ್ರಾಣಹಾನಿಯಾಗಿಲ್ಲ.

ಮೈಸೂರಿನ ಕುವೆಂಪುನಗರದ ಇ ಅಂಡ್ ಎಫ್ ಬ್ಲಾಕ್‌ನ ಪಂಚಮಂತ್ರ ರಸ್ತೆಯ ಲಿಟಲ್ ಬೇಬಿ ಸ್ಟೋರ್‌ನಲ್ಲಿ ಶನಿವಾರ ಬೆಳಗ್ಗೆ ಅಗ್ನಿ ಅನಾಹುತ ನಡೆದಿದೆ. ದುರ್ಘಟನೆ ವೇಳೆ ಈ ಮಳಿಗೆಯಲ್ಲಿ ಯಾರೂ ಇಲ್ಲದ ಹಿನ್ನೆಲೆ ಯಾವುದೇ ಪ್ರಾಣ ಹಾನಿಯಾಗಿಲ್ಲ. ಶಿಶುಗಳ ಬಟ್ಟೆ-ಬರೆ, ಆಟಿಕೆ, ಸೋಪು, ಶ್ಯಾಂಪು, ಸೈಕಲ್ ಮೊದಲಾದ ಸಾಮಗ್ರಿಗಳ ಮಾರಾಟ ಮಳಿಗೆ ಇದಾಗಿದ್ದು, ಅರ್ಧಕ್ಕರ್ಧ ಸಾಮಗ್ರಿಗಳು ಅಗ್ನಿಗಾಹುತಿಯಾಗಿವೆ.



ಮೈಸೂರಿನ ಕುವೆಂಪುನಗರದ ಮಕ್ಕಳ ಬಟ್ಟೆ-ಆಟಿಕೆ ಮಾರಾಟ ಮಳಿಗೆಯಲ್ಲಿ ಸಾಮಗ್ರಿಗಳು ಅಗ್ನಿಗಾಹುತಿಯಾಗಿರುವುದು.

▶▶ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಹೆಚ್ಚಿನ ಬೆಂಕಿ ಅನಾಹುತಗಳು ಸಂಭವಿಸುತ್ತಿದ್ದು, ಹಾಗಾಗಿ ಮನೆಯಾಗಲಿ, ಮಳಿಗೆಯೇ ಆಗಲಿ ಅಥವಾ ಯಾವುದೇ ಸ್ಥಳವಾದರೂ ನಿಯಮಿತವಾಗಿ ವಿದ್ಯುತ್ ಸಂಪರ್ಕಗಳನ್ನು ಪರಿಶೀಲಿಸುವುದು ಅಗತ್ಯವಾಗಿದೆ. ಅಲ್ಲದೆ, ವಿದ್ಯುತ್ ಉಪಕರಣಗಳನ್ನು ಸೂಕ್ತ ಹಾಗೂ ಸುರಕ್ಷಿತ ರೀತಿಯಲ್ಲಿ ಬಳಕೆ ಮಾಡುವ ಮೂಲಕ ಅಗ್ನಿ ಅವಘಡ ತಪ್ಪಿಸಬಹುದಾಗಿದೆ. ವಿದ್ಯುತ್ ಸಾಕೆಟ್‌ಗಳ ಸುರಕ್ಷಿತ ಬಳಕೆ ಹಾಗೂ ಸೂಕ್ತ ರೀತಿ ವೆಂಟಿಲೇಟರ್ ವ್ಯವಸ್ಥೆ ಸಹ ಮುಖ್ಯವಾಗುತ್ತದೆ.

ನೆಲಮಹಡಿಯಲ್ಲಿರುವ ಈ ಮಳಿಗೆಯಲ್ಲಿ ಇಂದು ಬೆಳಗ್ಗೆ 5.45ಕ್ಕೆ ಬೆಂಕಿ ಕಾಣಿಸಿಕೊಂಡಿದೆ. ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಧಾವಿಸಿ ಬಂದ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಸಿಬ್ಬಂದಿ ಸುಮಾರು ಅರ್ಧ ಗಂಟೆ ಕಾಲ ಕಾರ್ಯಾಚರಣೆ ನಡೆಸಿ ಸಂಪೂರ್ಣವಾಗಿ ಬೆಂಕಿ ನಂದಿಸಿದರು.

ಎಸಿಯಲ್ಲಿ ಶಾರ್ಟ್ ಸರ್ಕ್ಯೂಟ್: ಎಸಿ (ಏರ್ ಕಂಡೀಷನರ್) ಆನ್ ಮಾಡಿದ್ದ ಕಾರಣ ಓವರ್‌ಲೋಡ್ ಆಗಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಆದ ಪರಿಣಾಮ ಅಗ್ನಿ ಕಾಣಿಸಿಕೊಂಡಿದೆ ಎಂದು ಶಂಕಿಸಲಾಗಿದೆ. ಪರಿಣಾಮ ಮಳಿಗೆಯಲ್ಲಿ ಮಕ್ಕಳ ಬಟ್ಟೆ, ಆಟಿಕೆ ಸೇರಿದಂತೆ ಮೊದಲಾದ ಸಾಮಗ್ರಿಗಳು ಅರ್ಧಕ್ಕರ್ಧ ಸುಟ್ಟು ಹೋಗಿದ್ದು, ಇದರೊಂದಿಗೆ ಎಸಿ ಹಾಗೂ ಕಂಪ್ಯೂಟರ್‌ವೊಂದಕ್ಕೂ ಹಾನಿಯಾಗಿದೆ. ಈ ದುರಂತ ಸಹ ಭಾರೀ ಪ್ರಮಾಣದ ಅಗ್ನಿ ಅವಘಡವಾಗಿದ್ದು, ಅದೃಷ್ಟವಶಾತ್ ಮಳಿಗೆಯಲ್ಲಿ ಯಾರೂ ಇಲ್ಲದ ಹಿನ್ನೆಲೆಯಲ್ಲಿ ಯಾವುದೇ ಪ್ರಾಣಹಾನಿಯಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಅಗ್ನಿ ನಂದಿಸುವ ಎರಡು ವಾಹನಗಳೊಂದಿಗೆ ಸರಸ್ವತಿಪುರಂ ಅಗ್ನಿಶಾಮಕ ಠಾಣಾಧಿಕಾರಿ ಎಂ.ಎಸ್.ನಿಜಗುಣ ನೇತೃತ್ವದಲ್ಲಿ 10 ಮಂದಿ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಯಶಸ್ವಿಯಾಗಿ ಬೆಂಕಿ ನಂದಿಸಿದರು.

ಪ್ರಶಸ್ತಿ ಪ್ರದಾನ



ಮೈಸೂರು ವಿಶ್ವವಿದ್ಯಾಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ಹಾಗೂ ಮೈಸೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಶುಕ್ರವಾರ ನಡೆದ ವಿಜ್ಞಾನ-ತಂತ್ರಜ್ಞಾನ ಕನ್ನಡೋತ್ಸವ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಾಮನಕೆರೆಹುಂಡಿ ಹೆಚ್.ಗಿರೀಶ್‌ಗೌಡ ಸೇರಿದಂತೆ ಹಲವು ಸಾಧಕರಿಗೆ ಪ್ರಶಸ್ತಿ ನೀಡಿ, ಗೌರವಿಸಲಾಯಿತು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಮುಂದಿನ ಫುಟ್‌ಪಾತ್ ತೆರವುಗೊಳಿಸಿದ ಸಂಚಾರ ಪೊಲೀಸರು!

ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿಯಿಂದ ಪಾದಚಾರಿಗಳ 'ಹಕ್ಕು' ಹರಣ ಆರೋಪ



ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಬಳಿಯ ಫುಟ್‌ಪಾತ್ ಆಕ್ರಮಿಸಿಕೊಂಡಿದ್ದ ವ್ಯಾಪಾರಿಗಳು.



ಪೊಲೀಸರ ಕ್ರಮದ ಹಿನ್ನೆಲೆಯಲ್ಲಿ ಪಾದಚಾರಿಗಳ ಸಂಚಾರಕ್ಕೆ ಮುಕ್ತವಾಗಿರುವುದು

ಮೈಸೂರು, ಜೂ.20(ಜಿಎ)-ಮೈಸೂರಿನ ಫುಟ್‌ಪಾತ್‌ಗಳಲ್ಲಿ ಹೆಚ್ಚುತ್ತಿರುವ ಕಳ್ಳತನ ಹಾಗೂ ದೌರ್ಜನ್ಯಕ್ಕೆ ಕಡಿವಾಣ ಹಾಕಲು ಮುಂದಾಗಿರುವ ಪೊಲೀಸರು, ಫುಟ್‌ಪಾತ್‌ಗಳ ಅತಿಕ್ರಮಿಸಿಕೊಂಡಿರುವ ವ್ಯಾಪಾರಿಗಳನ್ನು ತೆರವುಗೊಳಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ.

ನಗರದ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಇರುವ ಪ್ರೀಪೇಡ್ ಆಟೋ ನಿಲ್ದಾಣದ ಬಳಿಯ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿದ್ದ 20ಕ್ಕೂ ಹೆಚ್ಚು ವ್ಯಾಪಾರಿಗಳನ್ನು ಸಂಚಾರ ವಿಭಾಗದ ಪೊಲೀಸರು ತೆರವುಗೊಳಿಸಿ, ಜನ ಸುಗಮವಾಗಿ ಓಡಾಡಲು ಅನುವು ಮಾಡಿಕೊಟ್ಟಿದ್ದಾರೆ.

> ಗ್ರಾಮಾಂತರ ಬಸ್ ನಿಲ್ದಾಣದ ಸಮೀಪದ ಫುಟ್‌ಪಾತ್ ಅನ್ನು ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದರಿಂದ ಪಿಕ್‌ಪಾಕೆಟ್, ಹೆಂಗಸರು, ಯುವತಿಯರನ್ನು ಚುಡಾಯಿಸುವುದು ಹಾಗೂ ಸಣ್ಣಪುಟ್ಟ ಗಲಾಟೆಗಳು ನಡೆಯುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿದ್ದವು. ಈ ಹಿನ್ನೆಲೆಯಲ್ಲಿ ಅಲ್ಲಿದ್ದ ವ್ಯಾಪಾರಿಗಳನ್ನು ತೆರವು ಮಾಡಿಸಿ, ಸಾರ್ವಜನಿಕರು ಓಡಾಡಲು ಅನುವು ಮಾಡಿಕೊಡಲಾಗಿದೆ. ಇಲ್ಲಿ ನಡೆಯುತ್ತಿದ್ದ ಕಳ್ಳತನಕ್ಕೆ ಕಡಿವಾಣ ಹಾಕಲು ನಾವೇ ಮುತುವರ್ಜಿ ವಹಿಸಿದ್ದೇವೆ. ಬೇರೆ ರಸ್ತೆಗಳಲ್ಲಿಯೂ ಈ ರೀತಿ ಫುಟ್‌ಪಾತ್ ತೆರವುಗೊಳಿಸಲು ಪಾಲಿಕೆ ಕ್ರಮ ಕೈಗೊಳ್ಳಬೇಕು.
> -ಶಿವಶಂಕರ್, ಎಸಿಪಿ, ಸಂಚಾರ ವಿಭಾಗ

ದೊಡ್ಡ ಗಡಿಯಾರ ವೃತ್ತ ಹಾರ್ಡಿಂಜ್ ವೃತ್ತದ ಕಡೆಯಿಂದ ಬರುವವರು ಇದೇ ಫುಟ್‌ಪಾತ್ ಮೂಲಕ ಹಾದುಹೋಗಬೇಕು. ಆದರೆ, ಫುಟ್‌ಪಾತ್‌ನಲ್ಲೇ ಹತ್ತಾರು ವ್ಯಾಪಾರಿಗಳು ಠಿಕಾಣಿ ಹೂಡಿದ್ದರಿಂದ ಪಾದಚಾರಿಗಳಿಗೆ ತೀವ್ರ ತೊಂದರೆಯಾಗಿತ್ತು. ಅದರಲ್ಲೂ ಮಹಿಳೆಯರು, ಮಕ್ಕಳು, ವೃದ್ಧರಿಗಂತೂ ಇಲ್ಲಿ ನಡೆದು ಸಾಗುವುದು ನರಕಯಾತನೆಯಾಗಿತ್ತು. ಕೆಲ ಸಂದರ್ಭಗಳಲ್ಲಿ ಜನದಟ್ಟಣೆ ಹೆಚ್ಚಾಗಿ ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗುತ್ತಿತ್ತು. ಇದರ ಅರಿವಿದ್ದರೂ ನಗರ ಪಾಲಿಕೆ ಅಧಿಕಾರಿಗಳು ತಲೆಕೆಡಿಸಿಕೊಂಡಿರಲಿಲ್ಲ. ದೂರು ನೀಡಿದರೂ ಪಾದಚಾರಿಗಳ ಅನುಕೂಲಕ್ಕಾಗಿ ಯಾವುದೇ ಕ್ರಮ ಕೈಗೊಂಡಿರಲಿಲ್ಲ ಎಂದು ಈ ಫುಟ್‌ಪಾತ್ ಅವಾಂತರದಿಂದ ನಿತ್ಯ ಸಂಕಷ್ಟ ಅನುಭವಿಸುತ್ತಿದ್ದ ಪಾದಚಾರಿಗಳು ದೂರಿದ್ದಾರೆ.

ಪರಿಸ್ಥಿತಿ ಅರಿತ ನಗರ ಸಂಚಾರ ವಿಭಾಗದ ಪೊಲೀಸರು, ಪಾದಚಾರಿಗಳ ನೆರವಿಗೆ ಧಾವಿಸಿದ್ದಾರೆ. ಜೂ.17ರಂದು ಸಂಚಾರ ವಿಭಾಗದ ಎಸಿಪಿ ಶಿವಶಂಕರ್, ದೇವರಾಜ ಸಂಚಾರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪ್ರಸನ್ನ ಅವರು ಬಸ್ ನಿಲ್ದಾಣದ ಸಮೀಪದ ಪ್ರೀಪೇಯ್ಡ್ ಆಟೋ ನಿಲ್ದಾಣದ ಬಳಿಯ ವ್ಯಾಪಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದರು. ಫುಟ್‌ಪಾತ್‌ನಿಂದ ವ್ಯಾಪಾರ ತೆರವುಗೊಳಿಸಿ, ಪಾದಚಾರಿಗಳ ಓಡಾಟಕ್ಕೆ ಮುಕ್ತಗೊಳಿಸದಿದ್ದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದರು. ಪರಿಣಾಮ ವ್ಯಾಪಾರಿಗಳು ಸದ್ಯ ಜಾಗ ಖಾಲಿ ಮಾಡಿದ್ದಾರೆ.

ನಿತ್ಯ ಪರಿಶೀಲನೆ: ಸಾರ್ವಜನಿಕರ ದೂರಿನನ್ವಯ ಈ ಹಿಂದೆಯೂ ಪೊಲೀಸರು ಫುಟ್‌ಪಾತ್ ವ್ಯಾಪಾರ ತೆರವುಗೊಳಿಸಿದ್ದರು. ಆದರೆ ಕೆಲ ದಿನಗಳ ನಂತರ ಯಥಾಸ್ಥಿತಿ ನಿರ್ಮಾಣವಾಗಿತ್ತು. ಫುಟ್‌ಪಾತ್‌ನಲ್ಲೇ ಪಾದರಕ್ಷೆ, ಬಟ್ಟೆ ಸೇರಿದಂತೆ ವಿವಿಧ ವಸ್ತುಗಳ ವ್ಯಾಪಾರ ಭರಾಟೆ ಜೋರಾಗಿತ್ತು. ಗ್ರಾಹಕರ ಗಮನ ಸೆಳೆಯಲು ನಿರಂತರವಾಗಿ ಜೋರಾಗಿ ಕೂಗುತ್ತಿದ್ದರು. ಕಿಷ್ಕಿಂದ ಸ್ಥಳದಲ್ಲಿ ನುಸುಳಿ ಹೋಗುತ್ತಿದ್ದ ಪಾದಚಾರಿಗಳು ಮತ್ತೊಂದು ರೀತಿಯ ಕಿರಿಕಿರಿ ಅನುಭವಿಸುತ್ತಿದ್ದರು. ಆದ್ದರಿಂದ ಈ ಬಾರಿ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ಫುಟ್‌ಪಾತ್ ತೆರವುಗೊಳಿಸಿರುವ ವ್ಯಾಪಾರಿಗಳು ಮತ್ತೆ ಬಾರದಂತೆ ನಿತ್ಯ ಸ್ಥಳ ಪರಿಶೀಲನೆ ನಡೆಸುತ್ತಿದ್ದಾರೆ.

ಪಕ್ಕದ ರಸ್ತೆ ಸ್ಥಿತಿ ಬದಲಾಗಿಲ್ಲ: ಸದ್ಯ ಪೊಲೀಸರು ಪ್ರೀಪೇಯ್ಡ್ ಆಟೋ ನಿಲ್ದಾಣದ ಬಳಿಯ ಫುಟ್‌ಪಾತ್ ವ್ಯಾಪಾರಿಗಳನ್ನು ಮಾತ್ರ ತೆರವು ಮಾಡಿಸಿದ್ದಾರೆ. ಆದರೆ, ಇದರ ಪಕ್ಕದ ಚಂದ್ರಗುಪ್ತ ರಸ್ತೆಯ ಫುಟ್‌ಪಾತ್ ದುಃಸ್ಥಿತಿ ಬದಲಾಗಿಲ್ಲ. ಇಲ್ಲಿಯೂ ಪಾದಚಾರಿಗಳ ಮಾರ್ಗವನ್ನು ಸಂಪೂರ್ಣವಾಗಿ ಅತಿಕ್ರಮಿಸಿ ಕೊಳ್ಳಲಾಗಿದೆ. ಪಾದಚಾರಿಗಳು ಓಡಾಡಬೇಕಾದ ಸ್ಥಳದಲ್ಲಿ ತಳ್ಳು ಗಾಡಿಗಳನ್ನು ನಿಲ್ಲಿಸಿಕೊಂಡು ವ್ಯಾಪಾರ ಮಾಡಲಾಗುತ್ತಿದೆ. ಪರಿಣಾಮ ಪಾದಚಾರಿಗಳು ಅನಿವಾರ್ಯವಾಗಿ ವಾಹನಗಳ ನಡುವೆಯೇ ರಸ್ತೆಯಲ್ಲೇ ಓಡಾಡಬೇಕಿದೆ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ನಗರದ ಹಲವೆಡೆ ಇದೇ ದುಃಸ್ಥಿತಿ: ಬಸ್ ನಿಲ್ದಾಣದ ಬಳಿ ಮಾತ್ರವಲ್ಲ ನಗರದ ಬಹುತೇಕ ರಸ್ತೆಗಳ ಫುಟ್‌ಪಾತ್‌ಗಳು ಪಾದಚಾರಿಗಳಿಗೆ ಮುಕ್ತವಾಗಿಲ್ಲ. ಮಳಿಗೆಯವರು ಒಂದಷ್ಟು ಜಾಗವನ್ನು ಅತಿಕ್ರಮಿಸಿಕೊಂಡರೆ, ಇನ್ನಷ್ಟು ಜಾಗವನ್ನು ಬೀದಿಬದಿ ವ್ಯಾಪಾರಿಗಳು ವ್ಯಾಪಿಸಿಕೊಂಡಿದ್ದಾರೆ. ಪಾದಚಾರಿಗಳು ಫುಟ್‌ಪಾತ್ ಬಿಟ್ಟು, ರಸ್ತೆಯಲ್ಲೇ ಓಡಾಡುವಂತಾಗಿದೆ. ಇದರಿಂದ ವಾಹನ ಸಂಚಾರಕ್ಕೂ ಅಡ್ಡಿಯಾಗುವುದರ ಜೊತೆಗೆ ಅಪಘಾತಗಳೂ ಸಂಭವಿಸುತ್ತಿವೆ. ಫುಟ್‌ಪಾತ್‌ಗಳಲ್ಲಿ ಜನದಟ್ಟಣೆ ನಡುವೆ ಪಿಕ್ ಪ್ಯಾಕೇಟ್, ಪುಂಡರು ಮಹಿಳೆಯರು-ಯುವತಿಯರನ್ನು ಹಿಂಸಿಸುವುದು, ಪ್ರಶ್ನಿಸಿದವರ ಮೇಲೆಯೇ ದಾಳಿಗೆ ಮುಂದಾಗುವುದು ಸರ್ವೇಸಾಮಾನ್ಯವಾಗಿದೆ. ಈ ಗಂಭೀರ ಸಮಸ್ಯೆಯನ್ನು ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ್ಯಿಸುತ್ತಿರುವುದು ವಿಷಾದನೀಯ ಎಂದು ಜನ ಕಿಡಿಕಾರಿದ್ದಾರೆ.

ಪಾದಚಾರಿ ಮಾರ್ಗಗಳಲ್ಲಿ ಓಡಾಡುವುದು ಜನರ ಹಕ್ಕು

ಮೈಸೂರು: ನಿಗದಿತ ಪಾದಚಾರಿ ಮಾರ್ಗಗಳಲ್ಲಿ ನಡೆದಾಡುವುದು ಸಂವಿಧಾನದ ಅಡಿಯಲ್ಲಿ ಮೂಲಭೂತ ಹಕ್ಕು ಎಂದು ಸುಪ್ರೀಂಕೋರ್ಟ್ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಎ.ಎಸ್.ಚಂದದೂರ್ಕರ್ ಅವರಿದ್ದ ದ್ವಿಸದಸ್ಯ ಪೀಠವು, ಮೊನ್ನೆಯಷ್ಟೇ ಐದು ವರ್ಷದ ಬಾಲಕನ ಸಾವಿಗೆ ಕಾರಣವಾದ ವಾಹನ ಅಪಘಾತ ಪರಿಹಾರ ಪ್ರಕರಣದ ವಿಚಾರಣೆ ವೇಳೆ ಈ ಮಹತ್ವದ ತೀರ್ಪು ಪ್ರಕಟಿಸಿದೆ.

ಪಾದಚಾರಿಗಳು ಪ್ರತ್ಯೇಕವಾಗಿ ನಿಗದಿಪಡಿಸಿರುವ ಪಾದಚಾರಿ ಮಾರ್ಗಗಳಲ್ಲಿ ನಡೆಯುವ ಹಕ್ಕು ಅತ್ಯಂತ ಮಹತ್ವದ್ದಾಗಿದೆ. ರಸ್ತೆಗಳಲ್ಲಿ ಮೋಟಾರು ವಾಹನಗಳ ಸಂಚಾರಕ್ಕಿಂತಲೂ ಈ ಹಕ್ಕಿಗೆ ಆದ್ಯತೆ ನೀಡಬೇಕು. ನಡೆಯುವ ಹಕ್ಕು ಸಂವಿಧಾನದ ಅಡಿಯಲ್ಲಿ ಮೂಲಭೂತ ಹಕ್ಕಾಗಿದ್ದು, ಇದು ಸಂವಿಧಾನದ 19(1)(ಎ), 19(1)(ಬಿ), 19(1)(ಸಿ) ಮತ್ತು 21ನೇ ವಿಧಿಯ ಅಡಿಯಲ್ಲಿ ಖಾತರಿಪಡಿಸಲಾದ ಮುಕ್ತವಾಗಿ ಸಂಚರಿಸುವ ಹಕ್ಕಿನ ಭಾಗವಾಗಿದೆ ಎಂದು ಹೇಳಿದೆ.

ರಸ್ತೆಯು ಅಸ್ತಿತ್ವದಲ್ಲಿದ್ದರೆ ಅದರ ಎರಡೂ ಬದಿಗಳಲ್ಲಿ ಸ್ಥಳ ನಿಗದಿಪಡಿಸಿ ಪಾದಚಾರಿ ಮಾರ್ಗ ನಿರ್ಮಿಸುವುದು ಮತ್ತು ನಿರ್ವಹಿಸುವುದು ನಗರಾಭಿವೃದ್ಧಿ ಅಧಿಕಾರಿಗಳು, ಪಾಲಿಕೆಗಳು, ಪುರಸಭೆಗಳು, ಪಂಚಾಯತ್‌ಗಳ ಕರ್ತವ್ಯವಾಗಿದೆ. ಈ ಹಕ್ಕಿನ ಉಲ್ಲಂಘನೆಯಾದರೆ ನಾಗರಿಕರು ಸಾಂವಿಧಾನಿಕ ಮತ್ತು ಕಾನೂನಾತ್ಮಕ ಪರಿಹಾರಗಳನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂದು ನ್ಯಾಯಾಲಯ ಸ್ಪಷ್ಟವಾಗಿ ತಿಳಿಸಿದೆ. ಆದರೆ, ಮೈಸೂರು ಮಹಾನಗರ ಪಾಲಿಕೆಯು ನ್ಯಾಯಾಲಯದ ಆದೇಶವನ್ನು ಎಷ್ಟರಮಟ್ಟಿಗೆ ಪಾಲಿಸುತ್ತದೆ ಎಂಬುದನ್ನು ಕಾದುನೋಡಬೇಕಿದೆ.

5 ಬಾರಿ ವಿಶ್ವ ಚಾಂಪಿಯನ್ ಬ್ರೆಜಿಲ್‌ಗೆ ಜಯ

ಫಿಲಿಡೆಲ್ಫಿಯಾ, ಜೂ.20- ಐದು ಬಾರಿಯ ವಿಶ್ವ ಚಾಂಪಿಯನ್ ಬ್ರೆಜಿಲ್ ತಂಡ ಹೈಟಿ ವಿರುದ್ಧ 3-0 ಅಂತರದ ಗೆಲುವು ಸಾಧಿಸಿ ಪ್ರಸಕ್ತ ಸಾಲಿನ ವಿಶ್ವಕಪ್‌ನಲ್ಲಿ ಮೊದಲ ಗೆಲುವು ಸಾಧಿಸಿತು. ಮತ್ತೊಂದೆಡೆ ಹೀನಾಯ ಸೋಲಿನೊಂದಿಗೆ ಹೈಟಿ ಟೂರ್ನಿಯಿಂದ ಹೊರ ಬಿದ್ದಿದೆ.

ಪಂದ್ಯದ ಆರಂಭಿಕ 11ರಲ್ಲಿ ಮ್ಯಾಂಚೆಸ್ಟರ್ ಯುನೈಟೆಡ್ ಫಾರ್ವರ್ಡ್ ಮ್ಯಾಥ್ಯೂಸ್ ಕುನ್ಹಾ ಸ್ಥಾನ ಪಡೆದರು. ಸಿಕ್ಕ ಅವಕಾಶ ಸದುಪಯೋಗ ಪಡಿಸಿಕೊಂಡ ಅವರು 23 ಮತ್ತು 36ನೇ ನಿಮಿಷದಲ್ಲಿ ಗೋಲು ಗಳಿಸಿದರು. ಅರ್ಧಾವಧಿ ಮುಕ್ತಾಯಕ್ಕೆ ಸ್ವಲ್ಪ ಮೊದಲು, ವಿನಿಸಿಯಸ್ ಮಿಡ್‌ಫೀಲ್ಡರ್ ಲ್ಯೂಕಸ್ ಪೆಕ್ವಾ ಅವರ ಫ್ಲಿಕ್ ಪಾಸ್‌ನಿಂದ ಚೆಂಡನ್ನು ಗೋಲಿಗಟ್ಟಿದರು.

ದ್ವಿತೀಯಾರ್ಧದಲ್ಲಿ ಹೈಟಿ ತಂಡ ಗೋಲು ಗಳಿಸಲು ಪ್ರಯತ್ನಿಸಿತು. ಆದರೆ ಬ್ರೆಜಿಲ್‌ನ ಬಲಿಷ್ಠ ರಕ್ಷಣಾ ಪಡೆ ಮತ್ತು ಗೋಲ್‌ಕೀಪರ್ ವಿರುದ್ಧ ಯಾವುದೇ ಅವಕಾಶ ಸೃಷ್ಟಿಸುವಲ್ಲಿ ವಿಫಲವಾಯಿತು. 1974ರ ನಂತರ ಮೊದಲ ಬಾರಿಗೆ ವಿಶ್ವಕಪ್‌ನಲ್ಲಿ ಆಡುತ್ತಿರುವ ಹೈಟಿ ತಂಡ 2 ಪಂದ್ಯಗಳಲ್ಲಿ ಸೋತು ನಾಕೌಟ್ ರೇಸ್‌ನಿಂದ ಹೊರಬಿತ್ತು. ಬ್ರೆಜಿಲ್ ಜೂ.24 ರಂದು ಸ್ಕಾಟ್ಲೆಂಡ್ ಅನ್ನು ಎದುರಿಸಲಿದೆ. ಹೈಟಿ ತನ್ನ ಅಂತಿಮ ಗುಂಪು ಪಂದ್ಯದಲ್ಲಿ ಮೊರಾಕೊವನ್ನು ಎದುರಿಸಲಿದೆ.

ಆಸೀಸ್ ಮಣಿಸಿ ನಾಕೌಟ್‌ಗೆ ಯುಎಸ್‌ಎ, ಇತಿಹಾಸ ಸೃಷ್ಟಿಸಿದ ಮೊರಾಕೊ

ಸಿಯಾಟಲ್: ಫಿಫಾ ವಿಶ್ವಕಪ್‌ನಲ್ಲಿ ಅಮೆರಿಕಾ ಸತತ 2ನೇ ಗೆಲುವು ಸಾಧಿಸುವ ಮೂಲಕ ನಾಕೌಟ್ ಪ್ರವೇಶಿಸಿದೆ. ಡಿ ಗುಂಪಿನ ಪಂದ್ಯದಲ್ಲಿ ಅಮೆರಿಕಾ ಆಸ್ಟ್ರೇಲಿಯಾವನ್ನು 2-0 ಅಂತರದಿಂದ ಸೋಲಿಸುವ ಮೂಲಕ ಅತ್ಯುತ್ತಮ ಪ್ರದರ್ಶನ ನೀಡಿತು. ಈ ಗೆಲುವಿನೊಂದಿಗೆ ಯುನೈಟೆಡ್ ಸ್ಟೇಟ್ಸ್ 32ರ ಘಟ್ಟಕ್ಕೆ ಮುನ್ನಡೆದ ಎರಡನೇ ತಂಡವಾಯಿತು.

ಸಿಯಾಟಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಆರಂಭದಿಂದಲೂ ಯುನೈಟೆಡ್ ಸ್ಟೇಟ್ಸ್ ಆಕ್ರಮಣಕಾರಿಯಾಗಿ ಆಡಿತು. ಯುಎಸ್‌ಎ ಪರ 11ನೇ ನಿಮಿಷದಲ್ಲಿ ಕ್ಯಾಮರೂನ್ ಬರ್ಗೆಸ್ ಮೊದಲ ಗೋಲು ಬಾರಿಸಿದರು. ಇದು ಯುನೈಟೆಡ್ ಸ್ಟೇಟ್ಸ್‌ಗೆ 1-0 ಮುನ್ನಡೆ ನೀಡಿತು.

ಅಮೆರಿಕ ತಂಡ ಮೊದಲಾರ್ಧ ಮುಗಿಯುವ ಮುನ್ನ ತನ್ನ ಮುನ್ನಡೆಯನ್ನು ದ್ವಿಗುಣಗೊಳಿಸಿತು. 43ನೇ ನಿಮಿಷದಲ್ಲಿ ಅಲೆಕ್ಸ್ ಫ್ರೀಮನ್ ಗೋಲು ಗಳಿಸಿದರು. ಇದರಿಂದಾಗಿ ಅಮೆರಿಕ ತಂಡಕ್ಕೆ 2-0 ಮುನ್ನಡೆ ದೊರೆಯಿತು. ನಂತರ ದ್ವಿತೀಯಾರ್ಧದಲ್ಲಿ ಗೋಲು ಗಳಿಸಲು ಉಭಯ ತಂಡಗಳು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಈ ಗೆಲುವಿನೊಂದಿಗೆ ಅಮೆರಿಕಾ ನಾಕೌಟ್ ತಲುಪಿತು.

ಸ್ಕಾಟ್ಲೆಂಡ್ ವಿರುದ್ಧ ಮೊರಾಕೊಗೆ ಗೆಲುವು: ಫಿಫಾ ವಿಶ್ವಕಪ್‌ನ ಮತ್ತೊಂದು ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡವನ್ನು 1-0 ಗೋಲುಗಳ ಅಂತರದಿಂದ ಸೋಲಿಸುವ ಮೂಲಕ ಮೊರಾಕೊ ಗ್ರೂಪ್ ಸಿ ನಲ್ಲಿ ಅಗ್ರಸ್ಥಾನಕ್ಕೇರಿತು.

ಬೋಸ್ಟನ್ ಕ್ರೀಡಾಂಗಣದಲ್ಲಿ ನಡೆದ ರೋಚಕ ಪಂದ್ಯದಲ್ಲಿ ಆಫ್ರಿಕನ್ ಪವರ್‌ಹೌಸ್ ಮೊರಾಕೊ ಪಂದ್ಯದ ಎರಡನೇ ನಿಮಿಷದಲ್ಲಿ ಮಿಂಚಿನ ಗೋಲು ಗಳಿಸುವ ಮೂಲಕ ಜಯ ಸಾಧಿಸಿತು. ಟೂರ್ನಿಯಲ್ಲಿ ಅತ್ಯಂತ ವೇಗದ ಗೋಲು ಗಳಿಸಿದ ದಾಖಲೆಯನ್ನೂ ಮೊರಾಕೊ ನಿರ್ಮಿಸಿತು.

ಪಂದ್ಯ ಆರಂಭವಾಗುವ ಮೊದಲೇ ಮೊರಾಕೊ ಸ್ಕಾಟ್ಲೆಂಡ್‌ನ ರಕ್ಷಣಾ ತಂಡವನ್ನು ದಿಗ್ಭ್ರಮೆಗೊಳಿಸಿತು. 2ನೇ ನಿಮಿಷದಲ್ಲಿ ಮೊರಾಕೊದ ಇಸ್ಮಾಯಿಲ್ ಜೈಬರಿ, ಸೂಪರ್‌ಸ್ಟಾರ್ ಬ್ರಾಹಿಂ ಡಯಾಜ್ ನೀಡಿದ ಸುಂದರವಾದ ಥ್ರೂ ಪಾಸ್ ಅನ್ನು ಗೋಲಾಗಿ ಪರಿವರ್ತಿಸಿದರು. ಕೇವಲ 71 ಸೆಕೆಂಡುಗಳಲ್ಲಿ ಗಳಿಸಿದ ಈ ಗೋಲು 2026ರ ವಿಶ್ವಕಪ್‌ನ ಅತ್ಯಂತ ವೇಗದ ಗೋಲು ಆಗಿ ದಾಖಲೆ ನಿರ್ಮಿಸಿತು. ಅಂತಿಮವಾಗಿ ಉಭಯ ತಂಡಗಳು ಗೋಲು ಗಳಿಸಲು ಪ್ರಯತ್ನಿಸಿದವಾದರೂ ಸಾಧ್ಯವಾಗಲಿಲ್ಲ. ಮೊರಾಕೊ ಏಕೈಕ ಗೋಲು ಗಳಿಸಿ ಜಯ ಗಳಿಸಿತು.

ಸ್ಕೂಟರ್ ವ್ಹೀಲಿಂಗ್; ಪ್ರಕರಣ ದಾಖಲು

ಮೈಸೂರು,ಜೂ.20(ಪಿಎಂ)- ರಸ್ತೆಯಲ್ಲಿ ಅಪಾಯಕಾರಿಯಾಗಿ ಸ್ಕೂಟರ್‌ನಲ್ಲಿ ವ್ಹೀಲಿಂಗ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದ ಸಂಬಂಧ ಎನ್‌ಆರ್ ಮೊಹಲ್ಲಾದ ಮೊಹಮ್ಮದ್ ಲುಖ್ಮಾನ್ ಎಂಬಾತನ ವಿರುದ್ಧ ಎನ್‌ಆರ್ ಸಂಚಾರ ಠಾಣೆ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದು, ಈತ ವ್ಹೀಲಿಂಗ್ ಮಾಡಿದ್ದ ಬೈಕ್ ಅನ್ನು ವಶಕ್ಕೆ ಪಡೆದಿದ್ದಾರೆ.

ಸ್ಕೂಟರ್ ಸವಾರ ಮೊಹಮ್ಮದ್ ಲುಖ್ಮಾನ್ ಜೂ.17ರಂದು ಮಧ್ಯಾಹ್ನ ಸ್ಕೂಟರ್‌ನ ಹಿಂಬದಿಯಲಿ ಮತ್ತೊಬ್ಬ ಸವಾರನನ್ನು ಕೂರಿಸಿಕೊಂಡು, ಹೆಲ್ಮೆಟ್ ಧರಿಸದೇ, ಬನ್ನಿಮಂಟಪದ ನೆಲ್ಸನ್ ಮಂಡೇಲಾ ರಸ್ತೆಯಲ್ಲಿ ಅಪಾಯಕಾರಿ ರೀತಿ ವ್ಹೀಲಿಂಗ್ ಮಾಡಿದ್ದ. ಅಲ್ಲದೆ, ನಗರದ ಡಾ.ಅಂಬೇಡ್ಕರ್ ವೃತ್ತದಿಂದ ಮಾರುತಿ ಸರ್ಕಲ್ ನಡುವಿನ ಸೆಂಟ್ ಮೇರಿಸ್ ರಸ್ತೆಯಲ್ಲಿ ಸಹ ವ್ಹೀಲಿಂಗ್ ಮಾಡಿದ್ದ. ಸ್ಕೂಟರ್ ವಿಳಾಸ ಪತ್ತೆ ಮಾಡಿದಾಗ ಈತನು, ತನ್ನ ಸ್ನೇಹಿತನ ತಾಯಿಯ ಮಾಲೀಕತ್ವದ ಸ್ಕೂಟರ್ ಪಡೆದು ಹೀಗೆ ವ್ಹೀಲಿಂಗ್ ಮಾಡಿರುವುದು ಗೊತ್ತಾಗಿದೆ.

ಭವಿಷ್ಯದಲ್ಲಿ ಎಐ, ವರ್ಚುವಲ್ ನೆಟ್‌ವರ್ಕ್ ಮೂಲಕವೇ ದೂರ ಶಿಕ್ಷಣ ನಿರ್ವಹಣೆ


● ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಭಿಮತ ● ದೂರ ಶಿಕ್ಷಣದಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಜ್ಞಾನದ ಬೆಳಕು ● ಮಹಿಳಾ ಸಬಲೀಕರಣದಲ್ಲಿ ಬಹು ಮುಖ್ಯ ಪಾತ್ರ ● ಶಕ್ತಿಯುತ ಮಾಧ್ಯಮದಿಂದ ವಿಕಸಿತ ಭಾರತ ಸಾಕಾರ ● ದೇಶದ ಆರ್ಥಿಕ ಪ್ರಗತಿಗೆ ಸಹಕಾರಿ

ಮೈಸೂರು, ಜೂ.20(ಬಿಎಲ್‌ಯು)– ಭವಿಷ್ಯದಲ್ಲಿ ದೂರ ಶಿಕ್ಷಣವು ಕೇವಲ ಉನ್ನತ ಶಿಕ್ಷಣಕ್ಕೆ ಮಾತ್ರ ಸೀಮಿತವಾಗದೆ ಎಐ (ಕೃತಕ ಬುದ್ಧಿಮತ್ತೆ), ವರ್ಚುವಲ್ ನೆಟ್ ವರ್ಕ್, ಸಂವಾದಾತ್ಮಕ ಕಲಿಕಾ ವೇದಿಕೆ ಮೂಲಕ ವಿದ್ಯಾರ್ಥಿಗಳಿಗೆ ಪರಿಣಾಮಕಾರಿ, ಗುಣಮಟ್ಟದ ಶಿಕ್ಷಣ ಒದಗಿಸುತ್ತದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಇಂದು ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡರ 'ಶಿಕ್ಷಣ: ಔಪಚಾರಿಕ ಮುಕ್ತ ಮತ್ತು ದೂರ ಶಿಕ್ಷಣದ ಒಂದು ಅವಲೋಕನ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ದೂರ ಶಿಕ್ಷಣದಿಂದ ವೈಯಕ್ತಿಕ ಕಲಿಕಾ ವ್ಯವಸ್ಥೆಯಲ್ಲಿ ವಿಪುಲ ಅವಕಾಶಗಳು ದೊರೆಯುತ್ತವೆ ಎಂದರು.

ಪ್ರಸ್ತುತ ಶಿಕ್ಷಣ ಕ್ಷೇತ್ರದಲ್ಲಿ ಅಭೂತಪೂರ್ವ ಬದಲಾವಣೆಗಳಾಗುತ್ತಿದ್ದು, ತಂತ್ರಜ್ಞಾನ, ಡಿಜಿಟಲ್ ಸಂಪನ್ಮೂಲಗಳು ಹಾಗೂ ನವೀನ ಬೋಧನಾ ವಿಧಾನಗಳು ಶಿಕ್ಷಣವನ್ನು ಮತ್ತಷ್ಟು ಸುಲಭವಾಗಿಸುತ್ತಿದೆ. ಇದು ಶಿಕ್ಷಣದ ಕಲಿಕೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಿದೆ ಎಂದು ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ಅದರಲ್ಲೂ ದೂರ ಶಿಕ್ಷಣ ವ್ಯವಸ್ಥೆಯ ವಿವಿಧ ಸಾಮಾಜಿಕ, ಆರ್ಥಿಕ ಹಾಗೂ ಭೌಗೋಳಿಕ ಕಾರಣಗಳಿಂದ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಜ್ಞಾನದ ಬಾಗಿಲು ತೆರೆದಿದೆ ಎಂದರು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡರ 'ಶಿಕ್ಷಣ: ಔಪಚಾರಿಕ ಮುಕ್ತ ಮತ್ತು ದೂರ ಶಿಕ್ಷಣದ ಒಂದು ಅವಲೋಕನ' ಪುಸ್ತಕವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಬಿಡುಗಡೆ ಮಾಡಿದರು. ಆದಿ ಚುಂಚನಗಿರಿ ಮಠದ ಪೀಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ, ವಿಶ್ರಾಂತ ಕುಲಪತಿ ಪ್ರೊ.ರಂಗಪ್ಪ, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಕೃತಿಕಾರ ಡಾ.ರಾಮೇಗೌಡ, ಪ್ರೊ.ರಾಮನಾಥಂ ನಾಯ್ಡು ಚಿತ್ರದಲ್ಲಿದ್ದಾರೆ.

ಜ್ಞಾನಾರ್ಜನೆಯ ದೀಪ: ವಿಶೇಷವಾಗಿ ದೂರ ಶಿಕ್ಷಣವು ಮಹಿಳೆಯರ ಪಾಲಿಗೆ ಜ್ಞಾನದ ಬೆಳಕಾಗಿದೆ. ಬಹಳಷ್ಟು ಮಹಿಳೆಯರು ಕುಟುಂಬದ ಜವಾಬ್ದಾರಿ ಹಾಗೂ ನಿರ್ವಹಣೆಯ ಕಾರಣಗಳಿಂದ ನಿಯಮಿತ ಶಿಕ್ಷಣ ಪಡೆಯಲು ಸಾಧ್ಯವಾಗುವುದಿಲ್ಲ. ಇಂತಹ ಮಹಿಳೆಯರಿಗೆ ದೂರ ಶಿಕ್ಷಣ ಜ್ಞಾನಾರ್ಜನೆಯ ದೀಪವಾಗಿದೆ. ದೂರ ಶಿಕ್ಷಣದ ಮೂಲಕ ಮನೆಯಲ್ಲೇ ಕುಳಿತು ವಿದ್ಯಾಭ್ಯಾಸ ಮಾಡುವ ಮೂಲಕ ಉನ್ನತ ಶಿಕ್ಷಣ ಪಡೆಯುತ್ತಿದ್ದು, ಮಹಿಳಾ ಸಬಲೀಕರಣವಾಗುತ್ತಿದೆ ಎಂದು ಹೇಳಿದರು.

ಗುಣಮಟ್ಟದ ನವೀನತೆ ಹಾಗೂ ಮಾನವೀಯ ಮೌಲ್ಯಗಳನ್ನು ಕೇಂದ್ರದಲ್ಲಿಟ್ಟುಕೊಂಡು ಮುಂದುವರೆದರೆ ದೂರ ಶಿಕ್ಷಣವು ಜ್ಞಾನದ ಹೊಸ ದಾರಿಗಳನ್ನು ತೆರೆದಿಡಲಿದೆ. ಜೊತೆಗೆ ಭಾರತವನ್ನು ಜ್ಞಾನಾಧಾರಿತ ಸಮಾಜ ಮತ್ತು ಅಭಿವೃದ್ಧಿಶೀಲ ರಾಷ್ಟ್ರವನ್ನಾಗಿ ರೂಪಿಸುವಲ್ಲಿ ಮಹತ್ವದ ಕೊಡುಗೆ ನೀಡಲಿದೆ ಎಂದು ತಿಳಿಸಿದರು.

ವಿಕಸಿತ ಭಾರತ– 2047 ಸಂಕಲ್ಪವನ್ನು ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ವಿಶ್ವವು ಜ್ಞಾನಾಧಾರಿತ ಆರ್ಥಿಕತೆಯತ್ತ ಸಾಗುತ್ತಿರುವ ಸಂದರ್ಭದಲ್ಲಿ ಮಾನವೀಯ ಶಿಕ್ಷಣ ಮಾದರಿಯನ್ನು ಜಗತ್ತಿಗೆ ನೀಡುವ ಅಪೂರ್ವ ಅವಕಾಶ ದೂರ ಶಿಕ್ಷಣ ವ್ಯವಸ್ಥೆಗಿದೆ. ನಮ್ಮ ಪ್ರಾಚೀನ ಜ್ಞಾನ ಪರಂಪರೆ ಮತ್ತು ಆಧುನಿಕ ತಂತ್ರಜ್ಞಾನ ಸಾಮರ್ಥ್ಯಗಳ ಸಮನ್ವಯವು ದೂರ ಶಿಕ್ಷಣವನ್ನು ಬಹು ಎತ್ತರಕ್ಕೆ ಕೊಂಡೊಯ್ಯಲಿದೆ ಎಂದು ಹೇಳಿದರು.

ನನ್ನ ನಂಬಿಕೆಯಂತೆ ಭವಿಷ್ಯದಲ್ಲಿ ಮುಕ್ತ ಮತ್ತು ದೂರ ಶಿಕ್ಷಣವು ಜ್ಞಾನಾಧಾರಿತ ಸಮಾಜ ನಿರ್ಮಾಣದಲ್ಲಿ ಅಗ್ರ ಸ್ಥಾನದಲ್ಲಿ ನಿಲ್ಲಲಿದೆ. ಈ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಲಿದೆ. ಈ ದಿಸೆಯಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ ಎಂದು ಥಾವರ್ ಚಂದ್ ಗೆಹ್ಲೋಟ್ ವಿಶ್ವಾಸ ವ್ಯಕ್ತಪಡಿಸಿದರು.

ಬಡವರ ಬಳಿಗೆ ಶಾಲೆ: ಬಡವರು ಶಾಲೆ ಹತ್ತಿರ ಹೋಗಲು ಆಗದಿದ್ದರೆ ಅವರ ಬಳಿಯೇ ಶಾಲೆ ಹೋಗಬೇಕು. ದೂರ ಶಿಕ್ಷಣದ ಮೂಲಕ ಇಂತಹ ಕಾರ್ಯವನ್ನು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಮಾಡುತ್ತಿದೆ ಎಂದು ಆದಿ ಚುಂಚನಗಿರಿ ಮಠದ ಪೀಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕಲಿಕೆಗೆ ವಯಸ್ಸು ಅಡ್ಡಿ ಬರುವುದಿಲ್ಲ. ಆದರೆ ಕಲಿಯಬೇಕು, ಕಲಿತು ಜ್ಞಾನ ವೃದ್ಧಿಸಿಕೊಳ್ಳಬೇಕು, ಪದವಿ ಪಡೆಯಬೇಕೆಂಬ ಇಚ್ಛಾಸಕ್ತಿ ಇರಬೇಕು. ಇದನ್ನು ಸಾಕಾರಗೊಳಿಸಿಕೊಳ್ಳಲು ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣ ವ್ಯವಸ್ಥೆಯ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಆದಿಚುಂಚನಗಿರಿ ಮಠ ನಡೆಸುವ ಶಿಕ್ಷಣ ಸಂಸ್ಥೆಗಳು ನ್ಯಾಕ್ ಸೇರಿದಂತೆ ಇತರೆ ಗುಣಮಟ್ಟದ ಶ್ರೇಯಾಂಕ ಪಡೆಯಲು ಡಾ.ರಾಮೇಗೌಡರು ಕಾರಣೀಭೂತರಾಗಿದ್ದಾರೆ ಎಂದು ಸ್ವಾಮೀಜಿ ಪ್ರಶಂಸಿಸಿದರು.

ಶಿಕ್ಷಣ ಸರ್ವರ ಮನೆ ಬಾಗಿಲಿಗೆ ತಲುಪಬೇಕು: ಭಾರತ ದೇಶ ಬದಲಾವಣೆ ಕಾಣಲು ಹಾಗೂ ಅಭಿವೃದ್ಧಿಯಾಗಲು ಪ್ರತಿಯೊಬ್ಬರಿಗೂ ಶಿಕ್ಷಣ ಸಿಗಬೇಕು. ಶೇ.100ರಷ್ಟು ಸಾಕ್ಷರತೆ ಇದ್ದರೆ ದೇಶದ ಬೆಳವಣಿಗೆಗೆ ಪೂರಕವಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣ ಸರ್ವಜನರ ಮನೆ ಬಾಗಿಲಿಗೆ ತಲುಪಬೇಕು. ಆಗ ದೇಶದ ಅಭಿವೃದ್ಧಿಗೆ ನಿಜವಾದ ಅರ್ಥ ಬರುತ್ತದೆ ಎಂದು ಮೈಸೂರಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಅವರು ಅಭಿಪ್ರಾಯಪಟ್ಟರು.

ಜ್ಞಾನದ ಬೆಳಕು: ವಿಶ್ರಾಂತ ಕುಲಪತಿ ಪ್ರೊ.ರಂಗಪ್ಪ ಅವರು, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಸ್ಥಾಪನೆಯಾದಾಗ 10 ಎಕರೆ ಜಮೀನು ಇತ್ತು. ತರುವಾಯ ಸರ್ಕಾರ ಮೈಸೂರು ವಿಶ್ವವಿದ್ಯಾನಿಲಯ ತನ್ನ ಬಳಿ ಇದ್ದ 15 ಎಕರೆಯನ್ನು ಹೆಚ್ಚುವರಿಯಾಗಿ ನೀಡಿತು. ಈ ವಿಶ್ವವಿದ್ಯಾನಿಲಯ ಹಂತ ಹಂತವಾಗಿ ಬೆಳವಣಿಗೆ ಸಾಧಿಸುತ್ತಾ ಇಂದು ಪ್ರತಿಯೊಬ್ಬರ ಬಾಳಿನಲ್ಲಿ ಜ್ಞಾನದ ಬೆಳಕಾಗಿದೆ ಎಂದು ಹೇಳಿದರು.

ಡಾ.ರಾಮೇಗೌಡರು ಸಾಂಪ್ರದಾಯಿಕ ಶಿಕ್ಷಣ ಹಾಗೂ ದೂರ ಶಿಕ್ಷಣ ವ್ಯವಸ್ಥೆ ಬಗ್ಗೆ ಅಪಾರ ಅನುಭವ ಹೊಂದಿದ್ದಾರೆ. ಈ ಎರಡರ ಅನುಭವವನ್ನು ಸಮ್ಮಿಲನಗೊಳಿಸಿ ಮುಕ್ತ ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ ಎಂದು ಪ್ರೊ.ರಂಗಪ್ಪ ಅಭಿಪ್ರಾಯಪಟ್ಟರು.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ತಜ್ಞ ಪ್ರೊ.ಚಂಬಿ ಪುರಾಣಿಕ್ ಅವರು ಡಾ.ರಾಮೇಗೌಡರ ಕೃತಿಯನ್ನು ವಿಮರ್ಶಿಸಿದರು. ಕೃತಿಕಾರ ಡಾ.ರಾಮೇಗೌಡ, ಶಾಸಕ ಕೆ.ಹರೀಶ್‌ಗೌಡ, ಮುಕ್ತ ವಿವಿ ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ರಾಮನಾಥಂ ನಾಯ್ಡು ವೇದಿಕೆಯಲ್ಲಿ ಉಪಸ್ಥಿತರಿದ್ದರು.

> ಉದ್ಯೋಗದಲ್ಲಿರುವವರಿಗೆ ಹಾಗೂ ಸಮಾಜದ ಹಿಂದುಳಿದ ವರ್ಗದವರಿಗೆ ದೂರ ಶಿಕ್ಷಣವು ಸಮಾನ, ಪರಿಣಾಮಕಾರಿ ಹಾಗೂ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ದೂರ ಶಿಕ್ಷಣದ ಬಹುಪಯೋಗದಿಂದ ಜ್ಞಾನದ ವ್ಯಾಪ್ತಿಯು ವಿಸ್ತಾರಗೊಳ್ಳುತ್ತಿದೆ. ಈ ಮೂಲಕ ಶಿಕ್ಷಣ ವ್ಯವಸ್ಥೆಯಲ್ಲಿ ಶಕ್ತಿಯುತ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತಿದೆ. ಭಾರತದ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ದೂರ ಶಿಕ್ಷಣ ಬಹು ಮುಖ್ಯ ಪಾತ್ರ ವಹಿಸುತ್ತಿದೆ. ಇದರಿಂದ ಗುಣಮಟ್ಟದ ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಆರ್ಥಿಕ ಪ್ರಗತಿಗೆ ಸಹಕಾರಿಯಾಗಿದೆ.
> –ಥಾವರ್‌ಚಂದ್ ಗೆಹ್ಲೋಟ್

ಸಿಎಂ ಡಿಕೆಶಿಗೆ ಅಭಿನಂದನೆ...



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಶನಿವಾರ ಬೆಂಗಳೂರಿನ ಸದಾಶಿವನಗರದ ಅವರ ನಿವಾಸದಲ್ಲಿ ಮಾಜಿ ಸಚಿವ, ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಎಂ.ಕೋಟೆ ಶಿವಣ್ಣ ಹೂಗುಚ್ಛ ನೀಡಿ, ಅಭಿನಂದಿಸಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಬಿ.ವಿ.ಬಸವರಾಜ್, ಸಂಜಯ್ ಇನ್ನಿತರರಿದ್ದರು.

ಗೂಡ್ಸ್ ಟ್ರೇನ್ ಮ್ಯಾನೇಜರ್ ಹುದ್ದೆಗೆ ಜೂ.25ಕ್ಕೆ ಪರೀಕ್ಷೆ ಕನ್ನಡದಲ್ಲಿ ಬರೆಯಲು ಅವಕಾಶಕ್ಕೆ ಆಗ್ರಹ

ತಪ್ಪಿದರೆ ಪರೀಕ್ಷಾ ಕೇಂದ್ರಗಳ ಮುಂದೆ ಹೋರಾಟ: ಕರವೇ ಎಚ್ಚರಿಕೆ

ಮೈಸೂರು, ಜೂ.20(ಜಿಎ)–ರೈಲ್ವೇ ಇಲಾಖೆ ವತಿಯಿಂದ ಗೂಡ್ಸ್ ಟ್ರೇನ್ ಮ್ಯಾನೇಜರ್ ಹುದ್ದೆಗೆ ಜೂ.25ರಂದು ನಡೆಯುತ್ತಿರುವ ಪರೀಕ್ಷೆಯನ್ನು ಕನ್ನಡದಲ್ಲಿ ನಡೆಸಬೇಕು ಇಲ್ಲವಾದರೆ ಎಲ್ಲಾ ಪರೀಕ್ಷಾ ಕೇಂದ್ರ ಬಳಿ ಹೋರಾಟ ಮಾಡಲಾಗುತ್ತದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಪ್ರವೀಣ್‌ಕುಮಾರ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.17ರಂದು ಈ ಪರೀಕ್ಷೆ ನಡೆಯುವ ಸಂದರ್ಭದಲ್ಲಿ ನಮ್ಮ ರಾಜ್ಯಾಧ್ಯಕ್ಷರಾದ ನಾರಾಯಣಗೌಡರು ಕನ್ನಡದಲ್ಲಿಯೇ ಪರೀಕ್ಷೆ ನಡೆಸಬೇಕು ಎಂದು ಎಚ್ಚರಿಕೆ ನೀಡಿದ ಹಿನ್ನೆಲೆಯಲ್ಲಿ ಪರೀಕ್ಷೆ ಮುಂದೂಡಿದ್ದರು. ಈಗ ಮತ್ತೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಪರೀಕ್ಷೆ ನಡೆಸಿ, ಕನ್ನಡಿಗರ ಉದ್ಯೋಗ ಕಸಿದುಕೊಳ್ಳುವ ಕೆಲಸವನ್ನು ರೈಲ್ವೇ ಇಲಾಖೆ ಮಾಡುತ್ತಿದೆ ಎಂದು ಕಿಡಿಕಾರಿದರು.

ದಾಖಲೆಗಳ ಪ್ರಕಾರ ಹುಬ್ಬಳ್ಳಿಯಲ್ಲಿ 179, ಬೆಂಗಳೂರಲ್ಲಿ 112 ಹಾಗೂ ಮೈಸೂರಲ್ಲಿ 139ಮಂದಿ ಅಭ್ಯರ್ಥಿಗಳು ಈ ಪರೀಕ್ಷೆಗೆ ಹಾಜರಾಗಲಿದ್ದಾರೆ. ಆದರೆ, ಇಲಾಖೆಯೂ ಉದ್ದೇಶ ಪೂರ್ವಕವಾಗಿಯೇ ಕನ್ನಡದಲ್ಲಿ ಪರೀಕ್ಷೆ ಬರೆಯುವ ಆಯ್ಕೆಯನ್ನು ನಿರಾಕರಿಸಿದೆ.

ಇಲಾಖೆ ತಕ್ಷಣ ಪರೀಕ್ಷೆಯನ್ನು ಮುಂದೂಡಿ, ಕನ್ನಡ ಭಾಷೆಯನ್ನು ಸೇರಿಸಿ, ಹೊಸ ವೇಳಾಪಟ್ಟಿ ಪ್ರಕಟಿಸಬೇಕು. ಇಲ್ಲವಾದರೆ ಪರೀಕ್ಷೆ ದಿನ ಎಲ್ಲಾ ಕೇಂದ್ರದಲ್ಲಿ ಉಗ್ರ ಪ್ರತಿಭಟನೆ ನಡೆಸಲಾಗುತ್ತದೆ ಎಂದರು.

ಮುಂದಿನ ದಿನಗಳಲ್ಲಿ ರೈಲ್ವೇ ಇಲಾಖೆ ಎಲ್ಲಾ ಪರೀಕ್ಷೆಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿ ನಡೆಸಬೇಕು. ಈ ರೀತಿ ಕನ್ನಡವನ್ನು ಧಿಕ್ಕರಿಸುತ್ತಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಾಗೇ ರಾಜ್ಯದ ಸಂಸದರು ಈ ಬಗ್ಗೆ ಧ್ವನಿ ಎತ್ತಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಮಂಜೇಶ್, ಕೆ.ಪಿ.ರಾಜು, ಲೋಕೇಶ್ ಕುಮಾರ್, ಹೇಮಂತ್‌ಗೌಡ, ಸುನಂದ ಪ್ರಸಾದ್, ರಫೀಕ್ ಅಹಮ್ಮದ್ ಇದ್ದರು.

> **ಪದೋನ್ನತಿಗಾಗಿ ಈ ಪರೀಕ್ಷೆ**
> ಈಗಾಗಲೇ ರೈಲ್ವೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಜೂ.25ರಂದು ನಡೆಯುತ್ತಿರುವ ಗೂಡ್ಸ್ ಟ್ರೇನ್ ಮ್ಯಾನೇಜರ್ ಹುದ್ದೆಯ ಪರೀಕ್ಷೆಗಳು ಪದೋನ್ನತಿಗಾಗಿ ನಡೆಯುತ್ತಿವೆ. ರೈಲ್ವೇ ಬೋರ್ಡ್ ನಿಯಮದಂತೆ ಈ ಪರೀಕ್ಷೆಗಳು ನಡೆಯುತ್ತಿವೆ, ಹೀಗಾಗಿ ಈ ಪರೀಕ್ಷೆಯಲ್ಲಿ ಸ್ಥಳೀಯ ಭಾಷೆಯ ಆಯ್ಕೆ ಇರುವುದಿಲ್ಲ ಕೇವಲ ಹಿಂದಿ, ಇಂಗ್ಲಿಷ್ ಅವಕಾಶವಿದೆ. ಇದು ರೈಲ್ವೆ ಇಲಾಖೆಯ ಬೋರ್ಡ್‌ನ ನಿರ್ಧಾರ ಅದನ್ನು ಯಾವುದೇ ವಿಭಾಗವು ಬದಲಿಸಲು ಸಾಧ್ಯವಿಲ್ಲ. ನೂತನವಾಗಿ ನೇಮಕವಾಗುವವರಿಗೆ ನಡೆಸುವ ಪರೀಕ್ಷೆಯಲ್ಲಿ ಹಿಂದಿ, ಇಂಗ್ಲಿಷ್ ಜೊತೆಗೆ ಸ್ಥಳೀಯ ಭಾಷೆಗಳಿಗೂ ಅವಕಾಶವಿದೆ. ಇದನ್ನು ವಿರೋಧಿಸಿ, ಕರ್ನಾಟಕ ರಕ್ಷಣಾ ವೇದಿಕೆ ಹೋರಾಟ ನಡೆಸುತ್ತಿರುವುದನ್ನು ಈಗಾಗಲೇ ಬೋರ್ಡ್ ಗಮನಕ್ಕೆ ತರಲಾಗಿದೆ. ರಾಜ್ಯ ರೈಲ್ವೆ ಸಚಿವರಾದ ವಿ.ಸೋಮಣ್ಣ ಅವರು ಬೋರ್ಡ್‌ನೊಂದಿಗೆ ಚರ್ಚಿಸುತ್ತೇನೆ ಎಂದು ತಿಳಿಸಿದ್ದಾರೆ. ಸದ್ಯದಲ್ಲಿ ಸಮಸ್ಯೆ ಬಗೆಹರಿಯಲಿದೆ.
> –ಗಿರೀಶ್ ಧರ್ಮರಾಜ್ ಕಲಗೊಂಡ, ವಾಣಿಜ್ಯ ವ್ಯವಸ್ಥಾಪಕ, ಮೈಸೂರು ವಿಭಾಗ, ನೈರುತ್ಯ ರೈಲ್ವೆ

ಪ್ರವಚನ ಕಾರ್ಯಕ್ರಮ ಉದ್ಘಾಟನೆ...



ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾನಿಲಯದ ವತಿಯಿಂದ ಆಯೋಜಿಸಿದ್ದ 'ಶಾಂತಿ ಯೋಗ ಧ್ಯಾನ ಆರೋಗ್ಯ ಶಿಕ್ಷಣ' ಕುರಿತ ಪ್ರವಚನ ಕಾರ್ಯಕ್ರಮವನ್ನು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿವಿಯ ಮೈಸೂರಿನ ಮುಖ್ಯಸ್ಥರಾದ ಡಾ. ಲಕ್ಷ್ಮೀ ಜೀ, ಮೈಸೂರು ನಗರ ಜೆಡಿಎಸ್ ಅಧ್ಯಕ್ಷ, ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಮುಖ್ಯ ಪ್ರವಚನಕಾರರಾದ ಶಿವಮಣಿ, ಜಯಂತಿ, ಕೇಶ್ವ ಹಾಗೂ ಅಂತರರಾಷ್ಟ್ರೀಯ ಅಥ್ಲೆಟಿಕ್ ಪಟು ವಿಜಯ ರಮೇಶ್ ಉದ್ಘಾಟಿಸಿದರು.

ಕ್ವಾರಿ ಮಾಲೀಕರಿಂದ ಲಂಚ ಸ್ವೀಕಾರ; ಬಂಡೀಪುರ ಹುಲಿ ಯೋಜನೆ ಸಿಬ್ಬಂದಿ ವಜಾ

ಮೈಸೂರು, ಜೂ.20– ಕ್ವಾರಿ ಮಾಲೀಕರಿಂದ ಲಂಚ ಪಡೆದಿರುವುದು ತನಿಖೆಯಲ್ಲಿ ಸಾಬೀತಾದ ಹಿನ್ನೆಲೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಪ್ರಥಮ ದರ್ಜೆ ಸಹಾಯಕರಾಗಿದ್ದ ಡಿ.ಎನ್.ನಾಗೇಂದ್ರ ಅವರನ್ನು ಸೇವೆಯಿಂದ ವಜಾಗೊಳಿಸಿ ಅರಣ್ಯ ಪಡೆಯ ಮುಖ್ಯಸ್ಥರು ಆದೇಶಿಸಿದ್ದಾರೆ.

ಬಂಡೀಪುರ ಹುಲಿ ಯೋಜನೆ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿದ್ದ ಡಿ.ಎನ್.ನಾಗೇಂದ್ರ 2023ರಲ್ಲಿ ಕ್ವಾರಿ ಮಾಲೀಕರಾದ ಹೆಚ್.ಜಿ.ಗೋವಿಂದ ಸ್ವಾಮಿ ಹಾಗೂ ಎಂ.ಶ್ರೀಕಾಂತ್ ಎಂಬುವವರಿಂದ ಕ್ವಾರಿಗೆ ಅನುಮತಿ ನೀಡಲು ತಲಾ 50 ಸಾವಿರ ರೂ. ಬೇಡಿಕೆ ಇಟ್ಟು ಲಂಚದ ಹಣವನ್ನು ಅಕೌಂಟ್‌ಗೆ ಹಾಕಿಸಿಕೊಂಡಿದ್ದರು. ಈ ಸಂಬಂಧ ಕ್ವಾರಿ ಮಾಲೀಕರು ನೀಡಿದ ದೂರಿನ ಮೇರೆಗೆ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ತನಿಖೆಗೆ ಅಧಿಕಾರಿಗಳ ತಂಡ ರಚಿಸಿದ್ದರು. ತನಿಖೆ ವೇಳೆ ಲಂಚ ಪಡೆದಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಡಿ.ಎನ್.ನಾಗೇಂದ್ರ ಅವರನ್ನು ಸೇವೆಯಿಂದ ವಜಾಗೊಳಿಸಿರುವುದಾಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ ಆದೇಶಿಸಿದ್ದಾರೆ.

ಪಾಲಿಕೆಯಲ್ಲಿ ಅಗ್ನಿ ಸುರಕ್ಷತೆ ಕಾರ್ಯಾಗಾರ



ಮೈಸೂರು, ಜೂ.20(ಪಿಎಂ)– ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಶನಿವಾರ ಅಗ್ನಿ ಸುರಕ್ಷತೆ ಕುರಿತು ತರಬೇತಿ ಕಾರ್ಯಾಗಾರ ನಡೆಯಿತು.

ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಶನಿವಾರ ಮೈಸೂರು ಮಹಾನಗರ ಪಾಲಿಕೆಯ ಕೇಂದ್ರ ಕಚೇರಿಯ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ತರಬೇತಿ ಕಾರ್ಯಾಗಾರ ಜರುಗಿತು.

ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳಾದ ಪಿ.ಗುರುರಾಜ್, ಕೆ.ಸಿ.ರಮೇಶ್ ಅವರು ಅಗ್ನಿ ಸುರಕ್ಷಾ ಕ್ರಮಗಳ ಕುರಿತು ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಅಬಕಾರಿ ಇಲಾಖೆಯ ಜಿಲ್ಲಾಧಿಕಾರಿ ನಾಗರಾಜಪ್ಪ ಹಾಗೂ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಎಲ್ಲಾ ವಲಯ ಆಯುಕ್ತರು, ಅಭಿವೃದ್ಧಿ ಅಧಿಕಾರಿಗಳು, ಪರಿಸರ ಅಭಿಯಂತರರು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಪೊಲೀಸ್ ಕಚೇರಿಗಳಲ್ಲಿ ಹಾಜರಾತಿ ದಾಖಲಾತಿಗೆ ಆದೇಶ

ಮೈಸೂರು,ಜೂ.20(ಎಸ್‌ಪಿಎನ್)–ಕರ್ನಾಟಕ ರಾಜ್ಯ ಪೊಲೀಸ್ ಎಲ್ಲಾ ಹಂತದ ಕಚೇರಿಗಳಲ್ಲಿ ಆಧುನಿಕ ಹಾಜರಾತಿ ನಿರ್ವಹಣಾ ವ್ಯವಸ್ಥೆ(ಕೆಎಎಂಎಸ್) ಕರ್ತವ್ಯ ತಂತ್ರಾಂಶವನ್ನು ಅನುಷ್ಠಾನಗೊಳಿಸಲು ನೋಡಲ್ ಅಧಿಕಾರಿಯನ್ನು ನೇಮಿಸುವಂತೆ ಪೊಲೀಸ್ ಪ್ರಧಾನ ಕಚೇರಿ ಪೊಲೀಸ್ ಮಹಾನಿರೀಕ್ಷಕ ಎನ್.ಸತೀಶ್‌ಕುಮಾರ್ ಆದೇಶಿಸಿದ್ದಾರೆ. ಸರ್ಕಾರದ ಎಲ್ಲಾ ಇಲಾಖೆ, ನಿಗಮ–ಮಂಡಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರು ಮೇ 1ರಿಂದ ಆದೇಶ ಹೊರಡಿಸಿರುವುದರಿಂದ ಇಲಾಖಾ ಸಿಬ್ಬಂದಿ, ಅಧಿಕಾರಿಗಳು 'ಕರ್ತವ್ಯ' ಅಪ್ಲಿಕೇಷನ್ ಮೂಲಕ ಹಾಜರಾತಿ ದಾಖಲಿಸಬೇಕು ಮತ್ತು ಪೊಲೀಸ್ ಇಲಾಖೆ ಎಲ್ಲಾ ಹಂತದ ಅಧಿಕಾರಿ, ಸಿಬ್ಬಂದಿ ಬೆಳಗ್ಗೆ 10 ಗಂಟೆಗೆ ಆಪ್ ಮೂಲಕ ಹಾಜರಾತಿ ಹಾಕಬೇಕು. ಸಂಜೆ ಕಚೇರಿಯಿಂದ ನಿರ್ಗಮಿಸುವಾಗ ಹಾಜರಾತಿ ನಮೂದಿಸುವುದು ಕಡ್ಡಾಯವಾಗಿದೆ. ಹಾಗಾಗಿ ಕೆಎಎಂಎಸ್ ತಂತ್ರಾಂಶದ ಅನುಷ್ಠಾನ ಪ್ರಕ್ರಿಯೆ ಮತ್ತು ಪರಿಣಾಮಕಾರಿ ಬಳಸುವ ಸಲುವಾಗಿ ನೋಡೆಲ್ ಅಧಿಕಾರಿಯನ್ನು ನೇಮಿಸುವಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಹೋಟೆಲ್, ರೆಸ್ಟೋರೆಂಟ್‌ಗಳ ಲೋಪ ಸರಿಪಡಿಸಿಕೊಳ್ಳಲು ತಿಂಗಳ ಕಾಲಾವಕಾಶ ಕಲ್ಪಿಸಿ

ಮೈಸೂರು ಜಿಲ್ಲಾಡಳಿತಕ್ಕೆ ನಾರಾಯಣಗೌಡರ ಮನವಿ

ಮೈಸೂರು, ಜೂ.20(ಬಿಎಲ್‌ಯು)– ಮೈಸೂರಿನ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಲೋಪ ಸರಿಪಡಿಸಿಕೊಳ್ಳಲು ತಿಂಗಳ ಕಾಲಾವಕಾಶ ನೀಡುವಂತೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮೈಸೂರು ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.

ದಟ್ಟಗಳ್ಳಿಯ ಮಾರಾ ರೆಸ್ಟೋಬಾರ್ ಅಗ್ನಿ ಅವಘಡದ ಹಿನ್ನೆಲೆಯಲ್ಲಿ ನಗರ ಪಾಲಿಕೆ, ಅಬಕಾರಿ ಹಾಗೂ ಇತರೆ ಅಧಿಕಾರಿಗಳು ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳನ್ನು ಪರಿಶೀಲಿಸಿ, ಲೋಪಗಳ ಹಿನ್ನೆಲೆಯಲ್ಲಿ ಕೆಲವನ್ನು ಕೂಡಲೆ ಮುಚ್ಚುವಂತೆ ಸೂಚಿಸಿರುವುದು ಉದ್ಯಮಿಗಳಲ್ಲಿ ಸಂಕಷ್ಟ ತಂದಿದೆ ಎಂದು ಹೇಳಿದ್ದಾರೆ.




ನಾರಾಯಣಗೌಡ

ಮುಂಚಿತ ಸೂಚನೆ ಹಾಗೂ ಕಾಲಾವಕಾಶ ನೀಡದೆ ವ್ಯಾಪಾರ ಸ್ಥಗಿತಗೊಳಿಸಲು ಕಟ್ಟಾಜ್ಞೆ ಮಾಡಿರುವುದು ಉದ್ಯಮಿಗಳನ್ನು ಆತಂಕಕ್ಕೀಡು ಮಾಡಿದೆ ಎಂದು ತಿಳಿಸಿದ್ದಾರೆ. ಮೊದಲು ಮೈಸೂರು ಜಿಲ್ಲೆಯ ಎಲ್ಲಾ ಹೋಟೆಲ್ ಹಾಗೂ ರೆಸ್ಟೋರೆಂಟ್ ಮಾಲೀಕರಸಭೆ ಕರೆದು ಕಾನೂನು ನಿಯಮ ಹಾಗೂ ಸುರಕ್ಷತಾ ಮಾನದಂಡ ಪಾಲಿಸುವ ಕುರಿತು ಸ್ಪಷ್ಟ ನಿರ್ದೇಶನ ನೀಡಬೇಕು ಎಂದು ಕೋರಿದ್ದಾರೆ.

ಈ ಮೂಲಕ ಲೋಪ ಸರಿಪಡಿಸಿಕೊಳ್ಳಲು ಒಂದು ತಿಂಗಳ ಕಾಲಾವಕಾಶ ನೀಡಬೇಕು ಎಂದು ನಾರಾಯಣಗೌಡರು ಮನವಿ ಮಾಡಿದ್ದಾರೆ.

ಅಭಿನಂದನೆ



ನೂತನ ವಿಧಾನಪರಿಷತ್ ಸದಸ್ಯ ಆರ್.ರಘು ಕೌಟಿಲ್ಯ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಆಶೀರ್ವಾದ ಪಡೆದು, ಅಭಿನಂದಿಸಿದರು.

ನನ್ನ ಮತ ಅಸಿಂಧು ಎಂದು ಅಪಪ್ರಚಾರ; ಇದರಲ್ಲಿ ನನ್ನ ಪಕ್ಷದವರ ಪಿತೂರಿ ಇದೆ

ಶಾಸಕ ಟಿ.ಎಸ್.ಶ್ರೀವತ್ಸರ ಆಕ್ರೋಶದ ನುಡಿ



ಬಿಜೆಪಿ ಕಚೇರಿಯಲ್ಲಿ ಪರಿಷತ್ ನೂತನ ಸದಸ್ಯ ಆರ್.ರಘು ಕೌಟಿಲ್ಯ ಅವರನ್ನು ಪಕ್ಷದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಜೂ.20(ಬಿಎಲ್‌ಯು)– ಮೊನ್ನೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ನಾನು ಚಲಾಯಿಸಿದ ಮತ ಅಸಿಂಧು ಆಗಿದೆ ಎಂದು ಅಪಪ್ರಚಾರ ಮಾಡುತ್ತಿದ್ದು, ನಮ್ಮ ಬಿಜೆಪಿ ಪಕ್ಷದವರೇ ಇಂತಹ ಪಿತೂರಿ ನಡೆಸಿದ್ದಾರೆ ಎಂದು ಶಾಸಕ ಟಿ.ಎಸ್. ಶ್ರೀವತ್ಸ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ಸರಿಯಾಗಿ ಮತ ಚಲಾಯಿಸಲು ಆಗದಷ್ಟು ಅಪ್ರಬುದ್ಧನಲ್ಲ. ಆದರೆ, ನಾನು ಚಲಾಯಿಸಿದ ಮತ ಅಸಿಂಧು ಆಗಿದೆ ಎಂದು ಸುಳ್ಳು ವದಂತಿ ಹಬ್ಬಿಸಿದ್ದು, ಇದರಲ್ಲಿ ವ್ಯವಸ್ಥಿತ ಷಡ್ಯಂತ್ರವಿದೆ ಎಂದು ಕಿಡಿಕಾರಿದರು.

ನಾನು ವಿವೇಚನೆಯಿಂದಲೇ ಮತ ಚಲಾಯಿಸಿದ್ದೇನೆ, ನನ್ನ ಮತ ಅಸಿಂಧು ಆಗಿದೆ ಎಂದು ಹೇಳಿದವರು ಯಾರು, ಈ ಬಗ್ಗೆ ಚುನಾವಣಾ ಆಯೋಗ ಏನಾದರೂ ಮಾಹಿತಿ ನೀಡಿದೆಯೇ ಎಂದು ಶ್ರೀವತ್ಸ ಪ್ರಶ್ನಿಸಿದರು.

ನನ್ನ ವಿರುದ್ಧ ನನ್ನ ಪಕ್ಷದವರೇ ಪಿತೂರಿ ನಡೆಸಿದ್ದಾರೆ. ಮಾಧ್ಯಮಗಳಿಗೆ ಹೀಗೆ ಹೇಳಿ ಬರೆಸಿದ್ದಾರೆ. ಎಲ್ಲವನ್ನು ಪಕ್ಷದ ವರಿಷ್ಠರ ಗಮನಕ್ಕೆ ತಂದಿದ್ದೇನೆ ಎಂದು ತಿಳಿಸಿದರು.

ಅಡ್ಡ ಮತದಾನ ನಡೆದಿರುವುದನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂಬುದನ್ನು ಸತ್ಯ ಶೋಧನಾ ಸಮಿತಿ ಪರಿಶೀಲನೆಯಿಂದ ಬಯಲಾಗಲಿದೆ ಎಂದು ಶ್ರೀವತ್ಸ ಹೇಳಿದರು.

> **'ಅಡ್ಡ' ದಾರಿ ಹಿಡಿದವರು ಶಿಕ್ಷೆ ಅನುಭವಿಸುತ್ತಾರೆ**
> ವಿಧಾನ ಪರಿಷತ್ ಚುನಾವಣೆಯಲ್ಲಿ ಕೆಲ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿದ್ದು, ಉಪ್ಪು ತಿಂದವರು ನೀರು ಕುಡಿಯಲೇಬೇಕು ಎಂಬಂತೆ ಶಿಕ್ಷೆ ಅನುಭವಿಸುತ್ತಾರೆ ಎಂದು ವಿಧಾನ ಪರಿಷತ್ ನೂತನ ಸದಸ್ಯ ರಘು ಕೌಟಿಲ್ಯ ಎಚ್ಚರಿಸಿದರು.
> ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಕ್ಷದ ಅಭ್ಯರ್ಥಿಗಳು ಗೆಲ್ಲಬೇಕೆಂಬ ದೃಷ್ಟಿಯಿಂದ ಕಾಂಗ್ರೆಸ್ ಕುದುರೆ ವ್ಯಾಪಾರ ಮಾಡಿದೆ ಎಂದು ಆರೋಪಿಸಿದರು. ಕೆಲವು ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿರುವುದನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ಇದನ್ನು ಪತ್ತೆ ಮಾಡಲೆಂದೇ ಸತ್ಯ ಶೋಧನಾ ಸಮಿತಿ ರಚಿಸಿದೆ. ಸಮಿತಿ ವರದಿಯಿಂದ ಸತ್ಯ ಬಹಿರಂಗವಾಗಲಿದೆ ಎಂದು ಹೇಳಿದರು. ಅತಿ ಹಿಂದುಳಿದ ವರ್ಗದವನಾದ ನನ್ನನ್ನು ಪಕ್ಷ ಗುರುತಿಸಿ ಅಧಿಕಾರ ನೀಡಿದೆ. ಎರಡು ಬಾರಿ ವಿಧಾನ ಪರಿಷತ್ ಚುನಾವಣೆಯಲ್ಲಿ ಸೋತ ನನ್ನನ್ನು ಪಕ್ಷ ಈಗ ವಿಧಾನ ಪರಿಷತ್‌ಗೆ ಪ್ರವೇಶ ಮಾಡುವ ಅವಕಾಶ ಕಲ್ಪಿಸಿದೆ. ಇದಕ್ಕೆ ಪಕ್ಷದ ಹಿರಿಯ ನಾಯಕರು ಕಾರಣಕರ್ತರಾಗಿದ್ದು, ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ರಘು ಕೌಟಿಲ್ಯ ತಿಳಿಸಿದರು.

ಅಡ್ಡ ಮತದಾನದಿಂದ ಬಿಜೆಪಿ; ಜೆಡಿಎಸ್ ಮೈತ್ರಿ ಮೇಲೆ ಪರಿಣಾಮ ಬೀರಲ್ಲ

ವಿಧಾನ ಪರಿಷತ್ ಚುನಾವಣೆಯಲ್ಲಿ ಕೆಲವು ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿರುವ ಬೆಳವಣಿಗೆಯಿಂದ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಮೇಲೆ ಯಾವುದೇ ಕೆಟ್ಟ ಪರಿಣಾಮ ಬೀರುವುದಿಲ್ಲ ಎಂದು ಸಂಸದ ಯದುವೀರ್ ಸ್ಪಷ್ಟಪಡಿಸಿದರು.

ಬಿಜೆಪಿ ನಾಯಕತ್ವಕ್ಕೂ ಅಡ್ಡ ಮತದಾನಕ್ಕೂ ಯಾವುದೇ ಸಂಬಂಧವಿಲ್ಲ. ನಾಯಕತ್ವದ ಮೇಲೆ ಯಾವುದೇ ರೀತಿಯ ಪರಿಣಾಮ ಬೀರುವುದಿಲ್ಲ ಎಂದರು.

ಅಡ್ಡ ಮತದಾನ ಮಾಡಿರುವುದನ್ನು ಪಕ್ಷ ಗಂಭೀರವಾಗಿ ತೆಗೆದುಕೊಂಡು ಇದರ ಪತ್ತೆಗಾಗಿ ಸತ್ಯ ಶೋಧನಾ ಸಮಿತಿ ರಚನೆ ಮಾಡಿದೆ. ಅಡ್ಡ ಮತದಾನ ಪತ್ತೆ ಹಚ್ಚುವುದಕ್ಕೂ ಒಂದು ವ್ಯವಸ್ಥೆ ಇದೆ. ಅದೇ ರೀತಿ ಇದನ್ನು ಪತ್ತೆ ಮಾಡುತ್ತೇವೆ ಎಂದು ಯದುವೀರ್ ಹೇಳಿದರು. ಕೆಲವೊಮ್ಮೆ ಆಡಳಿತಾತ್ಮಕ ಸರ್ಕಾರದಲ್ಲಿ ಇಂತಹ ಬೆಳವಣಿಗೆ ಸರ್ವೆ ಸಾಮಾನ್ಯವಾಗಿರುತ್ತದೆ. ರಾಜಕಾರಣದಲ್ಲಿ ಇಂತಹ ಪ್ರಕ್ರಿಯೆಗಳು ಸದಾ ಕಾಲ ನಡೆಯುತ್ತಿರುತ್ತದೆ ಎಂದು ಅಭಿಪ್ರಾಯಪಟ್ಟರು. ಅಡ್ಡ ಮತದಾನ ನಡೆದಿರುವ ಬೆಳವಣಿಗೆಯಿಂದ ದೊಡ್ಡ ಹಿನ್ನಡೆ ಆಗಿದೆ ಎಂದು ಪರಿಗಣಿಸಬೇಕಾಗಿಲ್ಲ. ರಾಜಕಾರಣ ಅಂದ ಮೇಲೆ ಇದೆಲ್ಲಾ ಮಾಮೂಲು ಎಂದು ಯದುವೀರ್ ತಿಳಿಸಿದರು.

ಉತ್ತರ ನೀಡುವ ಅವಶ್ಯಕತೆ ಇಲ್ಲ: ಆರ್‌ಎಸ್‌ಎಸ್ ನೋಂದಣಿ ಬಗ್ಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಯದುವೀರ್ ಅವರು ಆಕ್ರೋಶ ವ್ಯಕ್ತಪಡಿಸಿದರು.

ಪ್ರಿಯಾಂಕ್ ಖರ್ಗೆ ಅವರ ಪ್ರಶ್ನೆಗಳಿಗೆ ಉತ್ತರಿಸುವ ಅಗತ್ಯವಿಲ್ಲ. ರಾಜಕೀಯ ಕಾರಣಕ್ಕಾಗಿ ಏನೇನೊ ಮಾತನಾಡುತ್ತಾರೆ. ಮಾತನಾಡಲಿ ಬಿಡಿ ಎಂದು ಲೇವಡಿ ಮಾಡಿದರು.

ಗೃಹ ಸಚಿವರಿಗೆ ಪ್ರಶ್ನೆ ಕೇಳುವ ಹಕ್ಕಿದೆ. ಆದರೆ ಅವರು ಕೇಳುವ ಎಲ್ಲಾ ಪ್ರಶ್ನೆಗಳಿಗೆಲ್ಲಾ ಉತ್ತರ ನೀಡುವ ಅವಶ್ಯಕತೆ ಇಲ್ಲ ಎಂದು ಯದುವೀರ್ ತಿರುಗೇಟು ನೀಡಿದರು.

ಕೊಡವ ಹಾಕಿ ನಮ್ಮೆ: ಅಜ್ಜಿಕುಟ್ಟಿರ ಕುಟುಂಬದವರ ಪೂರ್ವಭಾವಿ ಸಭೆ



ಅಜ್ಜಿಕುಟ್ಟಿರ ಕುಟುಂಬದವರ ಪೂರ್ವಭಾವಿ ಸಭೆ ನಡೆಯಿತು.

ಮಡಿಕೇರಿ, ಜೂ.20–ಮುಂದಿನ ಸಾಲಿನಲ್ಲಿ ಜರುಗುವ ಕೊಡವ ಹಾಕಿ ನಮ್ಮೆಯ ಪ್ರಾಯೋಜಕತ್ವವನ್ನು ವಹಿಸಿಕೊಂಡಿರುವ ಅಜ್ಜಿಕುಟ್ಟಿರ ಕುಟುಂಬದವರ ಪೂರ್ವಭಾವಿ ಸಭೆ ಗೋಣಿಕೊಪ್ಪಲುವಿನಲ್ಲಿ ನಡೆಯಿತು.

ಅಜ್ಜಿಕುಟ್ಟಿರ ಕುಟುಂಬದ ಹಾಕಿ ನಮ್ಮೆ ಆಯೋಜನೆ ಸಮಿತಿ ಅಧ್ಯಕ್ಷರು ಹಾಗೂ ಸಮಿತಿಯ ಪ್ರಮುಖರು ಭಾಗವಹಿಸಿದ್ದ ಸಭೆಯಲ್ಲಿ ಮಾತನಾಡಿದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಮುಂದಿನ ಸಾಲಿನಲ್ಲಿ ವಿಜೃಂಭಣೆಯಿಂದ ಹಾಕಿ ನಮ್ಮೆ ನಡೆಸುವ ನಿಟ್ಟಿನಲ್ಲಿ ಹಲವು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದರು. ಹಲವು ವರ್ಷಗಳ ಬಳಿಕ ದಕ್ಷಿಣ ಕೊಡಗಿಗೆ ಹಾಕಿ ನಮ್ಮೆ ಆಯೋಜನೆಯ ಅವಕಾಶ ದೊರಕುತ್ತಿದೆ. ಈ ಹಿನ್ನೆಲೆಯಲ್ಲಿ ಕೊಡವ ಹಾಕಿ ಅಕಾಡೆಮಿ ಸಹಿತ ಎಲ್ಲರ ಸಹಕಾರದಿಂದ ವ್ಯವಸ್ಥಿತವಾಗಿ ಪಂದ್ಯಾಟ ಆಯೋಜಿಸಬೇಕು ಎಂದು ಹೇಳಿದರು.

ಅಜ್ಜಿಕುಟ್ಟಿರ ಕುಟುಂಬದ ಹಾಕಿ ನಮ್ಮೆಯ ಅಧ್ಯಕ್ಷ ಅಜ್ಜಿಕುಟ್ಟಿರ ನರೇನ್ ಕಾರ್ಯಪ್ಪ ಮಾತನಾಡಿ, ಹಾಕಿ ಪಂದ್ಯಾವಳಿಯನ್ನು ಅಭೂತಪೂರ್ವವಾಗಿ ನಡೆಸುವುದರೊಂದಿಗೆ ಎಲ್ಲರ ಮೆಚ್ಚುಗೆಗೆ ಪಾತ್ರರಾಗುವಂತೆ ಕಾರ್ಯ ನಿರ್ವಹಿಸಬೇಕೆಂದು ತಿಳಿಸಿದರು.

ಕೊಡವ ಹಾಕಿ ಅಕಾಡೆಮಿಯ ಸಹಭಾಗಿತ್ವದಲ್ಲಿ ಸಭೆ ಆಯೋಜನೆಗೊಂಡಿದ್ದು, ಪಂದ್ಯಾವಳಿಯ ಯಶಸ್ವಿಗೆ ಎಲ್ಲರೂ ಸಹಕರಿಸಬೇಕೆಂದು ಒಮ್ಮತದ ಅಭಿಪ್ರಾಯಕ್ಕೆ ಬರಲಾಯಿತು. ಅಜ್ಜಿಕುಟ್ಟಿರ ಕುಟುಂಬದ ಸದಸ್ಯರು, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಾಂಡ ಬೋಪಣ್ಣ, ಅಕಾಡೆಮಿಯ ಸದಸ್ಯರು, ನಿರ್ದೇಶಕರು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಅಡುಗೆ ಅನಿಲ ದರ ಹೆಚ್ಚಳ ವಿರೋಧಿಸಿ ಖಾಲಿ ಸಿಲಿಂಡರ್‌ಗಳೊಂದಿಗೆ ಪ್ರತಿಭಟನೆ



ಖಾಲಿ ಸಿಲಿಂಡರ್‌ಗಳೊಂದಿಗೆ ಮಹಿಳೆಯರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಜೂ.20–ಜನಸಾಮಾನ್ಯರ ಬದುಕನ್ನು ನಿರ್ಲಕ್ಷಿಸಿ ಸರ್ಕಾರಗಳು ನಿರಂತರವಾಗಿ ಅಡುಗೆ ಅನಿಲ ದರವನ್ನು ಹೆಚ್ಚಿಸಿರುವುದನ್ನು ಖಂಡಿಸಿ ಸೋಷಿಯಲ್ ಡೆಮಾ ಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾದ ವುಮೆನ್ಸ್ ಇಂಡಿಯಾ ಮೂಮೆಂಟ್ ನಗರದಲ್ಲಿ ಖಾಲಿ ಸಿಲಿಂಡರ್‌ಗಳನ್ನು ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಯಿತು.

ವುಮೆನ್ಸ್ ಇಂಡಿಯಾ ಮೂಮೆಂಟ್‌ನ ಜಿಲ್ಲಾಧ್ಯಕ್ಷೆ ಜಾಕಿಯಾ ಹುರೈರ ನೇತೃತ್ವದಲ್ಲಿ ನಗರದ ಇಂದಿರಾ ಗಾಂಧಿ ವೃತ್ತದಲ್ಲಿ ಸಮಾವೇಶಗೊಂಡ ಸಂಘಟನೆಯ ಪದಾಧಿಕಾರಿಗಳು ಮತ್ತು ಸದಸ್ಯರು, ಸರ್ಕಾರಗಳ ವಿರುದ್ಧ ಘೋಷಣೆಗಳನ್ನು ಕೂಗಿ ಅಡುಗೆ ಅನಿಲ ದರ ಹೆಚ್ಚಳವನ್ನು ತೀವ್ರವಾಗಿ ಖಂಡಿಸಿದರು.

ಜಿಲ್ಲಾಧ್ಯಕ್ಷೆ ಜಾಕಿಯಾ ಹುರೈರ ಮಾತನಾಡಿ, 3 ತಿಂಗಳ ಅವಧಿಯಲ್ಲಿ ಅಡುಗೆ ಅನಿಲದ ದರವನ್ನು 89 ರೂ.ಗಳಷ್ಟು ಹೆಚ್ಚಿಸಲಾಗಿದೆ. ಪ್ರಸ್ತುತ ಸರ್ಕಾರಗಳು ಅಭಿವೃದ್ಧಿಯ ಬದಲಾಗಿ, ಅಗತ್ಯ ವಸ್ತುಗಳ ಬೆಲೆ ಹೆಚ್ಚಳದ ಮೂಲಕ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುವ ಕೆಲಸ ಮಾಡುತ್ತಿವೆ. ನಿತ್ಯೋಪಯೋಗಿ ಗ್ಯಾಸ್ ಸಿಲಿಂಡರ್‌ಗಳೊಂದಿಗೆ ಕಮರ್ಷಿಯಲ್ ಸಿಲಿಂಡರ್‌ಗಳ ಬೆಲೆ ಗಗನಕ್ಕೇರಿದೆ. ಇದರಿಂದ ಹೋಟೇಲ್ ಸೇರಿದಂತೆ ವಿವಿಧ ಸಣ್ಣ ಪುಟ್ಟ ಆಹಾರ ಉತ್ಪಾದನಾ ಉದ್ಯಮಿಗಳು ತೀವ್ರ ಸಂಕಷ್ಟಕ್ಕೆ ಸಿಲುಕಿರುವುದಾಗಿ ಬೇಸರ ವ್ಯಕ್ತಪಡಿಸಿದರು. ಪ್ರಧಾನಿ ಮೋದಿ ಅವರು ರಾಷ್ಟ್ರದ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಿದ್ದಾರೆಯೇ ಹೊರತು, ಜನ ಸಾಮಾನ್ಯರ ಬದುಕನ್ನು ಹಸನಾಗಿಸುವ ನಿಟ್ಟಿನ ಕಾರ್ಯಗಳನ್ನು ನಡೆಸುತ್ತಿಲ್ಲ. ಅಡುಗೆ ಅನಿಲ ದರ ಹೆಚ್ಚಳದೊಂದಿಗೆ, ಪ್ರಸ್ತುತ ಆನ್‌ಲೈನ್‌ನಲ್ಲಿ ಅಡುಗೆ ಸಿಲಿಂಡರ್‌ಗಳಿಗೆ ಬುಕ್ ಮಾಡಿದರು ಸಮರ್ಪಕವಾಗಿ ಸಿಲಿಂಡರ್‌ಗಳು ಲಭ್ಯವಾಗುತ್ತಿಲ್ಲ ಎಂದು ಟೀಕಿಸಿದರು.

ರಾಜ್ಯ ಸರ್ಕಾರ ಕೂಡ ಜನರ ಅಭಿವೃದ್ಧಿಯ ನಿಟ್ಟಿನಲ್ಲಿ ಚಿಂತಿಸುತ್ತಿಲ್ಲ. ಗೃಹಲಕ್ಷ್ಮಿ, ಶಕ್ತಿ ಯೋಜನೆ ಮೊದಲಾದ ಭಾಗ್ಯಗಳನ್ನು ಜನರಿಗೆ ಒಂದು ಕೈಯಿಂದ ಕೊಟ್ಟು ಮತ್ತೊಂದು ಕೈಯಿಂದ ಕಸಿದುಕೊಳ್ಳುತ್ತಿರುವುದಾಗಿ ಅಸಮಾಧಾನ ವ್ಯಕ್ತಪಡಿಸಿದರು.

ಸಂಘಟನೆಯ ಕಾರ್ಯದರ್ಶಿ ರಿಶಾನ ತಹಸೀನ್ ಮಾತನಾಡಿ, ಉಜ್ವಲ ಹೆಸರಿನಲ್ಲಿ ಬಡ ಮಂದಿಗೆ ಉಚಿತವಾಗಿ ಅಡುಗೆ ಅನಿಲವನ್ನು ಒದಗಿಸಲಾಗುತ್ತಿತ್ತು. ಆದರೆ ಇಂದು ಅಡುಗೆ ಅನಿಲ ಸಮರ್ಪಕವಾಗಿ ದೊರಕದೆ ಅಡುಗೆ ಅನಿಲದ ಬದಲಾಗಿ ಸೌದೆಯಿಂದ ಒಲೆ ಉರಿಸಬೇಕಾದ ಸಂಕಷ್ಟ ಎದುರಾಗಿದೆ. ಸರ್ಕಾರಗಳು ಅಡುಗೆ ಅನಿಲ ದರವನ್ನು 800 ರೂ.ಗಿಂತ ಕೆಳಕ್ಕಿಳಿಸಿ, ಸಿಲಿಂಡರ್‌ಗಳಿಗೆ ಸಹಾಯಧನ ಒದಗಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಕಾರ್ಯದರ್ಶಿ ಮೇರಿ ವೇಗಾಸ್, ಜಿಲ್ಲಾ ಸಮಿತಿ ಸದಸ್ಯರಾದ ತಾಹಿರ ಅಲಿ, ಜಸೀಲ, ತಾಹಿರ ಇಬ್ರಾಹಿಂ, ಫೌಝಿಯಾ ಮುನೀರ್ ಮೊದಲಾದವರಿದ್ದರು.

ಪುರಸಭೆಯಿಂದ ಪಾದಚಾರಿ ಮಾರ್ಗ ಒತ್ತುವರಿ ತೆರವು



ವಿರಾಜಪೇಟೆ: ನಗರದ ಪಾದಚಾರಿಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗಿದ್ದ ಒತ್ತುವರಿ ದಂದೆಗೆ ಪುರಸಭೆ ಮುಖ್ಯಾಧಿಕಾರಿ ಬ್ರೇಕ್ ಹಾಕಿದ್ದಾರೆ. ಸಾರ್ವಜನಿಕರ ದೂರಿಗೆ ಸ್ಪಂದಿಸಿದ ಅಧಿಕಾರಿಗಳು, ಶನಿವಾರ ರಸ್ತೆಗಿಳಿದು ಕಾರ್ಯಾಚರಣೆ ನಡೆಸಿದ್ದಾರೆ.

ಪಟ್ಟಣದ ಪ್ರಮುಖ ರಸ್ತೆಗಳ ಹಾಗೂ ಗೌರಿಕೆರೆ ತೆರಳುವ ರಸ್ತೆ, ಖಾಸಗಿ ಬಸ್ಸು ನಿಲ್ದಾಣ ಸೇರಿದಂತೆ ಪಟ್ಟಣದಾದ್ಯಂತ ಪಾದಚಾರಿ ಮಾರ್ಗಗಳನ್ನು ಸ್ಥಳೀಯ ಅಂಗಡಿ ಮಾಲೀಕರು ಅತಿಕ್ರಮಿಸಿಕೊಂಡು ವ್ಯಾಪಾರ ನಡೆಸುತ್ತಿದ್ದರು. ಇದರಿಂದಾಗಿ ಸಾರ್ವಜನಿಕರು, ವೃದ್ಧರು, ಮಹಿಳೆಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕ ವಲಯದಿಂದ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ಶಿವಪ್ಪ ದಿಟ್ಟತನದಿಂದ ತೆರವು ಕಾರ್ಯಾಚರಣೆಯನ್ನು ಕೈಗೆತ್ತಿಕೊಂಡಿದ್ದಾರೆ.

ಇಂದು ಯೋಗ ದಿನಾಚರಣೆ

ಮಡಿಕೇರಿ, ಜೂ.20– ಜಿಲ್ಲಾಡಳಿತ, ಜಿ. ಪಂ. ಮತ್ತು ಆಯುಷ್ ಇಲಾಖೆ ಸಹಯೋಗದೊಂದಿಗೆ ಆರೋಗ್ಯಕರ ವಯೋವೃದ್ಧಿಗಾಗಿ ಯೋಗ ಎಂಬ ವಿಷಯದಡಿ ಅಂತರ ರಾಷ್ಟ್ರೀಯ 12ನೇ ಯೋಗ ದಿನಾಚರಣೆ ಜೂ. 21ರ ಬೆಳಿಗ್ಗೆ 6.30ಕ್ಕೆ ನಗರದ ಕಾವೇರಿ ಹಾಲ್‌ನಲ್ಲಿ ನಡೆಯಲಿದೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

ಕುಶಾಲನಗರ: ಕಚ್ಚಾತೈಲ, ರಸಗೊಬ್ಬರ, ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಶನಿವಾರ ಕೇಂದ್ರ ಸರ್ಕಾರದ ವಿರುದ್ಧ ಬ್ಲಾಕ್ ಕಾಂಗ್ರೆಸ್ ಪ್ರತಿಭಟನೆ ನಡೆಸಿತು.

ಗೌಡ ಸಮಾಜ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿ ಬಳಿಯಿಂದ ಜೀಪ್‌ಗೆ ಹಗ್ಗ ಕಟ್ಟಿ ಕಾರ್ಯಕರ್ತರು ಎಳೆಯುವ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿದರು. ಕಾಂಗ್ರೆಸ್ ಕಚೇರಿಯಿಂದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದವರೆಗೆ ಮೆರವಣಿಗೆ ನಡೆಸಿದ ಕಾರ್ಯಕರ್ತರು ಮೆರವಣಿಗೆ ಉದ್ದಕ್ಕೂ ಕೇಂದ್ರ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ, ಅಮಿತ್ ಷಾ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಪ್ರತಿಭಟನಾಕಾರರು ಮಾನವ ಸರಪಳಿ ರಚಿಸಿ ಅರ್ಧತಾಸಿಗೂ ಹೆಚ್ಚು ಕಾಲ ರಸ್ತೆತಡೆ ನಡೆಸಿದ್ದರಿಂದ ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು. ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಟಿ.ಎಂ. ಶಾಹಿದ್ ತೆಕ್ಕಿಲ್ ಮಾತನಾಡಿದರು.

ಜಿಲ್ಲಾ ಕೇಂದ್ರಗಳಲ್ಲಿ ಬ್ಯಾಡ್ಮಿಂಟನ್ ಕೇಂದ್ರ ಸ್ಥಾಪನೆಯಾಗಲಿ

ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಕುಮಾರ್ ಬಂಗಾರಪ್ಪ



ಸಂವಾದದಲ್ಲಿ ನಟ ಕುಮಾರ್ ಬಂಗಾರಪ್ಪ ಮಾತನಾಡಿದರು.

ಮಂಡ್ಯ, ಜೂ.20– ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬ್ಯಾಡ್ಮಿಂಟನ್ ಕ್ರೀಡಾ ಕೇಂದ್ರ ಸ್ಥಾಪನೆಗೆ ರಾಜ್ಯ ಸರ್ಕಾರ 5 ರಿಂದ 10 ಎಕರೆ ಭೂಮಿ ನೀಡಲು ಮುಂದಾಗಬೇಕು ಎಂದು ನಟ, ಮಾಜಿ ಸಚಿವ, ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಕುಮಾರ್ ಬಂಗಾರಪ್ಪ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 9500 ರಿಂದ 10 ಸಾವಿರ ಬ್ಯಾಡ್ಮಿಂಟನ್ ಕೋರ್ಟ್‌ಗಳಿವೆ. ರಾಜ್ಯವು ಉತ್ತಮ ಅಂತರಾಷ್ಟ್ರೀಯ ಆಟಗಾರರನ್ನು ದೇಶಕ್ಕೆ ನೀಡುತ್ತಿದೆ. ಭವಿಷ್ಯದಲ್ಲಿ ಒಲಂಪಿಕ್ ಕ್ರೀಡೆ ಸಲುವಾಗಿ ಬೆಂಗಳೂರಿನಲ್ಲಿ 50 ಎಕರೆ ಭೂಮಿಯನ್ನು ಬ್ಯಾಡ್ಮಿಂಟನ್ ಕ್ರೀಡಾಂಗಣ ನಿರ್ಮಿಸಲು ನೀಡುವುದಾಗಿ ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿದ್ದರು. ಹೀಗಾಗಿ ಸಿಎಂ ಡಿ.ಕೆ.ಶಿವಕುಮಾರ್ ಅವರು ಸ್ಪಂದಿಸುವ ನಿರೀಕ್ಷೆ ಇದೆ ಎಂದು ಭರವಸೆ ನೀಡಿದರು.

ಜಿಲ್ಲೆಯಲ್ಲಿ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಚಾಲನೆ ನೀಡಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಜಿಲ್ಲೆಯ ಅಸೋಸಿಯೇಷನ್‌ಗೆ ಭೂಮಿ ಒದಗಿಸುವ ಸಲುವಾಗಿ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಭರವಸೆ ನೀಡಿದ್ದಾರೆ. ರಾಜ್ಯದೆಲ್ಲೆಡೆ ಸರ್ಕಾರಿ ಸಮುಚ್ಛಯಗಳಲ್ಲಿ 4 ರಿಂದ 5 ಸಾವಿರ ಚದರ ಅಡಿ ಸ್ಥಳ ನೀಡಿದರೂ, ಒಂದು ಕೋರ್ಟ್ ಸಹಿತ ಸುಸಜ್ಜಿತ ವ್ಯವಸ್ಥೆ ಮಾಡಿಕೊಳ್ಳಬಹುದು ಎಂದರು.

ರ್‍ಯಾಂಕಿಂಗ್ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಮಕ್ಕಳ ಪೋಷಕರು ಅಸೋಸಿಯೇಷನ್ ಕಡೆಯಿಂದ ಭಾಗವಹಿಸುವುದು ಸೂಕ್ತ. ಇದರಿಂದ ಅವರಿಗೆ ಶೇ.40ರಿಂದ 50ರಷ್ಟು ಆರ್ಥಿಕ ನೆರವು ದೊರೆಯುವುದರ ಜೊತೆಗೆ ಊಟ–ವಸತಿ ವ್ಯವಸ್ಥೆಯನ್ನು ಕಲ್ಪಿಸುವ ಜವಾಬ್ದಾರಿ ತೆಗೆದುಕೊಳ್ಳಲಾಗುವುದು ಎಂದು ಪ್ರಶ್ನೆಗೆ ಉತ್ತರ ನೀಡಿದರು.

ಬ್ಯಾಡ್ಮಿಂಟನ್ ಆಟದ ಸ್ವರೂಪ ಬದಲಾಗುತ್ತಿದೆ. 2 ಸರ್ವಿಸ್ ಮಾದರಿಯಿಂದ 21 ಪಾಯಿಂಟ್ ರೀತಿಗೆ ಬದಲಾದ ಪಂದ್ಯವು ಇದೀಗ 15 ಪಾಯಿಂಟ್‌ನ 3 ಸೆಟ್‌ಗಳ ಪಂದ್ಯಾವಳಿಯಾಗಿ ರೂಪಾಂತರವಾಗುತ್ತಿದೆ. ಕ್ರೀಡೆಗೆ ಪ್ರೋತ್ಸಾಹಿಸುವ ಸಲುವಾಗಿ ಹೊಸ ಕ್ರೀಡಾ ನೀತಿ ಜಾರಿಗೆ ತರಲಿದೆ. ಎಲ್ಲಾ ಕ್ರೀಡೆಗಳಿಗೆ ಅಗತ್ಯಕ್ಕೆ ತಕ್ಕಂತೆ ಅನುದಾನ ಒದಗಿಸುವ ಸಲುವಾಗಿ ನೀತಿ ರೂಪಿಸಲಾಗುತ್ತಿದೆ. ಅಂತೆಯೇ ಎಲ್ಲಾ ಕ್ರೀಡಾ ಸಮಿತಿಯಲ್ಲಿ ಮಹಿಳೆಯರನ್ನು ಒಳಗೊಂಡಂತೆ 5 ಮಂದಿ ಕ್ರೀಡಾಪಟುಗಳು ಇರುವಂತೆ ರಚನೆ ಮಾಡಲಾಗುವುದು. ಇದೇ ಡಿಸೆಂಬರ್‌ನಿಂದ ಈ ಕ್ರೀಡಾ ನೀತಿ ಜಾರಿಯಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

ಐತಿಹಾಸಿಕ ಮೂಲೆ ಮಂಟಪ ಧ್ವಂಸಗೊಳಿಸಿದ

ಕಿಡಿಗೇಡಿಗಳ ಬಂಧನಕ್ಕೆ ಒತ್ತಾಯಿಸಿ ಪ್ರತಿಭಟನೆ



ತಾಲೂಕು ಆಡಳಿತ, ಪೊಲೀಸ್ ಇಲಾಖೆ ವಿರುದ್ಧ ನಾಗರಿಕರು ಹೆದ್ದಾರಿ ತಡೆದು ಪ್ರತಿಭಟಿಸಿದರು.

ಶ್ರೀರಂಗಪಟ್ಟಣ, ಜೂ.20– ಐತಿಹಾಸಿಕ ಮೂಲೆ ಮಂಟಪ ಧ್ವಂಸ ಮಾಡಿದ ಕಿಡಿಗೇಡಿಗಳನ್ನು ತಿಂಗಳಾದರೂ ಬಂಧಿಸಿಲ್ಲ. ಜೊತೆಗೆ ಮಂಟಪವನ್ನು ಯಥಾಸ್ಥಿತಿ ನಿರ್ಮಿಸಿಲ್ಲ ಎಂದು ಆರೋಪಿಸಿ ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆ ವಿರುದ್ಧ ನಾಗರಿಕರು ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ತಾಲೂಕಿನ ಕಿರಂಗೂರು ಗ್ರಾಮದ ಮೂಲೆ ಮಂಟಪದ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಎತ್ತಿನಗಾಡಿ, ಟ್ರ್ಯಾಕ್ಟರ್ ಸೇರಿದಂತೆ ಜಾನುವಾರುಗಳನ್ನು ಶ್ರೀರಂಗಪಟ್ಟಣ–ಜೇವರ್ಗಿ ಹೆದ್ದಾರಿಯಲ್ಲಿ ನಿಲ್ಲಿಸಿ ಕೆಲಕಾಲ ಹೆದ್ದಾರಿ ತಡೆದು, ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು ಕಿರಂಗೂರು ಮತ್ತು ದರಸಗುಪ್ಪೆ ಗ್ರಾಮಗಳ ನಡುವೆ ಹೆದ್ದಾರಿ ಪಕ್ಕದಲ್ಲಿದ್ದ ಮಹಾರಾಜರ ಕಾಲದ ಮಂಟಪವನ್ನು ಒಂದು ತಿಂಗಳ ಹಿಂದೆ ಕಿಡಿಗೇಡಿಗಳು ನಾಶ ಮಾಡಿದ್ದರು. ಈ ಸಂಬಂಧ ಆರೋಪಿಗಳ ಬಂಧನಕ್ಕೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಗಿತ್ತು. ಸ್ಥಳಕ್ಕೆ ತಹಸೀಲ್ದಾರ್ ಸೇರಿದಂತೆ ಪೊಲೀಸ್ ಇಲಾಖೆ ಅಧಿಕಾರಿಗಳು ಆಗಮಿಸಿ 15 ದಿನದೊಳಗೆ ಆರೋಪಿಗಳನ್ನು ಬಂಧಿಸಿ, ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಮಂಟಪ ನಿರ್ಮಿಸಲಾಗುವುದು ಎಂದು ಭರವಸೆ ನೀಡಿದ್ದರು. ಆದರೆ ಘಟನೆ ನಡೆದು ತಿಂಗಳಾದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಚೇತನಾ ಯಾದವ್ ನೆಲಸಮಗೊಳಿಸಿರುವ ಮೂಲೆ ಮಂಟಪವನ್ನು ಸರ್ಕಾರದ ಅನುದಾನದಲ್ಲಿ ನಿರ್ಮಿಸಲು ಸಾಧ್ಯವಿಲ್ಲ. ಹೀಗಾಗಿ ದಾನಿಗಳ ನೆರವಿನೊಂದಿಗೆ ಶೀಘ್ರವಾಗಿ ಮಂಟಪ ಪುನರ್ ನಿರ್ಮಾಣ ಮಾಡಲಾಗುವುದು. ಅಲ್ಲಿವರೆಗೆ ಕಾಲಾವಕಾಶ ನೀಡುವಂತೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಪ್ರತಿಭಟನೆ ಹಿಂಪಡೆದರು.

ಪ್ರತಿಭಟನೆಯಲ್ಲಿ ಕರ್ನಾಟಕ ಕದಂಬ ಪಡೆ ಜಿಲ್ಲಾಧ್ಯಕ್ಷ ರುಕ್ಮಾಂಗದ, ಗಂಜಾಂ ಅಭಿ, ಮಂಡ್ಯ ರಕ್ಷಣಾ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಶಂಕರ್‌ಬಾಬು, ಜಗದೀಶ್ ಕಿರಂಗೂರು, ದರಸಗುಪ್ಪೆ ಗ್ರಾಪಂ ಮಾಜಿ ಸದಸ್ಯ ಯೋಗೇಶ್, ಶಿವು ಸೇರಿದಂತೆ ಕಿರಂಗೂರು, ದರಸಗುಪ್ಪೆ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.

ಕೆ.ಆರ್.ಪೇಟೆ ಪಿಎಲ್‌ಡಿ ಬ್ಯಾಂಕ್‌ಗೆ ರಾಜನಾಯಕ್ ಅಧ್ಯಕ್ಷ



ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎ.ಆರ್.ರಾಜಜನಾಯಕ್ ಅವರನ್ನು ಮುಖಂಡರು ಅಭಿನಂದಿಸಿದರು.

ಕೆ.ಆರ್.ಪೇಟೆ, ಜೂ.20– ತಾಲೂಕು ಪಿಎಲ್‌ಡಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ವಾಲ್ಮೀಕಿ ನಾಯಕ ಸಮಾಜದ ಹಿರಿಯ ಮುಖಂಡ ಅಕ್ಕಿಹೆಬ್ಬಾಳು ಎ.ಆರ್. ರಾಜನಾಯಕ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಎ.ಸಿ.ಮೋಹನ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಎ.ಆರ್.ರಾಜನಾಯಕ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪಿಎಲ್‌ಡಿ ಬ್ಯಾಂಕ್ ಕಾರ್ಯದರ್ಶಿ ಆನಂದ್ ಘೋಷಿಸಿದರು.

ಬ್ಯಾಂಕ್ ನೂತನ ಅಧ್ಯಕ್ಷ ಎ.ಆರ್. ರಾಜನಾಯಕ್ ಅವರನ್ನು ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್, ಮೈಸೂರು ಲ್ಯಾಂಪ್ಸ್ ಮಾಜಿ ಅಧ್ಯಕ್ಷ ಬಿ.ಎಲ್.ದೇವರಾಜು, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್. ಅಂಬರೀಶ್, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ರಮೇಶ್, ನಿರ್ದೇಶಕರಾದ ಪುಟ್ಟಸ್ವಾಮೀಗೌಡ, ಎ.ಬಿ.ನಾಗರಾಜು, ನಾಗೇಶ್, ಧನಂಜಯ, ರಾಮೇಗೌಡ, ಜಗದೀಶ್, ಮಂಜುಳಾ, ಕವಿತ್, ಸುರೇಶ್, ಸುನೀಲ್, ಕೆ.ಟಿ.ಚಕ್ರಪಾಣಿ, ಚಂದ್ರೇಗೌಡ, ಮೋಹನ್, ತಾಲೂಕು ವಾಲ್ಮೀಕಿ ನಾಯಕ ಸಂಘದ ಗೌರವಾಧ್ಯಕ್ಷ ಕುಮಾರ್, ಮುಖಂಡರಾದ ಮಹೇಶ್‌ನಾಯಕ್, ವಾಲ್ಮೀಕಿ ನಾಯಕ ಸಂಘದ ಟೌನ್ ಘಟಕದ ಅಧ್ಯಕ್ಷ ಗಣೇಶ್ ನಾಯಕ್, ಗ್ಯಾಸ್ ತಮ್ಮಯ್ಯ, ಶೇಖರ್, ತಾಲೂಕು ಮೀನುಗಾರರ ಸಹಕಾರ ಸಂಘದ ಅಧ್ಯಕ್ಷ ಸತೀಶ್ ಮತ್ತಿತರರು ಅಭಿನಂದಿಸಿದರು.

ನೂತನ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎ.ಆರ್.ರಾಜನಾಯಕ್ ಮಾತನಾಡಿ, ನನ್ನನ್ನು ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ನಿರ್ದೇಶಕರು ಹಾಗೂ ಮುಖಂಡರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನ ಅಧಿಕಾರವಧಿಯಲ್ಲಿ ಬ್ಯಾಂಕ್‌ನ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಪಿಎಲ್‌ಡಿ ಬ್ಯಾಂಕ್ ಮೂಲಕವೂ ಸರ್ಕಾರ ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡುತ್ತಿದೆ. ಹೀಗಾಗಿ ರೈತರು, ಬ್ಯಾಂಕ್ ಷೇರುದಾರರು ಇದರ ಸದುಪಯೋಗಪಡಿಸಿಕೊಳ್ಳಬೇಕು. ಅಲ್ಲದೇ ಬ್ಯಾಂಕ್‌ನಿಂದ ಸಾಲ ಪಡೆದ ರೈತರು ಸಕಾಲದಲ್ಲಿ ಮರು ಪಾವತಿ ಮಾಡಬೇಕು ಎಂದು ಮನವಿ ಮಾಡಿದರು.

ಮಸಣಾಪುರ ಪ್ರಕರಣ: ಸೌಹಾರ್ದತೆ ಕಾಪಾಡಲು ಸಮುದಾಯಗಳ ಭರವಸೆ



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶಾಂತಿ ಸಭೆ ನಡೆಯಿತು.

ಚಾಮರಾಜನಗರ, ಜೂ.20–ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಶುಕ್ರವಾರ ಆಯೋಜಿಸಿದ್ದ ಶಾಂತಿ ಸಭೆ ಯಶಸ್ವಿಯಾಗಿ ನಡೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪಾ, ಜಿಲ್ಲೆಯ ಅಭಿವೃದ್ಧಿ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಎರಡು ಸಮುದಾಯಗಳು ಶಾಂತಿ ಹಾಗೂ ಸೌಹಾರ್ದತೆಯನ್ನು ಕಾಪಾಡಿಕೊಳ್ಳಬೇಕು. ಮಸಣಾಪುರ ಘಟನೆ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಗಲಭೆ ಅಥವಾ ಅಶಾಂತಿಗೆ ಅವಕಾಶ ನೀಡಬಾರದು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಮಾತನಾಡಿ, ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿರುವುದು ಖಂಡನೀಯ. ಮಸಣಾಪುರ ಹಾಗೂ ಹೊಂಗನೂರು ಗ್ರಾಮಗಳಲ್ಲಿ ನಡೆದ ಪ್ರಕರಣಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಲಾಗುವುದು. ಪ್ರತಿಭಟನೆಗಳು ಪ್ರಜಾಪ್ರಭುತ್ವದ ಹಕ್ಕಾಗಿದ್ದರೂ, ಅವುಗಳಿಂದ ಕೋಮು ಸೌಹಾರ್ದತೆಗೆ ಧಕ್ಕೆ ಉಂಟಾಗಬಾರದು ಎಂಬುದು ಪೊಲೀಸ್ ಇಲಾಖೆಯ ಆಶಯವಾಗಿದೆ ಎಂದು ಹೇಳಿದರು.

ವಿವಿಧ ಸಮುದಾಯಗಳ ಮುಖಂಡರು ಮಾತನಾಡಿ, ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಎಸಗಿದ ಕೃತ್ಯವನ್ನು ಖಂಡಿಸಿ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಪ್ರಕರಣವನ್ನು ಯಾವುದೇ ಸಮುದಾಯದ ದೃಷ್ಟಿಯಿಂದ ನೋಡದೆ ಕಾನೂನು ಚೌಕಟ್ಟಿನೊಳಗೆ ತನಿಖೆ ನಡೆಸಬೇಕು ಎಂದರು.

ಎರಡು ಸಮುದಾಯಗಳ ಮುಖಂಡರು ಮುಂದಿನ ದಿನಗಳಲ್ಲಿ ಯಾವುದೇ ರೀತಿಯ ಉದ್ವಿಗ್ನತೆ ಉಂಟಾಗದಂತೆ ಪರಸ್ಪರ ಸಹಕಾರ ನೀಡುವ ಭರವಸೆಯ ನಿರ್ಧಾರ ಕೈಗೊಳ್ಳಲಾಯಿತು. ಸಭೆಯಲ್ಲಿ ಜಿ.ಪಂ. ಸಿಇಒ ಮೋನಾರೋತ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ತಹಸೀಲ್ದಾರ್ ಗಿರಿಜಾ, ಡಿವೈಎಸ್ಪಿ ಸ್ನೇಹಾರಾಜ್ ಸೇರಿದಂತೆ ವಿವಿಧ ಸಮು ದಾಯಗಳ ಮುಖಂಡರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಖಾಸಗೀಕರಣ ವಿರೋಧಿಸಿ ಚೆಸ್ಕಾಂ ಅಧಿಕಾರಿ, ನೌಕರರ ಒಕ್ಕೂಟ ಪ್ರತಿಭಟನೆ



ಚೆಸ್ಕಾಂ ಖಾಸಗೀಕರಣ ವಿರೋಧಿಸಿ ಅಧಿಕಾರಿ ಮತ್ತು ನೌಕರರ ಒಕ್ಕೂಟದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಜೂ.20–ಟಾಟಾ ಪವರ್ ಕಂಪನಿಯವರು ರಾಜ್ಯದಲ್ಲಿ ವಿದ್ಯುತ್ ವಿತರಣೆ ನಿರ್ವಹಿಸಲು ಕೆಪಿಇಆರ್‌ಸಿಗೆ ಸಲ್ಲಿಸಿರುವ ಅರ್ಜಿಯನ್ನು ವಿರೋಧಿಸಿ ಚೆಸ್ಕಾಂ ಅಧಿಕಾರಿ ಮತ್ತು ನೌಕರರ ಒಕ್ಕೂಟದ ವತಿಯಿಂದ ಪ್ರತಿಭಟನೆ ನಡೆಸಿದರು.

ನಗರದ ಉಪ ವಿಭಾಗದ ಚೆಸ್ಕಾಂ ಕಚೇರಿ ಮುಂಭಾಗದಲ್ಲಿ ಜಮಾಯಿಸಿದ ಅಧಿಕಾರಿಗಳು, ನೌಕರರು ವಿದ್ಯುತ್ ಕ್ಷೇತ್ರದಲ್ಲಿ ಖಾಸಗೀಕರಣ ಬೇಡ, ಕಾರ್ಮಿಕರ ಒಗ್ಗಟ್ಟು ಚಿರಾಯುವಾಗಲಿ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನೌಕರರ ಸಂಘದ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿ, ವಿದ್ಯುತ್ ಖಾಸಗೀಕರಣದಿಂದ ರೈತರು, ಗ್ರಾಹಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಜಾಗೃತಿ ಮೂಡಿಸಲು ಒಕ್ಕೂಟದ ವತಿಯಿಂದ ಎಲ್ಲ ಕಡೆ ದ್ವಾರಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಈಗಾಗಲೇ ಇಡೀ ರಾಜ್ಯಾದ್ಯಂತ ಸಂಘ ಸಂಸ್ಥೆಗಳ ಒಕ್ಕೂಟದ ವತಿಯಿಂದ ಶಾಸಕರು, ಸಂಸದರಿಗೆ ಮನವಿ ಸಲ್ಲಿಸಲಾಗಿದೆ. ವಿದ್ಯುತ್ ಖಾಸಗೀಕರಣದಿಂದಾಗುವ ದುಷ್ಪರಿಣಾಮದ ಬಗ್ಗೆ ಮನವರಿಕೆ ಮಾಡಲಾಗಿದ್ದು, ಯಾವುದೇ ಕಾರಣಕ್ಕೂ ಸರ್ಕಾರ ಟಾಟಾ ಪವರ್ ಕಂಪನಿಯವರಿಗೆ ಕರ್ನಾಟಕದಲ್ಲಿ ವಿದ್ಯುತ್ ವಿತರಣೆ ನಿರ್ವಹಿಸಲು ಅನುಮತಿ ನೀಡಬಾರದು ಎಂದು ಮನವಿ ಮಾಡಿಕೊಳ್ಳಲಾಗಿದೆ ರಾಜ್ಯದ ಎಲ್ಲ ಒಕ್ಕೂಟಗಳ ವತಿಯಿಂದ ವಿದ್ಯುತ್ ಖಾಸಗೀಕರಣ ಮಾಡಬಾರದು ಎಂದು ಆಕ್ಷೇಪಣೆ ಸಲ್ಲಿಸಲಾಗಿದೆ ಎಂದರು.

ಪ್ರತಿಭಟನೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರದೀಪ್, ಎಇಇ ಗಳಾದ ಮಹೇಶ್, ದ್ರುಪದ್, ಪ್ರಶಾಂತ್, ಸಿದ್ದಲಿಂಗಪ್ಪ, ಪಿಡಿ ಸಂಧ್ಯಾ, ಪಿ.ಸಿದ್ದರಾಜು, ಲೆಕ್ಕಾಧಿಕಾರಿ ಸ್ವಾಮಿ ಪ್ರಸಾದ್, ನೌಕರರ ಸಂಘದ ಅಧ್ಯಕ್ಷ ಮುರಳಿ ಕೃಷ್ಣಸ್ವಾಮಿ, ಕಾರ್ಯದರ್ಶಿ ಸಿದ್ದರಾಜಪ್ಪ ಎಸ್‌ಸಿ, ಎಸ್‌ಟಿ ಕಲ್ಯಾಣ ಸಂಸ್ಥೆ ಕೇಂದ್ರ ಸಮಿತಿ ಸದಸ್ಯ ಮಂಜುನಾಥ್, ಅಧ್ಯಕ್ಷ ಪ್ರಶಾಂತ್, ಕಾರ್ಯದರ್ಶಿ ಸೋಮೇಶ್ವರ, ಪ್ರಾಥಮಿಕ ಸಮಿತಿಗಳ ಶರಣಬಸಪ್ಪ, ಪ್ರಕಾಶ್, ಮಹಾದೇವಸ್ವಾಮಿ, ಚೆನ್ನಂಜಕುಮಾರ್, ಮರಿಸ್ವಾಮಿ, ಸತೀಶ್, ಎಲ್ಲ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ನೌಕರರ ಬಾಂಧವರು ಭಾಗ ವಹಿಸಿದ್ದರು.

ವೈದ್ಯಕೀಯ ಜ್ಞಾನದ ಜೊತೆಗೆ ನಿಸ್ವಾರ್ಥ ಸೇವಾ ಮನೋಭಾವ ಬೆಳೆಸಿಕೊಳ್ಳಿ



ಚಾಮರಾಜನಗರ: ವೈದ್ಯಕೀಯ ವೃತ್ತಿ ಅತ್ಯಂತ ಶ್ರೇಷ್ಠ ವೃತ್ತಿಯಾಗಿದ್ದು, ಎಂಬಿಬಿಎಸ್ ಪೂರ್ಣಗೊಳಿಸಿ ಭಾವಿ ವೈದ್ಯರಾಗಿ ಹೊರಹೊಮ್ಮಿರುವ ನೀವೆಲ್ಲರೂ ವೈದ್ಯಕೀಯ ಜ್ಞಾನದ ಜೊತೆಗೆ ನಿಸ್ವಾರ್ಥ ಸೇವಾ ಮನೋಭಾವ ಬೆಳೆಸಿಕೊಳ್ಳುವಂತೆ ಸಮಾಜ ಸೇವಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯಪಡೆ ಮಾಜಿ ಅಧ್ಯಕ್ಷ ಪದ್ಮಶ್ರೀ ಡಾ. ಹೆಚ್.ಸುದರ್ಶನ್ ತಿಳಿಸಿದ್ದಾರೆ.

ನಗರದ ಸಿಮ್ಸ್ ಆವರಣದಲ್ಲಿ ನಡೆದ 5ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ವೈದ್ಯರಾಗಿ ಕೇವಲ ಆಸ್ಪತ್ರೆಗಳಿಗೆ ಸೀಮಿತ ವಾಗದೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ರಸ್ತೆ ಮೇಲೆ ಮರದ ಕೊಂಬೆ ಬಿದ್ದು ಸಂಚಾರಕ್ಕೆ ಅಡ್ಡಿ

ಚಾಮರಾಜನಗರ, ಜೂ.20–ನಗರದಲ್ಲಿ ಶುಕ್ರವಾರ ಸಂಜೆ ಸುರಿದ ಭರ್ಜರಿ ಮಳೆಯಿಂದಾಗಿ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ಮರದ ಕೊಂಬೆ ಮುರಿದು ಬಿದ್ದ ಪರಿಣಾಮ ಕೆಲಕಾಲ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಅಥವಾ ಗಾಯಗಳಾಗಿಲ್ಲ. ಸ್ಥಳೀಯ ನಿವಾಸಿಗಳು ಹಾಗೂ ನಗರಸಭೆ ಸಿಬ್ಬಂದಿ ರಸ್ತೆ ಮೇಲೆ ಬಿದ್ದಿದ್ದ ಮರದ ಕೊಂಬೆಯನ್ನು ತೆರವುಗೊಳಿಸಿ ಸಂಚಾರ ಸುಗಮಗೊಳಿಸಿದರು. ನಗರದಲ್ಲಿ ಕೆಲ ಸಮಯ ಭಾರೀ ಮಳೆಯಾಗಿದ್ದು, ಹಲವೆಡೆ ರಸ್ತೆಗಳ ಮೇಲೆ ನೀರು ನಿಂತು ವಾಹನ ಸವಾರರು ಮತ್ತು ಸಾರ್ವಜನಿಕರು ತೊಂದರೆ ಅನುಭವಿಸಿದರು.

ಇಂದು ಯೋಗ ದಿನಾಚರಣೆ

ಚಾಮರಾಜನಗರ: ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷ ವಾಕ್ಯದೊಂದಿಗೆ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಜೂ.21ರ ಬೆಳಿಗ್ಗೆ 6 ರಿಂದ 9 ರವರೆಗೆ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 7ರಿಂದ 7.45ರವರೆಗೆ ಸಾಮೂಹಿಕ ಯೋಗ ಪ್ರದರ್ಶನ ನಡೆಯಲಿದೆ. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ಘನ ಉಪಸ್ಥಿತಿ ವಹಿಸುವರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಹೆಚ್.ವಿ.ಚಂದ್ರು, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಡಿಸಿ ಶ್ರೀರೂಪ, ಜಿಪಂ ಸಿಇಓ ಮೋನಾರೋತ್, ಎಸ್‌ಪಿ ಎಂ. ಮುತ್ತುರಾಜ್‌ಪಾಲ್ಗೊಳ್ಳುವರು.

ವಾರದ ಮಿತ್ರ

ಮೈಸೂರು ಮಿತ್ರ

ಭಾನುವಾರ 21-06-2026

ಪುಟ 9

ಸಾಪ್ತಾಹಿಕ ಪುರವಣಿ



'ಆರೋಗ್ಯಕರ ವೃದ್ಧಾಪ್ಯಕ್ಕೆ ಯೋಗ'

ಇಂದು ವಿಶ್ವ ಯೋಗ ದಿನ





ಡಾ॥ ಸುಧಾ .ಎಂ.ಎನ್
ಆಯುರ್ವೇದ ಮತ್ತು ಯೋಗ ತಜ್ಞರು
ಮೊ.: 9448071933.

ಆರೋಗ್ಯಕರ ವೃದ್ಧಾಪ್ಯಕ್ಕೆ ಯೋಗದ ಕೊಡುಗೆ ಏನೆಂಬುದರ ಬಗ್ಗೆ ಹಲವಾರು ವೈಜ್ಞಾನಿಕ ಸಂಶೋಧನೆಗಳು ಜಗತ್ತಿನ ಗಮನಸೆಳೆಯುತ್ತಿರುವ ಸಮಯದಲ್ಲಿಯೇ ಈ ಬಾರಿಯ ವಿಶ್ವ ಯೋಗ ದಿನದ ಘೋಷಣಾ ವಾಕ್ಯವೂ ಆಗಿರುವುದು ಸಾಂದರ್ಭಿಕವಾಗಿದೆ! ಯೋಗಾಭ್ಯಾಸವು ಮಾನವನ ಆರೋಗ್ಯಕ್ಕೆ ನೀಡುವ ಉಪಯೋಗಗಳ ಬಗ್ಗೆ ಇಂದು ಜನಸಾಮಾನ್ಯರಾದಿಯಾಗಿ ದೇಶ-ವಿದೇಶಗಳಲ್ಲಿ ಪ್ರಚಲಿತದಲ್ಲಿರುವ ವಿಷಯವಾಗಿದ್ದರೂ ಈ ಬಾರಿಯ ಘೋಷಣಾ ವಾಕ್ಯದಂತೆ (Yoga for healthy ageing) ಯೋಗಾಭ್ಯಾಸವು ಹೇಗೆ ಜೀವಕೋಶ ವಯಸ್ಸಾಗುವಿಕೆ, ಚಲನಶೀಲತೆ, ಸಮತೋಲನ, ಮಾನಸಿಕ ಆರೋಗ್ಯ ಮತ್ತು ಮರೆಗುಳಿತನ ಮುಂತಾದವನ್ನು ತಡೆಗಟ್ಟುವಲ್ಲಿ ಸಕಾರಾತ್ಮಕ ಪರಿಣಾಮವನ್ನು ಬೀರುತ್ತವೆ ಎಂದು ಹತ್ತು ಹಲವಾರು ಅಧ್ಯಯನಗಳಿಂದ ಸಾಬೀತಾಗಿದೆ.

ಪ್ರಪಂಚದ ಅತ್ಯಂತ ಪ್ರಾಚೀನ ಆರೋಗ್ಯ ವ್ಯವಸ್ಥೆಗಳಲ್ಲಿ ಒಂದಾದ ಯೋಗವು ವಯೋವೃದ್ಧರಿಗೆ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕವಾಗಿಯೂ ಪ್ರಯೋಜನಕಾರಿಯಾಗಿದೆ ಎಂಬ ಸಂಶೋಧನೆಯಾಧಾರಿತ ಕಡಿಮೆ ವೆಚ್ಚದಲ್ಲಿ ಅನುಷ್ಠಾನಗೊಳಿಸುವಲ್ಲಿ ಪ್ರಯೋಜನಕಾರಿ ಎಂದೂ ಜಗತ್ತಿನ ಎಲ್ಲ ಆರೋಗ್ಯ ಕಾರ್ಯಕರ್ತರ ಗಮನ ಹರಿಸುತ್ತಿದ್ದಾರೆ. ವೃದ್ಧಾಪ್ಯ ಒಂದು ಸಾರ್ವತ್ರಿಕ ಸಾಮಾನ್ಯ ಪ್ರಕ್ರಿಯೆ ಮತ್ತು ಜಗತ್ತಿನ ಪ್ರತಿಯೊಬ್ಬ ಮನುಷ್ಯನೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಅನುಭವಿಸುವ ಒಳಗೊಳ್ಳುವ ಒಂದು ಅನಿವಾರ್ಯ ಘಟ್ಟ! ವೃದ್ಧಾಪ್ಯವು ಅನಿವಾರ್ಯ ಮತ್ತು ವಾಸ್ತವ! ಇದನ್ನು ಸಮುದಾಯ ಮತ್ತು ಸಮಾಜದಲ್ಲಿ ನಾವೆಲ್ಲರೂ ಹೇಗೆ ಎದುರಿಸುತ್ತೇವೆ ಅಥವಾ ಅನುಭವಿಸುತ್ತೇವೆ ಎಂಬುದರ ಬಗ್ಗೆಯೇ ಸರಿಯಾದ ಮನಸ್ಥಿತಿ, ತಯಾರಿ, ಈ ಜೀವನದ ಕಾಲಘಟ್ಟದಲ್ಲಿ ಎದುರಿಸುವ ಸವಾಲುಗಳು ಎಲ್ಲದರ ಬಗ್ಗೆಯೂ ಅರಿವಿಲ್ಲದಿರುವುದು ವಿಷಾದನೀಯ!

'ಕ್ಷಣಂ ಕ್ಷಣಂ ಶೀರ್ಯತೇ ಇತಿ ಶರೀರಂ' ಅಂದರೆ ಕ್ಷಣ ಕ್ಷಣಕ್ಕೂ ಕ್ಷೀಣಿಸುತ್ತ ಹೋಗುವುದೇ ಶರೀರ ಎಂದು ಆ ಕಾಲದಲ್ಲಿಯೇ ಆಯುರ್ವೇದ ಗ್ರಂಥಗಳಲ್ಲಿ ಶರೀರದ ಅರ್ಥವನ್ನು ವ್ಯಾಖ್ಯಾನಿಸಿದ್ದರು! ಹಾಗೆಯೇ ನಮ್ಮ ನಮ್ಮ ಪ್ರಾಚೀನ ಗ್ರಂಥಗಳಲ್ಲಿಯೂ 'ಜರಾ' ಅಂದರೆ ವಯಸ್ಸಾಗುವಿಕೆ ಎಂದು ವಾಯುಪುರಾಣ, ಋಗ್ವೇದ, ಯಜುರ್ವೇದ ಉತ್ತರೀಯ ಬ್ರಾಹ್ಮಣ, ಈಶಾವಾಸೋಪನಿಷತ್, ಕಠೋಪನಿಷತ್, ಚರಕ ಸಂಹಿತೆ, ಸುಶ್ರುತ ಸಂಹಿತ, ಅಷ್ಟಾಂಗ ಸಂಗ್ರಹ, ಅಷ್ಟಾಂಗ ಹೃದಯ, ಚಾಂದೋಗ್ಯ ಉಪನಿಷದ್, ಸಿದ್ಧ ವೈದ್ಯ ಪದ್ಧತಿ, ವಿವಿಧ ಯೋಗ ಗ್ರಂಥಗಳಲ್ಲಿಯೂ ವಿವಿಧ ಉಲ್ಲೇಖಗಳು, ಕಾಯಕಲ್ಪ ಚಿಕಿತ್ಸೆಗಳು, ಕಾಯಕಲ್ಪ ಯೋಗಗಳು, ವಾಜೀಕರಣ ಚಿಕಿತ್ಸೆಗಳು ಎಲ್ಲವುದರ ಬಗ್ಗೆ ವಿವರಗಳಿವೆ.

> "ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಈ ಬಾರಿಯ ಘೋಷಣೆಯು ವಿಶ್ವದಾದ್ಯಂತ ಬದಲಾಗುತ್ತಿರುವ ಸಮಾಜದಲ್ಲಿ ಜನಸಂಖ್ಯಾ ವಾಸ್ತವಗಳಿಗೆ ಹೊಂದಿಕೊಳ್ಳಲು ಸಕಾಲಿಕ ಸಂದೇಶವನ್ನೂ ನೀಡುತ್ತಿದೆ. ಸಕ್ರಿಯ ಜೀವನ ಶೈಲಿಯು ಕಾಯಿಲೆ ಬರದಂತೆ ತಡೆಗಟ್ಟುವುದು ಮತ್ತು ಯೋಗಕ್ಷೇಮ ನೀತಿ ಆರೋಗ್ಯಕರ ಜೀವನಕ್ಕೆ ನಾಂದಿ ಹಾಡುತ್ತವೆ. ಮತ್ತು ಉತ್ತಮ ಗುಣಮಟ್ಟದ ಜೀವನವನ್ನು ನೀಡಲು ಸುಧಾರಿಸಲು, ಪ್ರಾಯೋಗಿಕ ಮಾರ್ಗವನ್ನು ನೀಡುತ್ತದೆ. 2026ರ ಅಂತಾರಾಷ್ಟ್ರೀಯ ಯೋಗದಿನವನ್ನು ಆಚರಿಸಲು ಜಗತ್ತು ಸಿದ್ಧಗೊಂಡಿರುವಾಗ, ನಾವು ಭಾರತೀಯರು ಸ್ವಕೀಯರಾಗಿ ನಮ್ಮ ಭಾರತೀಯ ಪರಂಪರೆಯಲ್ಲಿ ಹೇಳಿದಂತಹ ಕಾಲ ಪರೀಕ್ಷಿತ ಸಂಪ್ರದಾಯವನ್ನು ಜೀವನ ಶೈಲಿಯನ್ನು, ಕೌಟುಂಬಿಕ ವ್ಯವಸ್ಥೆಯನ್ನು ಆಹಾರ ಪದ್ಧತಿಯನ್ನು ಅಳವಡಿಸಿಕೊಂಡು ಬದುಕುವತ್ತ ನಮ್ಮ ಯುವಜನತೆಗೆ, ಮಕ್ಕಳಿಗೆ ಉತ್ತೇಜಿಸಲು ಬದ್ಧರಾಗಿ ಮತ್ತೆ ಜಗತ್ತೇ ನಮ್ಮತ್ತ ನಿಬ್ಬೆರಗಾಗಿ ನೋಡುವತ್ತ ಚಿತ್ತಹರಿಸಬೇಕಾಗಿದೆ."

ಹಲವು ಪ್ರಾಚೀನ ಆಚಾರರ ಪ್ರಕಾರ ನಿಧಾನ ಎಲ್ಲ ಕ್ಷೀಣತೆ ಅಥವಾ ಕಡಿಮೆಯಾಗುವ ಲಕ್ಷಣಗಳು 41ನೇ ವರ್ಷದಿಂದಲೇ ಶುರುವಾಗುತ್ತಿದ್ದಂತೆ ಖಾಲಿತ್ಯ (ಬಿಳಿಕೂದಲು ಮತ್ತು ಬೊಕ್ಕತಲೆ), ಚರ್ಮ ನೆರಿಗಟ್ಟುವಿಕೆ, ಉಸಿರಾಟದ ಸಮಸ್ಯೆ (ಏದುಸಿರು) ಎಲ್ಲವೂ ಕಾಣಿಸಿಕೊಳ್ಳುತ್ತವೆ ಎಂದು ವಿವರಿಸುತ್ತದೆ.

ಯೋಗದ ಪ್ರಕಾರ ವಯಸ್ಸಾಗುವಿಕೆಯ ಪರಿಕಲ್ಪನೆಯ ವಿಶಿಷ್ಟವಾಗಿದೆ. ಸೋಮನ ಸ್ಥಳ (ಚಂದ್ರಸ್ಥಾನ)ದಿಂದ ಜೀವ ಮತ್ತು ಯೌವ್ವನವನ್ನು ಕಾಪಾಡುವ ಅಮೃತ ದ್ರವವು ಹೊರಹೊಮ್ಮುತ್ತದೆ. ತಾಲುಗತದ (ಅಂಗುಳ-ಗಂಟಲಿನಲ್ಲಿ) ಮೂಲಕ ಸಂಚರಿಸಿ ನಾಭಿವರೆಗೆ ಸಂಚರಿಸಿ ಹೀರಲ್ಪಡುತ್ತದೆ. ನಾಭಿ ಸೂರ್ಯಸ್ಥಳ ಎಂದೂ ಕರೆಯುತ್ತಾರೆ. ಈ ದ್ರವವನ್ನು ಸಾರ, ಅಮೃತ ಮತ್ತು ಅಮರವಾರುಣಿ ಎಂದೂ ಬಣ್ಣಿಸಲಾಗಿದೆ. ಈ ದ್ರವ ನಿರಂತರ ಕೆಳಮುಖ ಹರಿವು ಮತ್ತು ಹೀರುವಿಕೆಯ ನಾಳವು ದೇಹದ ಅವನತಿಗೆ ಕಾರಣವಾಗುತ್ತದೆ. ಈ ದ್ರವದ ವ್ಯರ್ಥವು ಮಾನವರಲ್ಲಿ ಮರಣದ ಕಾರಣವೆಂದು ಪರಿಗಣಿಸಲಾಗಿದೆ.

ಆರೋಗ್ಯಕರ ವೃದ್ಧಾಪ್ಯ ವಯಸ್ಸಿಗೆ ಯೋಗದ ಕೊಡುಗೆ- ಈ ಬಾರಿ ಯೋಗ ದಿನದ ಘೋಷಣಾ ವಾಕ್ಯವು ಮೇಲೆ ಹೇಳಿದ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಯೋಗಕ್ಷೇಮವನ್ನು ಉತ್ತೇಜಿಸುವ ಸಮಗ್ರ ಚಿಕಿತ್ಸಾ ಪದ್ಧತಿಯಾಗಿ ಜಾಗತಿಕ ಮನ್ನಣೆಯನ್ನು ಪ್ರತಿಬಿಂಬಿಸುತ್ತದೆ. ಸಾಮಾನ್ಯ ಆರೋಗ್ಯ ರಕ್ಷಣೆ, ಸಮಗ್ರ ಸ್ವಾಸ್ಥ್ಯದ ಮೂಲಾಧಾರವಾಗಿ, ಯೋಗದ ಮಹತ್ವವನ್ನು ಜಗತ್ತಿಗೇ ಸಾರುತ್ತದೆ. ಜೀವಿತಾವಧಿ ಹೆಚ್ಚುತ್ತಿರುವಂತೆ ನಾವೆಲ್ಲರೂ ಈ ವಯಸ್ಸಾಗುವ ಕಲೆಯನ್ನು ಸುಂದರ ಮತ್ತು ಆರೋಗ್ಯಕರವಾಗಿ ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ.

ಪ್ರಾಚೀನ ನಾಗರಿಕತೆಯ ಸುಂದರವಾಗಿ ನಿರೂಪಿಸಲ್ಪಟ್ಟಿರುವ ಈ ಪರಿಕಲ್ಪನೆಯನ್ನು ಅಂದಿನ ಯೋಗಿಗಳು, ಋಷಿಮುನಿಗಳು, ಜನರು ಯೋಗ ಮತ್ತು ಆಧ್ಯಾತ್ಮಿಕ ಮತ್ತು ಆರೋಗ್ಯಕರ ಮೂಲಕ ದೀರ್ಘಾಯುಷ್ಯ ಮತ್ತು ಆರೋಗ್ಯಕರ ಜೀವನವನ್ನು ಹೊಂದಿದ್ದರು. ಸಮಗ್ರ ಯೋಗದ ಅಭ್ಯಾಸವು ಜೀವಿತಾವಧಿಯನ್ನು ಮಾತ್ರವಲ್ಲದೇ ಆರೋಗ್ಯದ ಆರೋಗ್ಯಕರ ಅವಧಿಯನ್ನು ಹೆಚ್ಚಿಸುವ ಅಗತ್ಯದತ್ತ ಗಮನ ನೀಡುತ್ತದೆ. ಅಂದರೆ, ಈ ಅಭ್ಯಾಸಗಳು ದೈಹಿಕ ಯೋಗಾಸನಗಳು, ಉಸಿರಾಟದ ಪ್ರಾಣಾಯಾಮದ ಅಭ್ಯಾಸಗಳು, ಧ್ಯಾನ ಸಂಯೋಜಿತ ಅಭ್ಯಾಸಗಳು ವಯಸ್ಸಾದ ಪ್ರಕ್ರಿಯೆಯ ಉದ್ದಕ್ಕೂ ಚಲನ ಶೀಲತೆ, ಮಾನಸಿಕ ಯೋಗಕ್ಷೇಮ, ಭಾವನಾತ್ಮಕ ಸ್ಥಿತಿ ಸ್ಥಾಪಕತ್ವವನ್ನು ಕಾಪಾಡಿಕೊಳ್ಳಲು ಬುನಾದಿ ಹಾಕುತ್ತದೆ.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗದ ಮಹತ್ವವನ್ನು ಅರಿಯಲು ಜಾಗತಿಕ ಮಟ್ಟದಲ್ಲಿ ಹಲವಾರು ಸಂಶೋಧನೆಗಳು ನಡೆಯುತ್ತಿದ್ದು, ಯೋಗದ ವೈಜ್ಞಾನಿಕ ನೆಲಗಟ್ಟು ಜಗತ್ತಿನಾದ್ಯಂತ ವೈಜ್ಞಾನಿಕವಾಗಿ ವಿಸ್ತರಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆರೋಗ್ಯಕರ ವೃದ್ಧಾಪ್ಯಕ್ಕೆ ದೈಹಿಕ, ಮುಂತಾದ 99 ಮಾನಸಿಕ ಮತ್ತು ಸಾಮಾಜಿಕ ಆರೋಗ್ಯಕ್ಕಾಗಿ ಸಮತೋಲಿತವಾಗಿ ತಲೆ ತಲಾಂತರದಿಂದ ಭಾರತೀಯ ಸಾಂಪ್ರದಾಯಿಕ ಪ್ರಾಚೀನ ಪದ್ಧತಿಯಲ್ಲಿದ್ದ ತಿಳುವಳಿಕೆಯನ್ನು ಜಗತ್ತು ಇಂದು ವೈಜ್ಞಾನಿಕವಾಗಿ ಪುರಾವೆಸಹಿತ ಪುಷ್ಟಿಕರಿಸುತ್ತಿದೆ.

ಸಿಲ್ವರ್ ಎಕಾನಮಿಯಲ್ಲಿ ಅವಕಾಶಗಳು: ಅಂದರೆ, ನಾವಿಂದು ಆರೊಗ್ಯಕರ ವೃದ್ಧಾಪ್ಯಕ್ಕೆ ಒತ್ತು ಕೊಡುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಹಿರಿಯ ನಾಗರಿಕರಿಗೆ ಸಲ್ಲಿಸುವ ಸೇವೆಗಳು, ಉತ್ಪನ್ನಗಳು, ಆರೋಗ್ಯಕರ ಸೇವೆಗಳು, ಪುನರ್ವಸತಿ ನೆರವಿನ ಕ್ರಮಗಳು, ಡಿಜಿಟಲ್ ಆರೋಗ್ಯ ಹೀಗೆ ಮತ್ತಿತರ ಕ್ಷೇತ್ರಗಳಿಂದ ಬರುವ ಆರ್ಥಿಕತೆಯು ಸುಮಾರು 73,000 ಕೋಟಿ ಎಂದು ಅಂದಾಜಿಸಲಾಗಿದ್ದು, ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಾಗುವ ನಿರೀಕ್ಷೆಯಿದೆ.

45–64 ವರ್ಷದ ವ್ಯಕ್ತಿಗಳು ವಿಶ್ವದಾದ್ಯಂತ ಪ್ರಮುಖ ಗ್ರಾಹಕ ವರ್ಗವಾಗಿದ್ದು, ಅವರ ಆರೋಗ್ಯ ಕೇಂದ್ರಿತ ಕ್ರಮಗಳು ಮತ್ತು ಉತ್ಪನ್ನಗಳು ಮಾರುಕಟ್ಟೆ, ತಡೆಗಟ್ಟುವ ಆರೋಗ್ಯ ಪರಿಹಾರಗಳು ಮತ್ತು ಕ್ಷೇಮ ಆಧಾರಿತ ಜೀವನ ಶೈಲಿಗಳಿಗೆ ಬೇಡಿಕೆ ಸ್ಥಿರವಾಗಿ ಮಾರುಕಟ್ಟೆಯಲ್ಲಿ ಬೆಳೆಯುತ್ತಿದೆ. ಭಾರತ ಸರ್ಕಾರದ ಆಯುಷ್ ಸಚಿವಾಲಯವು ಯೋಗವನ್ನು ಆರೋಗ್ಯ ಕ್ಷೇಮ ಅಭ್ಯಾಸವಾಗಿ ಉತ್ತೇಜಿಸಲು ಮತ್ತು ಕಾಯಿಲೆ ಬಾರದಂತೆ ತಡೆಗಟ್ಟಲು ಆರೋಗ್ಯ ರಕ್ಷಣೆಯಲ್ಲಿ ಯೋಗದ ಪಾತ್ರದ ಮಹತ್ವವನ್ನು ಬಲಪಡಿಸಲು ಜನಸಾಮಾನ್ಯರಿಗಾಗಿ ಹಲವಾರು ಉಪಕ್ರಮಗಳನ್ನು ಕೈಗೊಳ್ಳುತ್ತಿದೆ.


ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಹೊರತಾಗಿಯೂ ದಿನನಿತ್ಯ ಯೋಗಾಭ್ಯಾಸವನ್ನು ಸರ್ವರೂ ಅಳವಡಿಸಿಕೊಳ್ಳಲು ಯೋಗ 365ಯನ್ನು ಉತ್ತೇಜಿಸುತ್ತಿದೆ. ಇದರಲ್ಲಿ ತಂತ್ರಜ್ಞಾನ ಆಧಾರಿತ ವಿವಿಧ ವೇದಿಕೆಗಳು, ಮನೆಗಳಲ್ಲಿಯೇ ಅಭ್ಯಾಸ ಮಾಡಲು ಸುಲಭ, ಸರಳ ಅಭ್ಯಾಸದ ಮಾಡ್ಯುಲ್‌ಗಳನ್ನು ಪರಿಚಯಿಸಿ ಎಲ್ಲರೂ ಯೋಗಾಭ್ಯಾಸವನ್ನು ದಿನನಿತ್ಯದ ಭಾಗವಾಗುವಂತೆ ಮಾಡುವ ನಿಟ್ಟಿನಲ್ಲಿ ಗುರಿ ಸಾಧಿಸುತ್ತಿದೆ.

ಹಾಗೆಯೇ ಯೋಗ ಸಮಾವೇಶಗಳ ಮೂಲಕ ಸಮಾಜದ ಎಲ್ಲ ಸ್ತರದ ಜನರಿಗೂ ದುರ್ಬಲ, ಸೌಲಭ್ಯ ವಂಚಿತ ವರ್ಗಗಳಿಗೂ ತಲುಪಿ ಅವರ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಕಡಿಮೆ ಖರ್ಚಿನಲ್ಲಿ ಉತ್ತೇಜಿಸಲು ನೀತಿ ರೂಪುಗೊಳಿಸುತ್ತದೆ. ಚೇರ್ ಯೋಗ, ಖುರ್ಚಿ ಯೋಗ, ಸುಲಭ ದಿನಚರಿಗಳ ಮೂಲಕ ಹಿರಿಯ ನಾಗರಿಕರನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ

ಎಸ್.ಎಲ್.ಭೈರಪ್ಪ

–ಕಾದಂಬರಿ ರಾಜ್ಯದ ಸಾರ್ವಭೌಮ

ಧೀಮಂತ, ಶ್ರೀಮಂತ ಚೇತನವನ್ನು ಅವರು ನಿಧನರಾದ ಒಂಭತ್ತು ತಿಂಗಳಲ್ಲಿ ಸ್ಮರಿಸಿಕೊಳ್ಳುವ ಒಂದು ಕಾರ್ಯಕ್ರಮವನ್ನು 'ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ' ಶ್ರೀರಂಗಪಟ್ಟಣ ಇದೇ ಭಾನುವಾರ ಸಂಜೆ 4 ಗಂಟೆಗೆ ಮೈಸೂರಿನ ಬಿ.ಎಸ್.ಎಸ್. ವಿದ್ಯೋದಯದಲ್ಲಿ ಹಮ್ಮಿಕೊಂಡಿದೆ. ಭೈರಪ್ಪನವರನ್ನು ಸ್ಮರಿಸಿಕೊಳ್ಳುವ ಭಾಷಣಕಾರರಾಗಿ ಪ್ರೊ. ಅಜಕ್ಕಳ ಗಿರೀಶ್ ಭಟ್ಟ, ವಿದ್ವಾನ್ ಗ.ನಾ.ಭಟ್ಟ, ಮುಖ್ಯ ಅತಿಥಿಗಳಾಗಿ ಹಿರಿಯ ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ.ನಾಗರಾಜ ರಾವ್, ವಿಜಯ ವಿಟ್ಠಲ ಆಡಳಿತ ಮಂಡಳಿಯ ಅಧ್ಯಕ್ಷ ಹಾಗೂ ಬಿಎಸ್‌ಎಸ್ ವಿದ್ಯೋದಯ ಸಂಸ್ಥೆಯ ಗೌರವಕಾರ್ಯದರ್ಶಿ ಆರ್. ವಾಸುದೇವ ಭಟ್ ಪಾಲ್ಗೊಳ್ಳುವರು. 'ವಿಶ್ವವಾಣಿ' ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಸಭೆಯ ಅಧ್ಯಕ್ಷತೆ ವಹಿಸುವರು.



ಜೀವನದಿಯಂತೆ ಹರಿಯುವ ಸಾಹಿತ್ಯ ಕ್ಷೇತ್ರದ ಮಹಾಪ್ರತಿಭೆಗಳಲ್ಲಿ ಕಾದಂಬರಿ ರಾಜ್ಯದ ಸಾರ್ವಭೌಮ ಡಾ॥ ಎಸ್.ಎಲ್.ಭೈರಪ್ಪ ಒಬ್ಬರು. ಅವರು ಗತಿಸಿ ಒಂಭತ್ತು ತಿಂಗಳಾಗುತ್ತಿದೆ. (24-09-2025). ಅವರು ಭೌತಿಕವಾಗಿ ನಮ್ಮೊಡನೆ ಇಲ್ಲದಿದ್ದರೂ ಅವರ ಯಶಃಕಾಯ ನಮ್ಮ ಮುಂದಿದೆ. ಇದರ ಸತ್ಯವನ್ನು ಮನಗಂಡ ಕವಿಯೊಬ್ಬ ಒಂದು ಮಾತನ್ನು ಹೇಳಿದ–

ನಾಸ್ತಿ ತೇಷಾಂ ಯಶಃಕಾಯೇ
ಜರಾಮರಣಜಂ ಭಯಮ್ ।
ಜಯಂತಿ ತೇ ಸುಕೃತಿನೋ
ಲೋಕೇ ರಸಸಿದ್ಧಾಃ ಕವೀಶ್ವರಾಃ ॥

ಕೀರ್ತಿಯೆಂಬ ಶರೀರದಲ್ಲಿ ಬದುಕುವವರಿಗೆ ಮುಪ್ಪು–ಮರಣಗಳ ಭಯವಿಲ್ಲ. ರಸವನ್ನೇ ತಮ್ಮ ಕೃತಿಗಳ ಜೀವಾಳವಾಗಿಸಿಕೊಂಡು, ಪುಣ್ಯಶಾಲಿಗಳೆನಿಸಿಕೊಂಡ ಕವೀಶ್ವರರೇ ನಿಜಕ್ಕೂ ಧನ್ಯರು. ಭೈರಪ್ಪನವರು ಈ ವರ್ಗಕ್ಕೆ ಸೇರಿದವರು.

ಕನ್ನಡ ಕಾದಂಬರಿ ಪ್ರಕಾರವನ್ನು ಅತ್ಯಂತ ಶ್ರೇಷ್ಠ ಅಭಿವ್ಯಕ್ತಿ ಮಾಧ್ಯಮವೆಂಬಂತೆ ಹುಲುಸಾಗಿ, ಸಮೃದ್ಧವಾಗಿ ಬೆಳೆಸಿದವರು ಅವರು. ತತ್ತ್ವಶಾಸ್ತ್ರವನ್ನು ಓದಿದ್ದರೂ ತಮ್ಮ ವಿಶಾಲ ಓದು ಮತ್ತು ದಟ್ಟ ಜೀವನಾನುಭವದ ಅಭಿವ್ಯಕ್ತಿಗೆ ಕಾದಂಬರಿ ಪ್ರಕಾರವನ್ನು ಕೈಗೆತ್ತಿಕೊಂಡ ಅವರು ಅದನ್ನು ಹದಗೊಳಿಸಿದ ಪರಿ ಅನನ್ಯವಾದುದು. ಅಂತಹ ಇನ್ನೊಬ್ಬರನ್ನು ಕಾಣುವುದು ಕಷ್ಟ. ಕಾದಂಬರಿಯನ್ನು ಒಂದು ಜೀವನ ದರ್ಶನದಂತೆ, ಸಾಮಾಜಿಕ, ಇತಿಹಾಸದ ದಾಖಲೆಯಂತೆ, ಮನೋಬುದ್ಧಿಗೆ ಆಹ್ಲಾದ ನೀಡುವ ಕಲಾಕೃತಿಯಂತೆ, ಅದನ್ನೊಂದು ಆಪ್ತಸ್ನೇಹಿತನಂತೆ ಬೆಳೆಸಿದ ಅವರಿಗೆ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಒಂದು ವಿಶಿಷ್ಟಸ್ಥಾನವಿದೆ.

ಇಂದು 'ಡಾ.ಎಸ್.ಎಲ್. ಭೈರಪ್ಪ ಸಂಸ್ಮರಣೆ' ಕಾರ್ಯಕ್ರಮ. ತನ್ನಿಮಿತ್ತ ಈ ಲೇಖನ.

ಭೈರಪ್ಪನವರು ಒಬ್ಬ ಚರ್ಚಾಸ್ಪದ ಲೇಖಕರು. ಅದಕ್ಕೆ ಕಾರಣ ಅವರ ಕೃತಿಗಳಲ್ಲಿರುವ ಸತ್ತ್ವ. ಅದಿಲ್ಲದಿದ್ದರೆ ಅವರು ಅಷ್ಟೊಂದು ಚರ್ಚೆಗೆ ಒಳಗಾಗುತ್ತಿರಲಿಲ್ಲ. ಅಂತಹ ಸತ್ತ್ವವೇ ಚರ್ಚೆಗಳಿಗೆ ಎಡೆಮಾಡಿಕೊಟ್ಟವು. ಅವರು ಅವರ ಸಮಕಾಲೀನ ವಿಮರ್ಶಕ ಲೇಖಕರಿಂದ ಅವಜ್ಞೆಗೆ ಒಳಗಾದರು. ಅದೊಂದು ವರ್ಗ ಅವರನ್ನು ದ್ವೇಷಿಸತೊಡಗಿತು. ಅದಕ್ಕೊಂದು ಬಲವಾದ ಕಾರಣವಿದೆ. ತಾವು 'ನವ್ಯ'ರು, ತಮ್ಮಿಂದಲೇ ಸಾಹಿತ್ಯ ಉದ್ಧಾರವಾಗುತ್ತಿದೆ ಎಂದು ಭಾವಿಸಿ, ಗುಂಪು ಕಟ್ಟಿಕೊಂಡು ಮೆರೆಯುತ್ತಿದ್ದ ಒಂದು ವಿಷವರ್ತುಲದವರ ಕಾಲದಲ್ಲಿಯೇ ಅವರು ಬರೆಯಲು ಪ್ರಾರಂಭಿಸಿದ್ದು ಅದಕ್ಕೆ ಕಾರಣ.

ಭೈರಪ್ಪನವರು ಆ ಗುಂಪಿನಿಂದ ಹೊರಗೇ ಉಳಿದು, ನವ್ಯ ಮಾರ್ಗದಿಂದಲೂ ದೂರವೇ ಸರಿದು, ಅವರಿಗೆ ಸ್ಪರ್ಧಿಯಾಗಿ ಒಂಟಿ ಸಲಗದಂತೆ ಮುಂದುವರಿದರು. ಅವರು ಬೆಳೆಯುವ ಪರಿಯನ್ನು ಕಂಡು ಆ ಗುಂಪಿನವರು ಹೊಟ್ಟೆಯುರಿಯಿಂದ ತತ್ತರಿಸಿದರು. ಭೈರಪ್ಪನವರ ವಿದ್ವತ್ತು ಮತ್ತು ಜನಪ್ರಿಯತೆಯ ಮುಂದೆ ತಾವೆಲ್ಲಿ ಮಂಕಾಗಿ ಬಿಡುತ್ತೇವೋ ಎಂದು ಅಂಜಿ ಭೈರಪ್ಪನವರ ಬಗ್ಗೆ ಇಲ್ಲಸಲ್ಲದ ಆಪಾದನೆ ಹೊರಿಸಲು ಶುರು ಮಾಡಿದರು. ವಿಮರ್ಶೆಯ ಪರಿಭಾಷೆಯಲ್ಲಿ ಅವರ ಕೃತಿಗಳನ್ನು ನಿಂದಿಸತೊಡಗಿದರು.

"ಯಾರಿಗೋ ಹೊಲಿಸಿದ ಅಂಗಿಯನ್ನು ಇನ್ಯಾರಿಗೋ ತೊಡಿಸಿ ಅವನ ಶರೀರವೇ ಸರಿಯಿಲ್ಲ ಎಂದು ಹೇಳುವ ವಿಮರ್ಶಕರಿವರು" ಎಂದು ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ಅಂತಹವರ ಕುರಿತು ಹೇಳಿದ್ದು ಸರಿಯಾಗಿಯೇ ಇದೆ. ಅಂದಿನ ಸಾಹಿತ್ಯಕ ವಲಯದಲ್ಲಿ ಅಂತಹ ಒಂದು ಕಹಿ ವಾತಾವರಣ ಸೃಷ್ಟಿಯಾಗಿತ್ತು. ಅಂತಹವರ ಮಧ್ಯೆಯೇ ಭೈರಪ್ಪ ಒಂಟಿಯಾಗಿ ಅವರಿಗೆ ಪಂಥಾಹ್ವಾನ ನೀಡುವ ರೀತಿಯಲ್ಲಿ ಬೆಳೆದರು. ಅವರನ್ನು ಉಪೇಕ್ಷಿಸಿ, ನಿರ್ಲಿಪ್ತಿಯಿಂದ ತಮ್ಮ ಬರಹದಲ್ಲಿ ಪ್ರವೃತ್ತರಾದರು.

ಇಲ್ಲಿ 'ಸೃಜನಶೀಲ ಲೇಖಕನು' ಮತ್ತು 'ಅವನ ಸೃಜನಶೀಲ ಕೃತಿಗಳೇ ಆ ಜಾತಿಯ ಟೀಕೆಗಳಿಗೆ ಉತ್ತರವಾಗಬೇಕು' ಎಂಬ ಮಾತು ಬಹಳ ಮುಖ್ಯ. ಭೈರಪ್ಪನವರು ಒಂದರ ಮೇಲೊಂದರಂತೆ ಕಾದಂಬರಿಗಳನ್ನು ಬರೆಯುತ್ತಾ ಬಂದರು. ಕ್ಷುಲ್ಲಕ ಸಂಗತಿಗಳಿಗೆ ಉತ್ತರ ಕೊಡುವ ಗೋಜಿಗೇ ಹೋಗಲಿಲ್ಲ ಅವರು. ಆದರೆ ಸಂದರ್ಭ ಬಂದಾಗ ಅಲ್ಲಲ್ಲಿ ಅವರನ್ನು ಝಾಡಿಸಿದ್ದಾರೆ. ಅವೆಲ್ಲ 'ನಾನೇಕೆ ಬರೆಯುತ್ತೇನೆ?', 'ಸಂದರ್ಭ: ಸಂವಾದ', 'ಚಿಂತನ–ಮಂಥನ', 'ಭಿತ್ತಿ' ಮೊದಲಾದ ಕೃತಿಗಳಲ್ಲಿ ದಾಖಲಾಗಿವೆ.

ಭೈರಪ್ಪನವರು 'ಪರ್ವ' ಕಾದಂಬರಿ ಬರೆದಾಗ ಅವರನ್ನು ಕಂಡರೆ ಆಗದೆ ಉರಿದೇಳುವವರು ಇಂಥಹದ್ದೇ ಒಂದು ಹುಯ್ಲೆಬ್ಬಿಸಿದರು. ಭೈರಪ್ಪನವರು ಮಹಾಭಾರತದ ಮೌಲ್ಯವನ್ನು ಹಾಳುಗೆಡವಿದ್ದಾರೆ, 'ವಿಗ್ರಹಭಂಜನೆ' ಮಾಡಿದ್ದಾರೆ, ಅದರ 'ಎಪಿಕ್ ಬ್ಯೂಟಿ' ಹೊರಟುಹೋಗಿದೆ, 'ಡಿಮೈಥಿಫಿಕೇಷನ್' ಮಾಡಿದ್ದಾರೆ, 'ನಮ್ಮ ಸಂಸ್ಕೃತಿಗೆ ಧಕ್ಕೆ ಬಂದಿದೆ' ಎಂದೆಲ್ಲಾ ಕೂಗೆಬ್ಬಿಸಿದರು. ವಾಸ್ತವವಾಗಿ ಅವರು ಅಂಥಾದ್ದೇನೂ ಮಾಡಿರಲಿಲ್ಲ. ಅವರು ಮಹಾಭಾರತದ ಪಾತ್ರಗಳನ್ನು ವಾಸ್ತವ ದೃಷ್ಟಿಯಿಂದ ನೋಡಿದ್ದರು. ಇದನ್ನು ಕುರಿತು ದಿ॥ ಲೀಲಾವತಿ ತೋರಣಗಟ್ಟಿಯವರು–'ಇದು ಪೌರಾಣಿಕ ಪಾತ್ರಗಳ ಆಮೂಲಾಗ್ರ ಬದಲಾವಣೆಯಲ್ಲ; ಭೈರಪ್ಪನವರು ವಿಗ್ರಹಭಂಜಕರಲ್ಲ; ವಿಗ್ರಹದ ಅಂತರಂಗವನ್ನು ತಟ್ಟಿ ಎಚ್ಚರಿಸಿ ವಿಗ್ರಹದ ಬಾಯಿಂದ ರಸ ಪ್ರವಹಿಸಿದ ಮಹಾಕಾರ್ಯ ಇಲ್ಲಿ ನಡೆದಿದೆ' ಅನ್ನುತ್ತಾರೆ.

ಯಾರು ಏನೇ ಅನ್ನಲಿ. ಅವರನ್ನು ಒಪ್ಪಲಿ; ಬಿಡಲಿ. ಭೈರಪ್ಪನವರು ಇಂದಿನ ಭಾರತೀಯ ಕಾದಂಬರಿಕಾರರಲ್ಲಿ ಅಗ್ರಮಾನ್ಯರು ಮತ್ತು ಅತ್ಯಂತ ಮಹತ್ವದವರು. ಅವರೊಬ್ಬರೇ ಲೋಕವನ್ನು 'ನೋಡಿದವರು; ಕೋಶವನ್ನು ಓದಿದವರು'. ಅವರು ತತ್ತ್ವಶಾಸ್ತ್ರವನ್ನು ಓದಿದ್ದರಿಂದಲೇ ಬರಿಯ ಸಾಹಿತ್ಯ ವಿದ್ಯಾರ್ಥಿಗಿರದ ಒಂದು ಅಧ್ಯಯನ ಬಲ ಅವರಿಗೆ ದೊರಕುವಂತಾಯಿತು. ಈ ಹಿನ್ನೆಲೆಯಲ್ಲೇ ಅವರು ಇತರ ಲೇಖಕರಿಗಿಂತ ಭಿನ್ನವಾಗಿ ಕಾಣುವುದು. ಅವರು ಸಂಪಾದಿಸಿದ ಪುಸ್ತಕಾನುಭವದ ಎದುರು ಇತರರು ಸಣ್ಣವರಾಗಿ ಹೋದರು.

ಅವರ ಸಾರ್ವಜನಿಕ ಜೀವನವೂ, ಕೌಟುಂಬಿಕ ಜೀವನವೂ ಕಡಿಮೆಯಾದುದಲ್ಲ. ಅವರು ದೊಡ್ಡದನ್ನು ರಚಿಸಿದರು; ದೊಡ್ಡದನ್ನು ಅಪೇಕ್ಷಿಸಿದರು; ದೊಡ್ಡದಾಗಿ ಬಾಳಿದರು; ದೊಡ್ಡತನವನ್ನು ಮೆರೆದರು; ಸಣ್ಣದಕ್ಕೆ ಎಂದೂ ಬಲಿಯಾಗಲಿಲ್ಲ. ಇವು ಅವರ ವ್ಯಕ್ತಿತ್ವದ ಹಿರಿಮೆ. ಅವರು ಸಾಹಿತ್ಯ ರಚನೆಯೊಂದರಿಂದಲೇ ಕೋಟ್ಯಂತರ ರೂಪಾಯಿಗಳನ್ನು ಗಳಿಸಿದರು. ಗಳಿಸಿದ ಹಣವನ್ನು ದಾನ ಮಾಡಿದರು. ಬಡಬಗ್ಗರಿಗೆ, ಅನಾಥ ಅರ್ಹ ವಿದ್ಯಾರ್ಥಿಗಳಿಗೆ, ಅನೇಕ ಸಂಘಸಂಸ್ಥೆಗಳಿಗೆ, ಅರ್ಹ ಸಾಹಿತಿಗಳಿಗೆ, ರೋಗಿಗಳಿಗೆ ಆರ್ಥಿಕ ನೆರವು ನೀಡಿದರು. ಆದರೆ ಅದನ್ನವರು ಎಲ್ಲಿಯೂ ಹೇಳಿಕೊಳ್ಳಲಿಲ್ಲ. ಅವರ ಆಪ್ತವಲಯದಲ್ಲಿರುವ ಕೆಲವೇ ಕೆಲವು ಮಂದಿಗೆ ಮಾತ್ರ ಗೊತ್ತು.



ಗ.ನಾ.ಭಟ್ಟ
ಸಂಸ್ಕೃತ ವಿದ್ವಾಂಸರು

ವಾರಭವಿಷ್ಯ

21.06.2026 ರಿಂದ 27.06.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಿಥುನ, ಚಂದ್ರ– ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಕುಜ–ವೃಷಭ, ಬುಧ–ಮಿಥುನ, ಕಟಕ, ಗುರು–ಕಟಕ, ಶುಕ್ರ–ಕಟಕ, ಶನಿ–ಮೀನ, ರಾಹು–ಸಿಂಹ ಮತ್ತು ಕೇತು–ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ಶ್ರೀ ಗುರು ಶುಭನಿಲ್ಲದ ಕಾರಣ ಸಜ್ಜನರ ವಿರೋಧ ಎದುರಿಸಬೇಕಾಗುತ್ತದೆ. ಹಾಗೂ ಶತೃತ್ವ ಉಂಟಾಗುತ್ತದೆ. ಆರೋಗ್ಯ ಸಮಸ್ಯೆ ಉಂಟಾಗಬಹುದು. ವಾರ ಮಧ್ಯೆ ಸ್ವಂತ ಬುದ್ಧಿಯ ಪ್ರಕಾರವಾಗಿ ನಡೆದು ಆರ್ಥಿಕ ಲಾಭವನ್ನು ಹೊಂದುವಿರಿ. ಹೊಸ ಕೆಲಸ ಪ್ರಾರಂಭಿಸಿ ಯಶಸ್ಸು ದೊರೆಯುವುದು. ಅಕಾಲಿಕ ಭೋಜನದಿಂದ ವಾಯು ಪ್ರಕೋಪಕ್ಕೆ ಗುರಿಯಾಗುವಿರಿ.

ಶ್ರೀ ಗಣಪತಿ ಆರಾಧನೆ. ಶುಭ ಸಂಖ್ಯೆ–3



ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಈ ವಾರ ತೀರ ಅನಿವಾರ್ಯವಲ್ಲದ ಕೆಲಸಗಳನ್ನು ಮುಂದೂಡಿ. ಗುರುಬಲದ ಕೊರತೆ ಇದ್ದಾಗ್ಯೂ ಚಂದ್ರ ಸಂಚಾರ ಶುಭವಿರುವ ಕಾರಣ ಖರ್ಚು–ಆದಾಯಗಳು ಸಮನಾಗಿ ನಡೆಯುವುದು. ನೂತನ ಗೃಹ ನಿರ್ಮಾಣಕ್ಕೆ ಸಾಲದ ಪ್ರಯತ್ನಗಳು ಮುಂದುವರೆಯುವುದು. ಗೃಹ ಕೃತ್ಯಕ್ಕೆ ಮಿತ್ರ ವರ್ಗದವರ ಸಹಾಯ ಒದಗುವುದು. ಹೋಟೆಲ್ ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಧನಲಾಭವಾಗುವುದು.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–2



ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ವಾರದ ಆರಂಭಕ್ಕೆ ಅಧಿಕಾರಿಗಳ ಅನುಗ್ರಹ. ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ವಿವಾಹ ಯೋಗ್ಯರಿಗೆ ಸದ್ವಾರ್ತೆ ಬರುವುದು. ವಾಹನ ಹೊಂದುವ ಆಶಯ ಪೂರ್ಣಗೊಳ್ಳುವುದು. ಮಹಿಳಾ ಮಣಿಯರು ತಮ್ಮ ಇಚ್ಛೆಯ ವಸ್ತು, ವಸ್ತ್ರಗಳನ್ನು ಕೊಳ್ಳುವರು ಆಭರಣ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಧಾರಾಳ ಲಾಭವಾಗುವುದು. ವಾರಾಂತ್ಯಕ್ಕೆ ಮಿತ್ರರೊಂದಿಗೆ ಮೋಜು ಕೂಟಗಳು.


ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ–8



ಕಟಕ (ಹೊ,ಹು,ಹೆ,ಡ,ಡಿ,ಡು)

ವಾರದಾರಂಭಕ್ಕೆ ನಿಮ್ಮ ರಾಶ್ಯಾಧಿಪತಿ ಚಂದ್ರನ ಶುಭ ಗೋಚಾರದ ಫಲವಾಗಿ ಲವಲವಿಕೆಯಿಂದ ಎಲ್ಲಾ ಕಾರ್ಯಗಳಲ್ಲಿ ಉತ್ಸಾಹವನ್ನು ತೋರುವಿರಿ. ವಿದ್ಯಾಭ್ಯಾಸದಲ್ಲಿ ಮನಸ್ಸು ನಿಲ್ಲುವುದು ಹಾಗೂ ಪ್ರಶಂಸೆಗೆ ಪಾತ್ರರಾಗುವಿರಿ. ವೈಯಕ್ತಿಕ ಕಾರ್ಯ ನಿಮಿತ್ತ ಪ್ರಯಾಣಗಳು ಉಂಟಾಗಬಹುದು. ಪ್ರಯಾಣದ ಪೂರ್ವ ತಯಾರಿ ಚೆನ್ನಾಗಿರಲಿ. ನ್ಯಾಯಾಲಯ ವಿಷಯದಲ್ಲಿ ಹಿನ್ನಡೆ ಉಂಟಾಗಲಿದೆ.

ಶ್ರೀ ಸಪ್ತಮಾತೃಕಾದೇವಿ ದರ್ಶನ. ಶುಭ ಸಂಖ್ಯೆ–9



ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಚಾಡಿ ಮಾತಿನಿಂದ ಚಾವಡಿ ಹಾಳಾಯಿತು ಎಂಬಂತೆ ಇತರರ ಮಾತಿಗೆ ಬೆಲೆ ಕೊಡಬೇಡಿ. ವಾರದ ಆದಿಗೆ ಮನೆ ಖರ್ಚುಗಳು ಹೆಚ್ಚಾಗುವುದು. ಕೈ ಸಾಲ ಮಾಡಬೇಕಾದ ಪರಿಸ್ಥಿತಿ ಬರಬಹುದು. ವಾರ ಮಧ್ಯೆ ವೃತ್ತಿಯಲ್ಲಿ ಬದಲಾವಣೆ ಆಗುವ ಸಂಭವ ಇರುತ್ತದೆ. ನೆರೆ ಹೊರೆಯಲ್ಲಿ ಸೌಹಾರ್ದತೆ ಕಾಯ್ದುಕೊಳ್ಳಿ. ನಿಮ್ಮ ಸಮಾಜಮುಖಿ ಕೆಲಸಗಳಿಗೆ ಜನ ಮನ್ನಣೆ ದೊರೆಯುವುದು. ರಾತ್ರಿ ಪ್ರಯಾಣಗಳು ಖಂಡಿತ ಬೇಡಿ.


ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–1



ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ನಿಮ್ಮ ಬಹುದಿನದ ಬಯಕೆಯೊಂದು ಈ ವಾರ ಈಡೇರಲಿದೆ. ಪರೋಪಕಾರಿಗಳೆನಿಸಿ ಜನ ಮನ್ನಣೆಯನ್ನು ಪಡೆಯಲಿದ್ದೀರಿ. ನಿಮ್ಮ ಮಹತ್ವದ ಕೆಲಸ ಕಾರ್ಯಗಳಿಗೆ ಆಪ್ತ ಬಂಧು–ಬಳಗದವರ ಸಹಕಾರ ದೊರೆಯಲಿದೆ. ಆಪ್ತ ವೃಂದದಲ್ಲಿ ಸೌಹಾರ್ದತೆ ವೃದ್ಧಿಸುವುದು. ವಿದ್ಯಾರ್ಥಿಗಳಿಗೆ ಉನ್ನತ ಅಧ್ಯಯನದಿಂದ ಕೀರ್ತಿ. ಕೂಡಿಟ್ಟ ಹಣ ಸದ್ವಿನಿಯೋಗ ಆಗುವುದು. ವಾರಾಂತ್ಯಕ್ಕೆ ಸಂಸಾರ ಸಮೇತ ಪುಣ್ಯಕ್ಷೇತ್ರ ದರ್ಶನ.


ಶ್ರೀ ರಾಮನಾಮ ಜಪ. ಶುಭ ಸಂಖ್ಯೆ–8



ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ದೀರ್ಘ ಕಾಲಿಕ ಯೋಜನೆಗಳನ್ನು ರೂಪಿಸಿಕೊಳ್ಳಲು ಇದು ಸಕಾಲವಾಗಿದೆ. ಇದು ನಿಮ್ಮ ಭವಿಷ್ಯದ ಭದ್ರತೆಗೂ ಅಗತ್ಯವಾಗಿದೆ. ಉದ್ಯೋಗ ಸಂಬಂಧಿ ಪ್ರಯಾಣಗಳು ಲಾಭದಾಯಕವಾಗಿ ಪರಿಣಮಿಸಲಿದೆ. ಆರಂಭಿಸಿದ ಕೆಲಸ ಕಾರ್ಯಗಳು ಗುರಿ ಮುಟ್ಟಲು ನಿಮ್ಮ ಹಿತೈಷಿಗಳ ಸಹಕಾರ ದೊರಕುವುದು. ಒಂದು ವೇಳೆ ಸಾಲ ಮಾಡಿದರೂ ಸದ್ವಿನಿಯೋಗವಾಗಲಿ. ನಿಮ್ಮ ಶ್ರೀಮತಿಗೆ ಬೇಸರವಾಗದಂತೆ ನಡೆದುಕೊಳ್ಳಿ.

ಶ್ರೀ ದೇವಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–8



ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಈ ವಾರ ವಿವಿಧ ಸತ್ಕಾರ್ಯಗಳಲ್ಲಿ ತೊಡಗಿಸಿಕೊಂಡು ಎಲ್ಲರ ಮೆಚ್ಚುಗೆಗೆ ಪಾತ್ರವಾಗಲಿದ್ದೀರಿ. ವೈದ್ಯರಿಗೆ, ನ್ಯಾಯವಾದಿಗಳಿಗೆ ಉತ್ತಮ ಆದಾಯದ ವಾರ. ಕಾರ್ಮಿಕ ವರ್ಗದವರಿಗೆ ಸರ್ಕಾರದಿಂದ ಆರ್ಥಿಕ ಸಹಾಯ ದೊರಕುವುದು. ವಿದ್ಯಾ ಸಂಸ್ಥೆ ಹಾಗೂ ಟ್ಯುಟೋರಿಯಲ್ಸ್ ನಡೆಸುವವರಿಗೆ ಕೈ ತುಂಬಾ ಕೆಲಸ ಹಾಗೂ ಸಂಪಾದನೆ ಆಗುವುದು. ಸಂಶೋಧಕರಿಗೆ ನೂತನ ಆವಿಷ್ಕಾರಗಳಿಂದ ಕೀರ್ತಿ ಪ್ರಾಪ್ತಿ

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–4



ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ದುರ್ಜನರ ಸಹವಾಸದಿಂದ ಸಜ್ಜನ ಕೆಡುವನು ಎಂಬ ಗಾದೆ ಮಾತಿದೆ. ನಿಮ್ಮ ಒಡನಾಟಗಳು ಚೆನ್ನಾಗಿರಲಿ. ಆದಾಯ ಮೀರಿದ ಖರ್ಚುಗಳಿಂದ ವಿಚಲಿತರಾಗುವಿರಿ. ಪ್ರಮುಖ ಕೆಲಸಗಳಿಗೆ ಅನುಭವಿಗಳ ಸಲಹೆ ಪಡೆಯಿರಿ. ವಾರ ಸರಿದಂತೆ ಒತ್ತಡಗಳು ನಿವಾರಣೆ ಆಗಲಿವೆ. ಧನಾತ್ಮಕವಾಗಿ ಚಿಂತಿಸಿದರೆ ಸಾಧನೆಯ ಮಾರ್ಗ ತೋರುವುದು. ರಾಜಕಾರಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು.

ಶ್ರೀ ಗುರು ಸ್ತುತಿ. ಶುಭ ಸಂಖ್ಯೆ–7



ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ಶ್ರೀ ಬೃಹಸ್ಪತಿಯ ಪೂರ್ಣ ಕೃಪೆ ನಿಮ್ಮ ಮೇಲಿದೆ. ಎನ್‌ಕ್ಯಾಷ್ ಮಾಡಿಕೊಳ್ಳಲು ನಿಮ್ಮ ಸೋಮಾರಿತನ ಅಡ್ಡ ಬರುತ್ತಿದೆ. ಮನಸ್ಸಿದ್ದರೆ ಮಾರ್ಗ ಜೊತೆಗೆ ಅನುಭವಿಗಳಿಂದ ಮಾರ್ಗದರ್ಶನ ಪಡೆದಲ್ಲಿ ಎಡರು–ತೊಡರುಗಳು ಕಳೆದು ನಿಮ್ಮ ಹೊಸ ಯೋಜನೆಗಳು ಸಾಕಾರಗೊಳ್ಳುವುವು. ರಾಹು–ಕೇತುಗಳು ಅಶುಭರಿದ್ದು ಸಮಾಜಘಾತುಕ ಜನರಿಂದ ದೂರವಿರಿ. ಅನ್ಯಥಾ ಠಾಣೆ ದರ್ಶನವಾದೀತು.


ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ–5



ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಎಣ್ಣೆ ಬಂದಾಗ ಕಣ್ಣು ಮುಚ್ಚಿ ಕೂರಬೇಡಿ ಎಂಬ ಗಾದೆ ಮಾತಿನಂತೆ ನಿಮ್ಮ ಮುಂದಿರುವ ಗಹನ ಕೆಲಸಗಳನ್ನು ಪೂರೈಸಿಕೊಳ್ಳಿ. ಲೇಖಕರಿಗೆ ಸರ್ಕಾರದ ಗೌರವ. ಪುಸ್ತಕ ಪ್ರಕಾಶಕರಿಗೆ ಹಾಗೂ ಸಮೂಹ ಮಾಧ್ಯಮದವರಿಗೆ ಶುಭ ಸಮಯ. ಸರ್ಕಾರಿ ಕೆಲಸಗಳು ನಿಧಾನಗತಿಯಲ್ಲಿ ಸಾಗುವುದರಿಂದ ಬೇಸರ. ಕುಟುಂಬ ಸದಸ್ಯರಲ್ಲಿ ಸಾಮರಸ್ಯದ ಕೊರತೆಯಿಂದ ಮನಸ್ತಾಪಗಳು ಉಂಟಾಗದಂತೆ ವರ್ತಿಸಿ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–4



ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಸಾಡೇಸಾತಿ ಶನಿದೇವನ ಪ್ರಭಾವವಿದ್ದಾಗ್ಯೂ ನಿಮ್ಮ ಪರಿಶ್ರಮದ ಫಲ ದೊರೆಯುವ ಸಮಯ ಬಂದಿದೆ. ನಿಮ್ಮ ಮನೋಭಿಲಾಷೆಗಳು ಸುಲಲಿತವಾಗಿ ನಡೆಯುವುದು. ಮಾತೇ ಮುತ್ತು, ಮಾತೇ ಮೃತ್ಯು. ದುಡುಕಿ ಮಾತನಾಡದಿರಿ. ಅನ್ಯಥಾ ನಿಮ್ಮ ಕೆಲಸ ಕೆಡುವುದು. ಬೃಹತ್ ಉದ್ದಿಮೆದಾರರು ಲೆಕ್ಕ ಪತ್ರಗಳನ್ನು ಸರಿಯಾಗಿ ಇಟ್ಟುಕೊಳ್ಳಿ, ದೂರ ಪ್ರಯಾಣಗಳನ್ನು ಜಾಗರೂಕತೆಯಿಂದ ಮಾಡಿ.

ಶ್ರೀ ಶಿರಡಿಸಾಯಿ ದರ್ಶನ. ಶುಭ ಸಂಖ್ಯೆ–3

ಮೈಸೂರು ಮಿತ್ರ
ಭಾನುವಾರ 21 ಜೂನ್ 2026

ಪ್ರಸ್ತುತ ಮಳೆ ಕೊರತೆಯಿಂದ ನೀರಾವರಿ ಕ್ಷೇತ್ರಕ್ಕೆ ಸಂಕಷ್ಟ

ರೈತರ ಹಿತಾಸಕ್ತಿಯಡಿ ಕಾರ್ಯ ನಿರ್ವಹಿಸುವುದು ಅಗತ್ಯ

ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಅಭಿಪ್ರಾಯ



ಮಹಾಮಂಡಲದ ಅಧ್ಯಕ್ಷ ಮಹದೇವಪ್ಪ, ಉಪಾಧ್ಯಕ್ಷ ಬಿ.ಸಿ.ಬಸಪ್ಪ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜೂ.20– ನೀರು ಬಳಕೆದಾರರ ಸಂಘದ ಅಧ್ಯಕ್ಷ ಸ್ಥಾನ ಅತ್ಯಂತ ಜವಾಬ್ದಾರಿಯುತ ಸ್ಥಾನವಾಗಿದೆ. ಪ್ರಸ್ತುತ ಶೇ.64ರಷ್ಟು ಮಳೆ ಕೊರತೆ ಇದ್ದು, ನೀರಾವರಿ ಕ್ಷೇತ್ರದಲ್ಲಿ ಸಂಕಷ್ಟದ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂದರ್ಭ ರೈತರ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸುವುದು ಅತ್ಯಗತ್ಯ ಎಂದು ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ತಿಳಿಸಿದರು.

ಮಹಾಮಂಡಲದ ಅಧ್ಯಕ್ಷ–ಉಪಾಧ್ಯಕ್ಷರ ವಿರುದ್ಧ ತರಲಾಗಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾದ ಹಿನ್ನೆಲೆಯಲ್ಲಿ ಚೌಹಳ್ಳಿ ಮಹದೇವಪ್ಪ ಹಾಗೂ ಬಿ.ಸಿ.ಬಸಪ್ಪ ಅವರಿಗೆ ಪಟ್ಟಣದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸಭಾ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಣ್ಣಪುಟ್ಟ ರಾಜಕಾರಣ ಬದಿಗೊತ್ತಿ ರೈತರ ಪರ ಕೆಲಸ ಮಾಡಬೇಕು. ಕೆರೆಕಟ್ಟೆಗಳು ಮತ್ತು ಡ್ಯಾಂಗಳು ಸಂಪೂರ್ಣ ಖಾಲಿಯಾಗಿದೆ. ಇದನ್ನು ಅರಿತು ರೈತರ ಹಿತ ಕಾಯಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ರಾಜಕಾರಣದಲ್ಲಿ ಏಳು ಬೀಳು ಸಹಜ. ಅದನ್ನೆಲ್ಲಾ ಸರಿದೂಗಿಸಿಕೊಂಡು ಕಾರ್ಯ ನಿರ್ವಹಿಸಬೇಕು. ಮಹದೇವಪ್ಪ ಅವರು ರಾಜಕೀಯ ಹಿನ್ನೆಲೆಯ ಕುಟುಂಬದಿಂದ ಬಂದವರಾಗಿದ್ದು, ಈ ಹಿಂದೆ ಜಿಪಂ ಚುನಾವಣೆಯಲ್ಲಿ ಅತ್ಯಲ್ಪ ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಆದರೂ ಸಾರ್ವಜನಿಕ ಸೇವೆಯಿಂದ ಹಿಂದೆ ಸರಿಯದೆ ಸಿಕ್ಕಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಜನಸಾಮಾನ್ಯರೊಂದಿಗೆ ಬೆರೆತು ಕೆಲಸ ಮಾಡುವ ಸರಳ ಸಜ್ಜನಿಕೆಯ ನಾಯಕತ್ವ ಅವರದ್ದಾಗಿದೆ ಎಂದು ಹೇಳಿದರು.

ವಾಟಾಳು ಮಠದ ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸತ್ಯ ಮತ್ತು ಪ್ರಾಮಾಣಿಕತೆಗೆ ಅಂತಿಮವಾಗಿ ಜಯ ಸಿಗುತ್ತದೆ ಎಂಬುದಕ್ಕೆ ಕಬಿನಿ ಯೋಜನಾ ಮಟ್ಟದ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಲದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ವಿರುದ್ಧ ಮಂಡಿಸಲಾದ ಅವಿಶ್ವಾಸ ನಿರ್ಣಯಕ್ಕೆ ಸೋಲಾಗಿ, ಅಧ್ಯಕ್ಷರಾಗಿ ಚೌಹಳ್ಳಿ ಮಹದೇವಪ್ಪ ಹಾಗೂ ಉಪಾಧ್ಯಕ್ಷರಾಗಿ ಬಿ.ಸಿ.ಬಸಪ್ಪ ಮುಂದುವರಿದಿರುವುದೇ ಸಾಕ್ಷಿ ಎಂದರು.

ಸತ್ಯಕ್ಕೆ ಸಾವಿಲ್ಲ ಎಂಬ ನಾಣ್ಣುಡಿಯಂತೆ ಸರಳ ಸಜ್ಜನಿಕೆಯ ಮಹದೇವಪ್ಪ ಅವರಿಗೆ ಗೆಲುವು ದೊರೆತಿದೆ. ರಾಜೀನಾಮೆ ಕೇಳಿದ್ದರೆ ಅವರೇ ಗೌರವಯುತವಾಗಿ ನೀಡುತ್ತಿದ್ದರು. ಆದರೆ ಕೆಲವರು ಅವಿಶ್ವಾಸ ನಿರ್ಣಯ ತರುವ ಮೂಲಕ ಅವರಿಗೆ ಅವಮಾನ ಮಾಡುವ ಪ್ರಯತ್ನ ನಡೆಸಿದರು. ಅವರ ಷಡ್ಯಂತ್ರ ಫಲಿಸದೆ ಸತ್ಯಕ್ಕೆ ಜಯ ದೊರೆತಿದ್ದು, ಮಹದೇವಪ್ಪ ಹಾಗೂ ಬಸಪ್ಪ ಅವರು ತಮ್ಮ ಹುದ್ದೆಗಳಲ್ಲಿ ಮುಂದುವರಿದಿದ್ದಾರೆ. ಮುಂದಿನ ದಿನಗಳಲ್ಲಿ ಅವರು ಮಹಾಮಂಡಲದ ಮೂಲಕ ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಹಲವಾರ–ಮುಡುಕನಪುರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿದರು. ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ನವೀನ್, ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಎಸ್ಎಂಆರ್ ಪ್ರಕಾಶ್, ನಿವೃತ್ತ ಮುಖ್ಯೋಪಾಧ್ಯಾಯ ಪುಟ್ಟಬುದ್ಧಿ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಹೆಳವರಹುಂಡಿ ಮೂರ್ತಿ, ತೊಂಟೇಶ್, ಪೂಜಿತ್ ಮೆಡಿಕಲ್ ಕುಮಾರ್, ಓಂ ಗುರು, ಕಾರ್ ಮಲ್ಲಪ್ಪ, ಪುರಸಭೆ ಮಾಜಿ ಸದಸ್ಯ ಎಸ್.ಕೆ.ಕಿರಣ್, ಕುರುಬೂರು ಕೆ.ಎಂ.ಶಾಂತರಾಜು, ಕೆಬ್ಬೆಹುಂಡಿ ಸೋಮಶೇಖರ್, ಜೆಎಸ್ಎಸ್ ನಟರಾಜು, ಅಂಗಡಿ ನಾಗೇಶ್, ಕಿರಗಸೂರು ಮಹದೇವಸ್ವಾಮಿ, ಅಕ್ಕಿ ನಾಗಪ್ಪ, ಬಜ್ಜಿ ನಿಂಗಪ್ಪ ಸೇರಿದಂತೆ ಮತ್ತಿತರರಿದ್ದರು.

> “ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ ಅವಧಿಯಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದೇನೆ. ರಾಜೀನಾಮೆ ನೀಡಲು ಸಿದ್ಧನಿದ್ದ ಸಂದರ್ಭದಲ್ಲಿ ಕೆಲವು ಸ್ವಪಕ್ಷದ ಸದಸ್ಯರೇ ಷಡ್ಯಂತ್ರ ರೂಪಿಸಿ ನಮ್ಮ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರು. ಆದರೆ ಸದಸ್ಯರ ಬೆಂಬಲ ಹಾಗೂ ಸತ್ಯ ನಮ್ಮ ಪರವಾಗಿದ್ದರಿಂದ ಆ ಪ್ರಯತ್ನ ವಿಫಲವಾಯಿತು. ಈಗ ಮತ್ತೆ ಅಧಿಕಾರ ನಮ್ಮ ಬಳಿಯೇ ಉಳಿದಿದ್ದು, ಅಧಿಕಾರ ಇರುವವರೆಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ತಾವು ಈ ಹಿಂದೆ ಗ್ರಾಪಂ ಹಾಗೂ ಜಿಪಂ ಚುನಾವಣೆಗಳಲ್ಲಿ ಸ್ಪರ್ಧಿಸಿ ರಾಜಕೀಯ ಅನುಭವ ಪಡೆದಿದ್ದೇನೆ. ಎಪಿಎಂಸಿ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಲು ವಾಟಾಳು ಶ್ರೀಗಳ ಸಹಕಾರ ಮತ್ತು ಆಶೀರ್ವಾದ ದೊರೆತಿತ್ತು. – ಚೌಹಳ್ಳಿ ಮಹದೇವಪ್ಪ, ಸಂಘದ ಅಧ್ಯಕ್ಷ.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ



ವಿದ್ಯುತ್ ಕ್ಷೇತ್ರ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಹೆಚ್.ಡಿ.ಕೋಟೆ, ಜೂ.20– ವಿದ್ಯುತ್ ಕ್ಷೇತ್ರ ಖಾಸಗೀಕರಣ ವಿರೋಧಿಸಿ ಪಟ್ಟಣದ ಸೆಸ್ಕ್ ಉಪ ವಿಭಾಗ ಕಚೇರಿ ಎದುರು ಕೆಇಬಿ ನೌಕರರು, ಅಧಿಕಾರಿಗಳು, ವಿದ್ಯುತ್ ಗುತ್ತಿಗೆದಾರರು ಹಾಗೂ ರೈತ ಮುಖಂಡರು ಪ್ರತಿಭಟನೆ ನಡೆಸಿದರು.

ನಂತರ ಮಾತನಾಡಿದ ಪ್ರತಿಭಟನಾಕಾರರು, ವಿದ್ಯುತ್ ಕ್ಷೇತ್ರ ಖಾಸಗೀಕರಣದಿಂದ ಸಾರ್ವಜನಿಕ ಸೇವೆ ಗುಣಮಟ್ಟ ಕುಂಠಿತವಾಗುವ ಸಾಧ್ಯತೆ ಇದೆ. ಖಾಸಗೀಕರಣದಿಂದ ರೈತರು ಸೇರಿದಂತೆ ಜನಸಾಮಾನ್ಯರಿಗೆ ಹೆಚ್ಚುವರಿ ಆರ್ಥಿಕ ಹೊರೆ ಉಂಟಾಗುವ ಸಾಧ್ಯತೆ ಇರುವುದರಿಂದ ಸರ್ಕಾರ ಈ ನಿರ್ಧಾರವನ್ನು ಮರುಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ವಿದ್ಯುತ್ ಸಾರ್ವಜನಿಕರ ಮೂಲಭೂತ ಅಗತ್ಯವಾಗಿದ್ದು, ಅದನ್ನು ಖಾಸಗಿ ಸಂಸ್ಥೆಗಳ ವಶಕ್ಕೆ ನೀಡುವುದರಿಂದ ಉದ್ಯೋಗ ಭದ್ರತೆಗೆ ಧಕ್ಕೆಯಾಗುವ ಜೊತೆಗೆ ಜನಸಾಮಾನ್ಯರ ಹಿತಾಸಕ್ತಿಗೂ ಹಾನಿಯಾಗಬಹುದು. ವಿದ್ಯುತ್ ನೌಕರರು ಮತ್ತು ಅಧಿಕಾರಿಗಳು ವಿದ್ಯುತ್ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಹೆಚ್.ಡಿ.ಕೋಟೆ ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ಚಂದು ಕುಮಾರ್, ಸರಗೂರು ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ರಮೇಶ್, ಸರಗೂರು ಉಪ ವಿಭಾಗದ ಸಹಾಯಕ ಇಂಜಿನಿಯರ್ ಅಶೋಕ್, ಹೆಚ್.ಡಿ.ಕೋಟೆ ಉಪ ವಿಭಾಗದ ಸಹಾಯಕ ಇಂಜಿನಿಯರ್ ಅರುಣ್ ಕುಮಾರ್, ಅಣ್ಣೂರು ಶಾಖಾಧಿಕಾರಿ ವಾದಿರಾಜ ಕರ್ಣ, 659 ಪ್ರಾಥಮಿಕ ಸಮಿತಿ ಮಾಜಿ ಅಧ್ಯಕ್ಷ ಹಾಗೂ ಕಾರ್ಯದರ್ಶಿ ರಾಮರುದ್ರ, ಸಮಿತಿ ಅಧ್ಯಕ್ಷ ಮಹದೇವ, ಸೂಪರ್ ಮೆಕಾನಿಕ್ ನೂರುಲ್ಲಾ, ಕಂದಾಯ ಇಲಾಖೆಯ ಚೇತನ್, ಚಿಕ್ಕಸ್ವಾಮಿ, ಎಲ್.ಎಸ್.ಸುರೇಶ್, ಕುಮಾರಸ್ವಾಮಿ, ಗೋಪಿ, ಅಕ್ಷಿತ್ ಇತರರಿದ್ದರು.

ದೊಡ್ಡಮಾರಗೌಡನಹಳ್ಳಿ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ಮೈಸೂರು, ಜೂ.20– ತಾಲೂಕಿನ ದೊಡ್ಡ ಮಾರಗೌಡನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ನಂದರಾಜು, ಉಪಾಧ್ಯಕ್ಷರಾಗಿ ಬಿ.ಬಸವರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಂದರಾಜು, ಉಪಾಧ್ಯಕ್ಷ ಸ್ಥಾನಕ್ಕೆ ಬಿ.ಬಸವರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕೆ.ಸ್ವಾಮಿ ಘೋಷಿಸಿದರು.

ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಮತ್ತು ನಿರ್ದೇಶಕರನ್ನು ಜೆಡಿಎಸ್ ಮುಖಂಡ ಕೋಟೆಹುಂಡಿ ಮಹದೇವು ಸನ್ಮಾನಿಸಿದರು. ಇದೇ ವೇಳೆ ಕೋಟೆಹುಂಡಿ ಮಹದೇವು ಅವರನ್ನು ಸಂಘದ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಸನ್ಮಾನಿಸಿದರು.

ನಿರ್ದೇಶಕರಾದ ಕೆ.ಪುಟ್ಟಸ್ವಾಮಿ, ನಿಂಗರಾಜು, ನಾಗರಾಜು, ಡಿ.ಸಿ.ಕುಮಾರ್, ಪಿ.ಕರೀಗೌಡ, ಕೆಂಡಗಣ್ಣಯ್ಯ, ಸಂಘದ ಮೇಲ್ವಿಚಾರಕ ವಿ.ಕೃಷ್ಣ, ಕಾರ್ಯದರ್ಶಿ ಕೆ.ಸ್ವಾಮಿ ಸೇರಿದಂತೆ ಇತರರಿದ್ದರು.

ವ್ಯಕ್ತಿ ನಾಪತ್ತೆ

ಕಂಪಲಾಪುರ, ಜೂ.20– ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಸಂಬಂಧ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಗ್ರಾಮದ ಜನತಾ ಬಡಾವಣೆ ನಿವಾಸಿ ಬಿಳಿರಂಗನಾಯಕ(70) ನಾಪತ್ತೆಯಾದವರು. ಈತ ಜೂ.16ರಂದು ಮಧ್ಯಾಹ್ನ ಮನೆಯಿಂದ ಹೊರ ಹೋದವರು ಇದುವರೆಗೂ ಮನೆಗೆ ಆಗಮಿಸಿಲ್ಲ. ಅವರನ್ನು ಹುಡುಕಿ ಕೊಡುವಂತೆ ಪಿರಿಯಾಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಪಿರಿಯಾಪಟ್ಟಣ ಪೊಲೀಸ್ ಠಾಣೆ ದೂ: 08223–273100 ಅಥವಾ ಬಿಳಿರಂಗನಾಯಕ ಅವರ ಪುತ್ರರಾದ ರಾಜೇಂದ್ರ– 9008569300, ರೇವಣ್ಣ –9902316120 ಅವರನ್ನು ಸಂಪರ್ಕಿಸಿ.

ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಹಲವು ಸಾಮಾಜಿಕ ಕಾರ್ಯಕ್ರಮ

ಮಣಿಪಾಲ್ ಆಸ್ಪತ್ರೆ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್



ಕಾರ್ಯಕ್ರಮವನ್ನು ಮಣಿಪಾಲ್ ಆಸ್ಪತ್ರೆ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ಉದ್ಘಾಟಿಸಿದರು.

ಸರಗೂರು, ಜೂ.20– ಮೂಲ ಸೌಲಭ್ಯ ವಂಚಿತ ಹಳ್ಳಿಗಳ ಶಾಲೆಗಳಿಗೆ ಸೌಕರ್ಯ ಒದಗಿಸುವ ಮೂಲಕ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ವಾತಾವರಣ ನಿರ್ಮಿಸಲು ಹಲವು ಸಾಮಾಜಿಕ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದ್ದೇವೆ ಎಂದು ಮಣಿಪಾಲ್ ಆಸ್ಪತ್ರೆ ನಿರ್ದೇಶಕ ಬಿ.ಜೆ. ಸಂದೀಪ್ ಪಟೇಲ್ ತಿಳಿಸಿದರು.

ತಾಲೂಕಿನ ಕೆ.ಬೆಳತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಣಿಪಾಲ್ ಚಾರಿಟಬಲ್ ಟ್ರಸ್ಟ್ ವತಿಯಿಂದ 11 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಹೈಟೆಕ್ ಶೌಚಾಲಯ ಉದ್ಘಾಟನೆ, ಶಾಲೆಗೆ ಕಲಿಕೋಪಕರಣಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಅನುಗುಣವಾಗಿ ಸೇವೆ ಸಲ್ಲಿಸಲು ಸಂಸ್ಥೆ ಸ್ಥಾಪಿಸಲಾಗಿದ್ದು, ಹಳೇ ಮೈಸೂರು ಭಾಗದ ಹಲವು ಜಿಲ್ಲೆಯ ಸರ್ಕಾರಿ ಶಾಲೆಗಳ ಗ್ರಂಥಾಲಯಗಳಿಗಾಗಿ ಪುಸ್ತಕ ವಿತರಣೆ, ಎಲ್‌ಕೆಜಿ ಹಾಗೂ ಯುಕೆಜಿ ವಿದ್ಯಾರ್ಥಿಗಳಿಗೆ ಟೇಬಲ್ ಪೂರೈಕೆ, ವಿವಿಧ ಕಲಿಕೋಪಕರಣಗಳ ವಿತರಣೆ, ಕಂಪ್ಯೂಟರ್ ವಿತರಣೆ ಸೇರಿದಂತೆ ಅನೇಕ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ ಎಂದು ವಿವರಿಸಿದರು.

ಕೆ.ಬೆಳತ್ತೂರು ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಆರೋಗ್ಯಕರ ಹಾಗೂ ಸ್ವಚ್ಛ ವಾತಾವರಣ ಒದಗಿಸುವ ನಿಟ್ಟಿನಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣದ ಜೊತೆಗೆ ಅಗತ್ಯ ಕಲಿಕೋಪಕರಣಗಳನ್ನು ಒದಗಿಸಲಾಗಿದೆ. ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಬದಲಿಗೆ ನಗರ ಪ್ರದೇಶದ ಮಕ್ಕಳಂತೆ ಹಳ್ಳಿಗಳ ಮಕ್ಕಳು ಶಿಕ್ಷಣ ಪಡೆಯಬೇಕು ಎಂಬ ಆಸೆಯಿಂದ ಸರ್ಕಾರಿ ಶಾಲೆಗಳಿಗೆ ಸೌಲಭ್ಯ ನೀಡಲಾಗುತ್ತಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಮಾತನಾಡಿ, 15 ವರ್ಷಗಳ ಹಿಂದೆ ಈ ಶಾಲೆಯಲ್ಲಿ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ನಂತರ ಖಾಸಗಿ ಶಾಲೆಗಳತ್ತ ಒಲವು ಹೆಚ್ಚಾದ ಕಾರಣ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕುಸಿದಿತ್ತು. ಆದರೆ, ಇತ್ತೀಚೆಗೆ ಸರ್ಕಾರದ ಶಿಕ್ಷಣ ಸ್ನೇಹಿ ಯೋಜನೆಗಳು ಹಾಗೂ ಶಾಲೆಯಲ್ಲಿನ ಮೂಲ ಸೌಕರ್ಯಗಳ ಸುಧಾರಣೆಯಿಂದ ಮತ್ತೆ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಶಾಲೆಯಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಆರಂಭಿಸಿರುವ ಪರಿಣಾಮ ಈಗಾಗಲೇ 35ಕ್ಕೂ ಹೆಚ್ಚು ಮಕ್ಕಳು ದಾಖಲಾಗಿದ್ದಾರೆ. ಮುಂದಿನ ದಿನಗಳಲ್ಲಿ ಮತ್ತಷ್ಟು ವಿದ್ಯಾರ್ಥಿಗಳು ಸೇರ್ಪಡೆಯಾಗುವ ನಿರೀಕ್ಷೆ ಇದ್ದು, ಗುಣಮಟ್ಟದ ಶಿಕ್ಷಣದ ಮೂಲಕ ಶಾಲೆ ಮಾದರಿ ಶಿಕ್ಷಣ ಸಂಸ್ಥೆಯಾಗಿ ಬೆಳೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮಣಿಪಾಲ್ ಚಾರಿಟಬಲ್ ಟ್ರಸ್ಟ್‌ನ ಮಂಜು, ಚೇತನ, ಸಿಆರ್‌ಪಿ ಗಿರೀಶ್‌ಮೂರ್ತಿ, ಗ್ರಾಮದ ಮುಖಂಡರಾದ ಸುಂದರೇಗೌಡ, ಕುಮಾರಸ್ವಾಮಿ, ನಾಗರಾಜು, ಚಿಕ್ಕಯ್ಯ, ರಾಜೇಗೌಡ, ಎಸ್‌ಡಿಎಂಸಿ ಅಧ್ಯಕ್ಷ ನಾಗೇಂದ್ರ ಕುಮಾರ್, ಮುಖ್ಯಶಿಕ್ಷಕ ನಾಗರಾಜು, ಶಿಕ್ಷಕರಾದ ರತ್ನಪ್ಪ ಬಸವರಾಜು, ವೆಂಕಟೇಶ್, ಪ್ರದೀಪ್, ರಶ್ಮಿ, ಪೂರ್ಣಿಮಾ, ಪುಷ್ಪಮಾಲ, ಚಿಕ್ಕಕಾಳನಾಯಕ, ರುದ್ರಯ್ಯ ಇದ್ದರು.

ಒಂದನೇ ಪುಟದಿಂದ

ಯೋಗ ಪ್ರದರ್ಶನ

ಎರಡೂ ದ್ವಾರದ ಬಳಿ ಕೌಂಟರ್ ತೆರೆದು ಯೋಗಪಟುಗಳಿಗೆ ವಿತರಿಸಲಾಗುತ್ತದೆ. ಮೈಸೂರು ಪಾಲಿಕೆ ವತಿಯಿಂದ ಕುಡಿಯುವ ನೀರು ಪೂರೈಕೆ, ಸ್ವಚ್ಛತಾ ಕಾರ್ಯಕ್ರಮ ನಡೆಯಲಿದೆ. ಆರೋಗ್ಯ ಇಲಾಖೆ ವತಿಯಿಂದ ಸಿಬ್ಬಂದಿ ನಿಯೋಜಿಸಲಾಗಿದೆ. ಕಾರ್ಯ ಕ್ರಮದಲ್ಲಿ ಸಂಸದ ಯದುವೀರ್ ಒಡೆಯರ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಜಿ.ಟಿ.ದೇವೇ ಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿ.ಪಂ ಸಿಇಒ ಯುಕೇಶ್ ಕುಮಾರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಆರ್.ಶಿವರಾಜ್, ಯೋಗ ಫೆಡರೇಷನ್ ಆಫ್ ಮೈಸೂರು ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಮಹಾರಾಜ ಕಾಲೇಜು ಮೈದಾನದಲ್ಲಿ: ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲೂ ಬೃಹತ್ ಯೋಗ ಪ್ರದರ್ಶನ ಏರ್ಪಡಿಸಲಾಗಿದೆ. ಮೈಸೂರು ವಿವಿ ಸಹಯೋಗದಲ್ಲಿ ನಡೆಯುತ್ತಿರುವ ಯೋಗ ಕಾರ್ಯಕ್ರಮದಲ್ಲಿ 20ಕ್ಕೂ ಹೆಚ್ಚು ಯೋಗ ಸಂಸ್ಥೆಗಳು ಪಾಲ್ಗೊಳ್ಳಲಿವೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. 15 ಕ್ರೀಡಾಂಗಣ, 15 ಅಪಾರ್ಟ್‌ಮೆಂಟ್, ಸಂಘ–ಸಂಸ್ಥೆ, ಶಾಲಾ–ಕಾಲೇಜು ಸೇರಿದಂತೆ 120 ಸ್ಥಳದಲ್ಲಿ ಯೋಗ ಕಾರ್ಯಕ್ರಮ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಶಾಲಾ–ಕಾಲೇಜುಗಳಲ್ಲಿ ಶನಿವಾರ, ಭಾನುವಾರ ಹಾಗೂ ಸೋಮವಾರ ಮೂರು ದಿನವೂ ಯೋಗ ಕಾರ್ಯಕ್ರಮ ನಡೆಸಲಾಗುತ್ತಿದೆ. 1.20 ಲಕ್ಷ ಜನ ಯೋಗ ಮಾಡಬೇಕೆಂಬ ಪರಿಕಲ್ಪನೆ ಯೋಗ ಫೆಡರೇಷನ್ ಆಫ್ ಮೈಸೂರು ಸಂಸ್ಥೆಯದ್ದಾಗಿದ್ದು, ಜೂ.30ರವರೆಗೂ ಯೋಗ ಕಾರ್ಯಕ್ರಮ ನಡೆಸಿ, 1.20 ಲಕ್ಷ ಜನ ಯೋಗ ಮಾಡುವವರನ್ನು ದಾಖಲೆಗೆ ಕರಿಸುವ ಚಿಂತನೆ ಇದೆ ಎಂದು ಜಿಎಸ್ಎಸ್ ಸಂಸ್ಥೆ ಮುಖ್ಯಸ್ಥ ಶ್ರೀಹರಿ ತಿಳಿಸಿದ್ದಾರೆ.

ನೀಟ್ ಮರು ಪರೀಕ್ಷೆ

ಮೈಸೂರು ವಿವಿ ಸ್ಕೂಲ್ ಆಫ್ ಇಂಜಿನಿಯರಿಂಗ್, ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು, ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮಹಾರಾಣಿ ಮಹಿಳಾ ಕಲಾ ಕಾಲೇಜು, ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಒಂಟಿಕೊಪ್ಪಲು ಸರ್ಕಾರಿ ಪಿ.ಪೂರ್ವ ಕಾಲೇಜು, ಮಹಾ ರಾಣಿ ಸರ್ಕಾರಿ ಪಿ.ಪೂರ್ವ ಕಾಲೇಜು, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜು, ಮಹಾರಾಜ ಸರ್ಕಾರಿ ಪಿ.ಪೂರ್ವ ಕಾಲೇಜು, ಕುವೆಂಪುನಗರ ಸರ್ಕಾರಿ ಪಿ.ಪೂರ್ವ ಕಾಲೇಜು, ಜಾಕಿ ಕ್ವಾರ್ಟಸ್ ಬಳಿ ಇರುವ ಸರ್ಕಾರಿ ಆದರ್ಶ ವಿದ್ಯಾಲಯ, ನಜರ್‌ಬಾದ್‌ನಲ್ಲಿರುವ ವಿಭಜಿತ ಮಹಾರಾಜ ಸರ್ಕಾರಿ ಪಿ.ಪೂರ್ವ ಕಾಲೇಜು, ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯ ಹಾಗೂ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದಲ್ಲಿ ಪರೀಕ್ಷೆ ನಡೆಯಲಿದೆ. ಸರ್ಕಾರಿ ಪದವಿಪೂರ್ವ ಕಾಲೇಜು ಅನಿಕೇತನ ರಸ್ತೆ ಕುವೆಂಪುನಗರ ಮೈಸೂರು, ದೇವರಾಜ ಮಹಿಳಾ ಸರ್ಕಾರಿ ಪಿ.ಪೂರ್ವ ಕಾಲೇಜು ದೇವರಾಜ ಮೊಹಲ್ಲಾ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿದ್ದಾರ್ಥ ಲೇಔಟ್, ಡೆಮೊಸ್ಟ್ರೇಷನ್ ಸ್ಕೂಲ್ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ.

ಪ್ರಜಾ ಸೇವೆ

112.72 ಕೋಟಿ ರೂ. ವೆಚ್ಚದಲ್ಲಿ ಎಲೆಕ್ಟ್ರಿಕ್ ಬಸ್ ಘಟಕಗಳ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮುಂಬಡ್ತಿಯಲ್ಲಿ ಮೀಸಲಾತಿ ಪಾಲಿಸಲು ಹೊರಡಿಸಲಾಗಿರುವ ಸರ್ಕಾರಿ ಆದೇಶಗಳಿಗೆ ತಿದ್ದುಪಡಿ ತಂದು ಅನುಷ್ಠಾನಗೊಳಿಸಲು ಸಚಿವ ಸಂಪುಟ ಒಪ್ಪಿಗೆ ಸೂಚಿಸಿತು.

ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ 100 ಕೋಟಿ ರೂ. ವೆಚ್ಚದಲ್ಲಿ 200 ಹಾಸಿಗೆಗಳ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ನೀಡಲಾಯಿತು. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಆಸ್ಪತ್ರೆಗಳ ವಿವಿಧ ವಿಭಾಗಗಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳ ಖರೀದಿಗೆ 60 ಕೋಟಿ ರೂ. ಮಂಜೂರು ಮಾಡಲಾಯಿತು. ನವದೆಹಲಿಯಲ್ಲಿನ ಕರ್ನಾಟಕ ಭವನ–4 ಅನ್ನು 80.75 ಕೋಟಿ ರೂ. ಅಂದಾಜು ಮೊತ್ತದಲ್ಲಿ ನಿರ್ಮಿಸಲು ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿತು.

ಅಡ್ಡ ಮತದಿಂದ ಜೆಡಿಎಸ್–ಬಿಜೆಪಿ ಮೈತ್ರಿಗೆ ಧಕ್ಕೆ ಇಲ್ಲ

● ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟನೆ ● ಈ ಚುನಾವಣೆ ಮುಂದಿನ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯೂ ಅಲ್ಲ ● ಮೈತ್ರಿ ಪಕ್ಷಗಳ ನಡುವೆ ಬಿಕ್ಕಟ್ಟು ಸೃಷ್ಟಿಸಲು ಕಾಂಗ್ರೆಸ್ ಪ್ರಯತ್ನ ನಡೆಸುತ್ತಿದೆ ● ಮತ ಕೊಟ್ಟರೆ ಕಿಸೆಗೆ 50 ಕೋಟಿ; ಕ್ಷೇತ್ರಕ್ಕೆ 100 ಕೋಟಿ ಅನುದಾನ ಆಮಿಷ ● ಬೇರೆಡೆ ಅನುಕೂಲ ಇದ್ದರೆ ಹೋಗಬಹುದು ಎಂದು ನಮ್ಮ ಶಾಸಕರಿಗೆ ಹೇಳಿದ್ದೇನೆ!



ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನದಿಂದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಲ್ಲಿ ಬಿರುಕು ಉಂಟಾಗುವುದಿಲ್ಲ. ಈ ಚುನಾವಣೆ ಮುಂದಿನ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯೂ ಅಲ್ಲ ಹಾಗೂ ನಮ್ಮ ನಡುವೆ ಬಿಕ್ಕಟ್ಟು ಸೃಷ್ಟಿಸಲು ಕಾಂಗ್ರೆಸ್ ವಿಫಲ ಪ್ರಯತ್ನ ನಡೆಸುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಕೇಂದ್ರ ಸಚಿವರು, ನಾನು ನಮ್ಮ ಅಭ್ಯರ್ಥಿಯನ್ನು ನಿಲ್ಲಿಸುವುದಕ್ಕೆ ಮೊದಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ನಿತಿನ್ ನಬೀನ್, ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಹಾಗೂ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾದ ಆರ್. ಅಶೋಕ್ ಅವರೊಂದಿಗೆ ಚರ್ಚೆ ನಡೆಸಿ ಅವರೆಲ್ಲರ ಸಹಮತದಿಂದ ಅಭ್ಯರ್ಥಿಯನ್ನು ಹಾಕಲಾಯಿತು. ಹೀಗಾಗಿ ನಮ್ಮ ಮೈತ್ರಿಯಲ್ಲಿ ಬಿರುಕು ಬರುವ ಪ್ರಶ್ನೆ ಇಲ್ಲ ಎಂದರು.

ಕಳೆದ ಮೂರು ವರ್ಷಗಳಿಂದ ನಮ್ಮ ಶಾಸಕರಿಗೆ ಕ್ಷೇತ್ರಗಳಲ್ಲಿ ಸರಿಯಾಗಿ ಕೆಲಸಗಳು ಆಗಿಲ್ಲ. ಕಾರ್ಯಕರ್ತರು ಹಾಗೂ ಸಾರ್ವಜನಿಕರ ಒತ್ತಡದ ಕಾರಣಕ್ಕೆ ಜನರಿಗೆ ಮುಖ ತೋರಿಸುವುದು ಕಷ್ಟವಾಗುತ್ತಿದೆ ಎಂದು ಶಾಸಕರು ಹೇಳುತ್ತಿದ್ದಾರೆ. ಇದು ನಮ್ಮ ಪಕ್ಷದ ಶಾಸಕರ ಪರಿಸ್ಥಿತಿ ಅಷ್ಟೇ ಅಲ್ಲ, ಬಿಜೆಪಿ ಮತ್ತು ಕಾಂಗ್ರೆಸ್ ಶಾಸಕರ ಪರಿಸ್ಥಿತಿಯೂ ಇದೇ ಆಗಿದೆ. ಆ ಹಿನ್ನೆಲೆಯಲ್ಲಿ ಪರಿಷತ್ ಚುನಾವಣೆಯ ಮೇಲೆ ಸ್ವಲ್ಪ ಪರಿಣಾಮ ಬೀರಿದೆ.


ಕಾಂಗ್ರೆಸ್ ಅಭ್ಯರ್ಥಿಗೆ ಮತ ಕೊಟ್ಟರೆ ನಿಮಗೆ 50 ಕೋಟಿ ಕೊಡುತ್ತೇವೆ. ಅದರ ಜೊತೆಗೆ 100 ಕೋಟಿ ಅನುದಾನ ಕೊಡುತ್ತೇವೆ ಎಂದು ಆಮಿಷ ಒಡ್ಡಿದ್ದಾರೆ. ಆ ಆಮಿಷಗಳು ಚುನಾವಣೆಯಲ್ಲಿ ಕೆಲಸ ಮಾಡಿವೆ ಎಂದು ಕೇಂದ್ರ ಸಚಿವರು ನೇರ ಆರೋಪ ಮಾಡಿದರು.

ಕಳೆದ ಇಪ್ಪತ್ತು ವರ್ಷಗಳಿಂದ ಪಕ್ಷದ ನೇತೃತ್ವ ವಹಿಸಿ ಸಂಘಟನೆ ಮಾಡುತ್ತಿದ್ದೇನೆ. ಸುಖಾಸುಮ್ಮನೆ ಅಭ್ಯರ್ಥಿಯನ್ನು ಹಾಕಲಿಕ್ಕೆ ನಾನೇನು ಮೂರ್ಖನಲ್ಲ. ಏಕೆಂದರೆ, ನಮಗೆ ಇದ್ದಿದ್ದು ಕೇವಲ 18 ಸೀಟು. ಅದರಲ್ಲಿ ಒಬ್ಬರು ಈಗಾಗಲೇ ಕಾಲು ಹೊರಗೆ ಇಟ್ಟಿದ್ದಾರೆ. ಹೀಗಾಗಿ ನಮ್ಮಲ್ಲಿ ಉಳಿದಿದ್ದು 17 ಶಾಸಕರು ಮಾತ್ರ ಹಾಗೂ ಬಿಜೆಪಿಯ ಹೆಚ್ಚುವರಿ 6 ಮತಗಳು ಬರಬಹುದು ಎನ್ನುವುದು ನಮಗಷ್ಟೇ ಅಲ್ಲ, ಎಲ್ಲರ ನಿರೀಕ್ಷೆಯು ಆಗಿತ್ತು. ಹೀಗೆಯೇ ಎಲ್ಲಾ ಸೇರಿ ಒಟ್ಟಾರೆ ನಮ್ಮ ಅಭ್ಯರ್ಥಿಗೆ 24 ಮತಗಳು ಬರಬಹುದು ಎಂಬ ಲೆಕ್ಕಾಚಾರ ಇಟ್ಟುಕೊಂಡಿದ್ದೆವು. ಆದರೆ, ಕೆಲ ಶಾಸಕರು ಪಕ್ಷದ ಜೊತೆ ಗಟ್ಟಿಯಾಗಿ ನಿಲ್ಲಲಿಲ್ಲ. ಅನುದಾನಕ್ಕಾಗಿ ಚಂಚಲರಾಗಿದ್ದಾರೆ ಎಂದು ಸಚಿವರು ಬೇಸರ ವ್ಯಕ್ತಪಡಿಸಿದರು.

ಕೇವಲ ಈ ನೆಪ ಇಟ್ಟುಕೊಂಡು ನಮ್ಮ ನಡುವೆ ಬಿಕ್ಕಟು ಸೃಷ್ಟಿಸಬಹುದು ಎಂದು ಕಾಂಗ್ರೆಸ್ ಪಕ್ಷ ನಂಬಿದ್ದರೆ ಅವರಿಗೆ ನಿರಾಶೆ ಆಗುವುದು ಖಚಿತ. ಅವರ ಆಸೆ ಖಂಡಿತಾ ಕೈಗೂಡುವುದಿಲ್ಲ ಎಂದು ಕುಮಾರಸ್ವಾಮಿ ಅವರು ನೇರ ಮಾತುಗಳಲ್ಲಿ ಹೇಳಿದರು.

ಪರಿಷತ್ ಚುನಾವಣೆ ಮುಂದಿನ ವಿಧಾನಸಭೆಗೆ ದಿಕ್ಸೂಚಿ ಅಲ್ಲ ಎಂಬ ಮಾತನ್ನು ನಾನು ಒತ್ತಿ ಒತ್ತಿ ಹೇಳಬಯಸುತ್ತೇನೆ. ಮುಂದಿನ ಚುನಾವಣೆಯಲ್ಲಿ ಮಿತ್ರಪಕ್ಷಗಳು ಒಟ್ಟಾಗಿ ಜನರ ಮುಂದೆ ಹೋಗುತ್ತೇವೆ. ನಮ್ಮ ನಡುವೆ ಯಾವುದೇ ರೀತಿಯ ಹೊಂದಾಣಿಕೆಯ ಕೊರತೆಯಾಗಲಿ, ವಿಶ್ವಾಸದ ಕೊರತೆಯಾಗಲಿ ಇಲ್ಲ. ನಮಗೆ ಜನಾದೇಶ ಸಿಗುತ್ತದೆ. ಈ ಜನವಿರೋಧಿ ಸರ್ಕಾರವನ್ನು ತೊಲಗಿಸುತ್ತೇವೆ. ಅಡ್ಡ ಮತದಾನ ಮಾಡಿದಾಕ್ಷಣ ಪಕ್ಷ ಮುಳುಗಿ ಹೋಗುವುದಿಲ್ಲ. 2017ರಲ್ಲಿ ರಾಜ್ಯಸಭೆ ಚುನಾವಣೆ ನಡೆದಾಗ ನಮ್ಮ ಪಕ್ಷದ ಆರೇಳು ಶಾಸಕರು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿ ಆನಂತರ ಆ ಪಕ್ಷವನ್ನೇ ಸೇರಿದರು. ನಂತರ ನಡೆದ ಚುನಾವಣೆಯಲ್ಲಿ ಬಹುತೇಕ ಎಲ್ಲರೂ ಸೋತರು. ಆ ಪಕ್ಷವೂ ಸೋತು ಸುಣ್ಣವಾಯಿತು ಎಂದು ಸಚಿವರು ಹೇಳಿದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ಕೊಡುತ್ತೇನೆ: ಅಡ್ಡ ಮತದಾನ ಮಾಡಿದವರನ್ನು ಪತ್ತೆ ಹಚ್ಚಲು ಮಾಜಿ ಮಂತ್ರಿಗಳಾದ ಸಿ.ಟಿ. ರವಿ ಅವರ ನೇತೃತ್ವದಲ್ಲಿ ಬಿಜೆಪಿ ಮೂವರ ತಂಡ ರಚನೆ ಮಾಡಿದೆ. ನಾನು ದೆಹಲಿಗೆ ಹೋದಾಗ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರನ್ನು ಭೇಟಿ ಮಾಡಿ ಈ ಬಗ್ಗೆ ನನಗೆ ಇರುವ ಮಾಹಿತಿ ಎಲ್ಲವನ್ನೂ ತಿಳಿಸುತ್ತೇನೆ. ನಮ್ಮ ಶಾಸಕರು ಎಲ್ಲರೂ ಸೇರಿ ಅಂತಿಮ ನಿರ್ಣಯ ಮಾಡುವ ಜವಾಬ್ದಾರಿ ನನಗೆ ಕೊಟ್ಟಿದ್ದಾರೆ. ಇದರ ಬಗ್ಗೆ ನನಗೆ ಪೂರ್ಣ ಮಾಹಿತಿ ಇದೆ. ಇದನ್ನು ಇನ್ನೂ ಮುಂದಕ್ಕೆ ಎಳೆದುಕೊಂಡು ಹೋಗುವ ಅವಶ್ಯಕತೆ ಇಲ್ಲ. ನನ್ನ ಗುರಿ 2028. ಆ ಚುನಾವಣೆಯಲ್ಲಿ ನಮ್ಮ ಮೈತ್ರಿ ಸರ್ಕಾರ ರಾಜ್ಯದ ಚುಕ್ಕಾಣಿ ಹಿಡಿಯಬೇಕು. ರಾಜ್ಯದಲ್ಲಿ ನಿಜವಾದ ಜನಪರ, ಜನತೆಯ ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡುವಂತಹ ಸರ್ಕಾರ ಬರಬೇಕು. ಅದಕ್ಕಾಗಿ ನನ್ನ ಶ್ರಮ ಮೀಸಲು, ಅದು ಬಿಟ್ಟು ಮುಖ್ಯಮಂತ್ರಿ ಸ್ಥಾನದ ವಿಷಯ ಮುಖ್ಯವಲ್ಲ. ಮೊದಲು ಈ ಕೆಟ್ಟ ಸರ್ಕಾರ ಹೋಗಬೇಕು ಎಂದು ಅವರು ಹೇಳಿದರು.



ಬಿಜೆಪಿಯ ರಾಜ್ಯ ಘಟಕದಲ್ಲಿ ಅಮೂಲಾಗ್ರ ಬದಲಾವಣೆಗೆ ಆಗ್ರಹ



ಬೆಂಗಳೂರು, ಜೂ.20(ಕೆಎಂಶಿ)–ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿರುವ ಬೆನ್ನಲ್ಲೇ ಪಕ್ಷದ ವರಿಷ್ಠರು ಎಚ್ಚೆತ್ತುಕೊಂಡು ರಾಜ್ಯ ಘಟಕದಲ್ಲಿ ಭಾರೀ ಬದಲಾವಣೆ ಮಾಡಬೇಕು ಎಂದು ಮಾಜಿ ಶಾಸಕ ಕುಮಾರ್ ಬಂಗಾರಪ್ಪ ಆಗ್ರಹಿಸಿ ದ್ದಾರೆ. ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಹಲವರನ್ನು ಕೂಡಲೇ ಬದಲಾಯಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಸಂಬಂಧ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಪಕ್ಷದಲ್ಲಿನ ಕೆಲವರ ಸಂಚಿಗೆ ಬಲಿಯಾಗಿ ಉಚ್ಚಾಟನೆಗೊಂಡ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆದೇಶ ವಾಪಸ್ ಪಡೆದು ಪಕ್ಷಕ್ಕೆ ಮರುಸೇರ್ಪಡೆ ಮಾಡಿಕೊಳ್ಳುವ ಜೊತೆಗೆ ಮುಂಬರುವ ವಿಧಾನಸಭಾ ಚುನಾವಣೆ ದೃಷ್ಟಿಯಿಂದ ಅವರನ್ನೇ ಪ್ರತಿಪಕ್ಷದ ನಾಯಕರನ್ನಾಗಿ ಮಾಡಿ ಎಂದಿದ್ದಾರೆ. ರಾಜ್ಯ ಘಟಕ ಸೂಕ್ತ ನಾಯಕತ್ವ ಮತ್ತು ಮಾರ್ಗದರ್ಶನ ಇಲ್ಲದೆ ಕಾರ್ಯಕರ್ತರು ನಿರಾಶರಾಗಿದ್ದು, ವರಿಷ್ಠರು ಇದನ್ನು ಗಂಭೀರವಾಗಿ ಪರಿಗಣಿಸಿ, ದೇಶದ ಇತರೆ ರಾಜ್ಯಗಳಲ್ಲಿ ಮಾಡಿದಂತೆ ಕರ್ನಾಟಕದಲ್ಲೂ ಸಂಘಟನಾತ್ಮಕವಾಗಿ ಆಮೂಲಾಗ್ರ ಬದಲಾವಣೆ ತರಬೇಕು. ಬಿಜೆಪಿ ಶಾಸಕರ ಅಡ್ಡ ಮತದಾನ ಎಚ್ಚರಿಕೆ ಗಂಟೆಯಾಗಿದೆ. 2028ರ ವಿಧಾನಸಭಾ ಚುನಾವಣೆ ದೃಷ್ಟಿಯಿಂದ ಪಕ್ಷ ಸಂಘಟನೆಗೆ ಸಕಾಲವಾಗಿದೆ.

ಇಂದು ನೀಟ್ ಮರುಪರೀಕ್ಷೆ

ನವದೆಹಲಿ, ಜೂ.20: ಜೂನ್ 21 ನಡೆಯಲಿರುವ ನೀಟ್–ಯುಜಿ ಮರುಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೊಳಿಸಿದೆ. ಪರೀಕ್ಷಾ ಕೇಂದ್ರದಲ್ಲಿ ಯಾವುದೇ ರೀತಿಯ ಅಕ್ರಮ ಅಥವಾ ಗೊಂದಲಗಳಿಗೆ ಅವಕಾಶ ನೀಡದಂತೆ ಡ್ರೆಸ್ ಕೋಡ್ ಹಾಗೂ ಕೊಂಡೊಯ್ಯಬೇಕಾದ ವಸ್ತುಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ನಿಯಮ ಉಲ್ಲಂಘಿಸುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದೊಳಗೆ ಪ್ರವೇಶ ನಿಷೇಧಿಸಲಾಗುವುದು.

ಪರೀಕ್ಷಾ ಕೇಂದ್ರಕ್ಕೆ ಏನು ತರಬೇಕು: ಎನ್‌ಟಿಎ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿದ ಅಡ್ಮಿಟ್ ಕಾರ್ಡ್‌ನ ಸ್ಪಷ್ಟ ಪ್ರಿಂಟ್‌ಔಟ್ (ಅದರಲ್ಲಿ ಪಾಸ್‌ಪೋರ್ಟ್ ಅಳತೆಯ ಫೋಟೋ ಅಂಟಿಸಿರಬೇಕು ಮತ್ತು ಪೋಷಕರ ಸಹಿ ಇರಬೇಕು). ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ವೋಟರ್ ಐಡಿ, ಅಥವಾ ಪಾಸ್‌ಪೋರ್ಟ್‌ನಂತಹ ಸರ್ಕಾರದ ಅಧಿಕೃತ ಅಸಲಿ ಗುರುತಿನ ಚೀಟಿ ತೆಗೆದುಕೊಂಡು ಹೋಗಬೇಕು.ಅಟೆಂಡೆನ್ಸ್ ಶೀಟ್‌ನಲ್ಲಿ ಅಂಟಿಸಲು ಎಕ್ಸ್ಟ್ರಾ ಪಾಸ್‌ಪೋರ್ಟ್ ಅಳತೆಯ ಫೋಟೋಗಳನ್ನು ತರಬೇಕು. ಪರೀಕ್ಷೆ ಬರೆಯುವಾಗ ನೀರು ಕುಡಿಯುವುದಿದ್ದರೆ ಕೇವಲ ಪಾರದರ್ಶಕವಾದ ನೀರಿನ ಬಾಟಲಿಯನ್ನು ಮಾತ್ರ ಒಳಗೆ ಕೊಂಡೊಯ್ಯಬಹುದು.

ಪರೀಕ್ಷಾ ಕೇಂದ್ರಕ್ಕೆ ಏನನ್ನು ತರಬಾರದು: ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳು: ಮೊಬೈಲ್ ಫೋನ್‌ಗಳು, ಬ್ಲೂಟೂತ್ ಸಾಧನಗಳು, ಸ್ಮಾರ್ಟ್ ವಾಚ್‌ಗಳು, ಇಯರ್‌ಫೋನ್‌ಗಳು, ಪೇಜರ್ ಅಥವಾ ಯಾವುದೇ ರೀತಿಯ ಹೆಲ್ತ್ ಬ್ಯಾಂಡ್‌ಗಳು. ಯಾವುದೇ ರೀತಿಯ ಜ್ಯಾಮಿತ್ರಿ ಬಾಕ್ಸ್, ಪ್ಲಾಸ್ಟಿಕ್ ಪೌಚ್, ಲಾಗ್ ಟೇಬಲ್, ರೈಟಿಂಗ್ ಪ್ಯಾಡ್, ಯಾವುದೇ ಕಾಗದದ ತುಣುಕುಗಳು ಅಥವಾ ಕೈಬರಹದ ಚೀಟಿಗಳನ್ನು ತರುವಂತಿಲ್ಲ. ಪರೀಕ್ಷೆಗೆ ಅಗತ್ಯವಿರುವ ಪೆನ್ನನ್ನು ಎನ್‌ಟಿಎ ವತಿಯಿಂದ ಪರೀಕ್ಷಾ ಕೇಂದ್ರದಲ್ಲೇ ನೀಡಲಾಗುತ್ತದೆ. ಪರ್ಸ್, ಸನ್ ಗ್ಲಾಸಸ್, ಹ್ಯಾಂಡ್‌ಬ್ಯಾಗ್‌ಗಳು, ಬೆಲ್ಟ್‌ಗಳು ಅಥವಾ ಕ್ಯಾಪ್‌ಗಳನ್ನು ತರುವಂತಿಲ್ಲ. ಅಲ್ಲದೇ ಯಾವುದೇ ರೀತಿಯ ಚಿನ್ನ, ಬೆಳ್ಳಿ, ವಜ್ರದ ಆಭರಣಗಳು, ಉಂಗುರ, ಕಿವಿಯೋಲೆ, ಮೂಗುತಿ ಅಥವಾ ಸರಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ.

ಡ್ರೆಸ್ ಕೋಡ್ ನಿಯಮಗಳು: ನೀಟ್ ಪರೀಕ್ಷೆ ಬರೆಯುವ ಅಭ್ಯರ್ಥಿಗಳು ತಿಳಿ ಬಣ್ಣದ, ಅರ್ಧ ತೋಳಿನ ಬಟ್ಟೆಗಳನ್ನು ಮಾತ್ರ ಧರಿಸಬೇಕು. ಉದ್ದನೆಯ ತೋಳಿನ ಬಟ್ಟೆಗಳಿಗೆ ಅನುಮತಿಯಿಲ್ಲ. ಬಟ್ಟೆಗಳಲ್ಲಿ ದೊಡ್ಡ ದೊಡ್ಡ ಬಟನ್‌ಗಳು ಅಥವಾ ದೊಡ್ಡ ಜೇಬುಗಳು ಇರಬಾರದು. ಚಪ್ಪಲಿಗಳ ವಿಷಯದಲ್ಲಿ ಕಡಿಮೆ ಹೀಲ್ಸ್ ಇರುವ ಚಪ್ಪಲಿಗಳನ್ನು ಧರಿಸಬಹುದು. ಆದರೆ, ಸಂಪೂರ್ಣವಾಗಿ ಮುಚ್ಚಿದ ಶೂಗಳನ್ನು ಧರಿಸಲು ಅವಕಾಶವಿಲ್ಲ. ಹಾಗೇ, ಧಾರ್ಮಿಕ ಅಥವಾ ಸಾಂಪ್ರದಾಯಿಕ ಉಡುಪುಗಳನ್ನು ಧರಿಸುವ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಕನಿಷ್ಠ 1ರಿಂದ 2 ಗಂಟೆ ಮುಂಚಿತವಾಗಿ ತಲುಪಬೇಕು. ಇದರಿಂದ ಅವರ ತಪಾಸಣೆಯನ್ನು ಸುಲಭವಾಗಿ ಮಾಡಬಹುದು.

ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳ ವಸ್ತುಗಳನ್ನು ಇಡಲು ಯಾವುದೇ ಪ್ರತ್ಯೇಕ ಕೌಂಟರ್ ಅಥವಾ ಸುರಕ್ಷಿತ ವ್ಯವಸ್ಥೆ ಇರುವುದಿಲ್ಲ. ಹೀಗಾಗಿ, ತಪಾಸಣೆ ವೇಳೆ ವಸ್ತುಗಳನ್ನು ವಶಕ್ಕೆ ಪಡೆದು ಪರೀಕ್ಷಾ ಕೇಂದ್ರದ ಹೊರಗೆ ಇಡುವಾಗ ಅದು ಕಳೆದುಹೋಗುವ ಸಾಧ್ಯತೆಯೂ ಇರುತ್ತದೆ. ಆದ್ದರಿಂದ ನಿಷೇಧಿತ ವಸ್ತುಗಳನ್ನು ಪರೀಕ್ಷಾ ಕೇಂದ್ರಕ್ಕೆ ತರಬೇಡಿ ಎಂದು ಎನ್‌ಟಿಎ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಸೂಚನೆ ನೀಡಿದೆ.

ಸಮಯ ಪಾಲನೆ: ಪರೀಕ್ಷೆಯು ಮಧ್ಯಾಹ್ನದ ಅವಧಿಯಲ್ಲಿ ನಡೆಯಲಿದ್ದು, ಪ್ರವೇಶ ಪತ್ರದಲ್ಲಿ ನಮೂದಿಸಿರುವ ಸಮಯಕ್ಕೆ ವಿದ್ಯಾರ್ಥಿಗಳು ಹಾಜರಿರಬೇಕು. ಪರೀಕ್ಷೆ ಆರಂಭವಾಗುವ ನಿಗದಿತ ಸಮಯಕ್ಕಿಂತ ಅರ್ಧ ಗಂಟೆ ಮುಂಚಿತವಾಗಿಯೇ ಪರೀಕ್ಷಾ ಕೇಂದ್ರದ ಮುಖ್ಯ ಗೇಟ್‌ಗಳನ್ನು ಮುಚ್ಚಲಾಗುತ್ತದೆ. ತಡವಾಗಿ ಬರುವ ಯಾವುದೇ ವಿದ್ಯಾರ್ಥಿಗೆ ಪ್ರವೇಶ ನೀಡಲಾಗುವುದಿಲ್ಲ.

ಪೆಟ್ರೋಲ್, ಡೀಸೆಲ್ ಬೆಲೆ ಇಳಿಕೆ ಸಾಧ್ಯತೆ

ಸೋನಭದ್ರ : ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಇಳಿಕೆ ಆಗುವ ಸಾಧ್ಯತೆ ಇದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ಶನಿವಾರ ಹೇಳಿದ್ದಾರೆ.



ಉತ್ತರ ಪ್ರದೇಶದ ಸೋನಭದ್ರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು, ಕಚ್ಚಾ ತೈಲದ ಬೆಲೆ ಇಳಿಕೆಗೆ ಸಂಬಂಧಿಸಿದಂತೆ ಸುದ್ದಿಗಾರರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಈ ಮಾತು ಹೇಳಿದ್ದಾರೆ.

ಈಗ ತೈಲ ಕಂಪನಿಗಳ ಬಳಿ ಹೆಚ್ಚಿನ ಬೆಲೆಗೆ ಖರೀದಿಸಿದ ಕಚ್ಚಾ ತೈಲದ ಸಂಗ್ರಹ ಇದೆ. ಕಡಿಮೆ ಬೆಲೆಗೆ ಖರೀದಿ ಆಗುತ್ತಿರುವ ಕಚ್ಚಾ ತೈಲವು ಕಂಪನಿಗಳನ್ನು ತಲುಪಿದಾಗ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ತಗ್ಗಿಸುವ ಸಾಧ್ಯತೆ ಇದೆ ಎಂದು ಪುರಿ ಅವರು ತಿಳಿಸಿದ್ದಾರೆ.

ಮೈಸೂರು ಮಿತ್ರ

ಮೈಸೂರು ಜಯದೇವ ಆಸ್ಪತ್ರೆಯಲ್ಲಿ ಸರಣಿ ಸಾವು ಪ್ರಕರಣ

ಸ್ಥಿತಿ ಸುಧಾರಣೆಗೆ ಅಗತ್ಯ ಕ್ರಮಕ್ಕೆ ಆಗ್ರಹಿಸಿ ದಸಂಸ ಪ್ರತಿಭಟನೆ

ಮೈಸೂರು, ಜೂ.20(ಜಿಎ)–ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಡೆದ ಸರಣಿ ಸಾವು ಇನ್ನು ಮುಂದೆ ನಡೆಯದಂತೆ ಸೂಕ್ತ ಕ್ರಮ ವಹಿಸುವಂತೆ ಆಗ್ರಹಿಸಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಇಂದು ಪ್ರತಿಭಟನೆ ನಡೆಸಿ, ವೈದ್ಯಕೀಯ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು ಜಿಲ್ಲಾ ದಸಂಸ ಪದಾಧಿಕಾರಿಗಳು ಜಯದೇವ ಆಸ್ಪತ್ರೆಗೆ ಭೇಟಿ ನೀಡಿ, ಆಸ್ಪತ್ರೆಯ ಅಧೀಕ್ಷಕರಾದ ಡಾ.ಸದಾನಂದ ಅವರ ಮುಖಾಂತರ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್ ಅವರಿಗೆ ಮನವಿ ಸಲ್ಲಿಸಿದರು.



ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ನಡೆದ ಸರಣಿ ಸಾವು ಮುಂದೆ ನಡೆಯದಂತೆ ಸೂಕ್ತ ಕ್ರಮ ವಹಿಸುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ದಸಂಸ ರಾಜ್ಯ ಸಂಘಟನಾ ಸಂಚಾಲಕರಾದ ನಿಂಗರಾಜ್ ಮಲ್ಲಾಡಿ ಮಾತನಾಡಿ, ಹೃದಯ ಸಂಬಂಧಿ ಕಾಯಿಲೆಗಳಿಗೆ ಜಯದೇವ ಆಸ್ಪತ್ರೆಯಲ್ಲಿ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಪಡೆದು, ಗುಣಮುಖರಾಗಬಹುದು ಎಂಬ ನಂಬಿಕೆಯಿಂದ ದಲಿತರು, ಬಡವರು, ಅಸಹಾಯಕ ಜನರು ಬರುತ್ತಾರೆ. ಹಾಗೆಯೇ ಉತ್ತಮ ಚಿಕಿತ್ಸೆ ದೊರೆತು ನೂರಾರು ರೋಗಿಗಳು ಗುಣಮುಖರಾಗಿ ಜೀವವನ್ನು ಉಳಿಸಿಕೊಂಡಿದ್ದಾರೆ. ಈ ಆಸ್ಪತ್ರೆಯ ಸ್ವಚ್ಛತೆ, ಗುಣಮಟ್ಟದ ಚಿಕಿತ್ಸೆ ಎಲ್ಲವೂ ರಾಜ್ಯದ ಇತರೆ ಆಸ್ಪತ್ರೆಗಳಿಗೆ ಮಾದರಿಯಾಗಿದೆ. ಆದರೆ, ಇತ್ತೀಚಿನ ಸರಣಿ ಸಾವಿನಿಂದ ಜನರಲ್ಲಿ ಆತಂಕ ಉಂಟಾಗಿದೆ ಎಂದರು.

ಇತ್ತೀಚೆಗೆ ಈ ಆಸ್ಪತ್ರೆಯಲ್ಲಿ ಪ್ರಭಾವಿಗಳಿಗೆ, ಹಣವಂತರಿಗೆ, ರಾಜಕೀಯ ವ್ಯಕ್ತಿಗಳಿಗೆ ಮಾತ್ರವೇ ಉತ್ತಮ ಚಿಕಿತ್ಸೆ ದೊರೆಯುತ್ತಿದೆ ಎಂಬ ದೂರಿದೆ. ಬಡವರು, ಅಸಹಾಯಕರು, ದಲಿತರಿಗೆ, ದಿಕ್ಕು–ದನಿ ಇಲ್ಲದ ಬಡ ರೋಗಿಗಳಿಗೆ ಸರಿಯಾದ ಚಿಕಿತ್ಸೆ ದೊರೆಯುತ್ತಿಲ್ಲ. ವೈದ್ಯರು ಬೇಕಾಬಿಟ್ಟಿಯಾಗಿ ವರ್ತಿಸುತ್ತಾ ಯಾವುದೇ ನಿಯಂತ್ರಣ ಇಲ್ಲದಂತೆ, ನಾವು ಚಿಕಿತ್ಸೆ ನೀಡುವುದೇ ಹೀಗೆ ಎಂಬ ರೀತಿಯಲ್ಲಿ ಉದ್ಧಟತನದಿಂದ ವರ್ತಿಸುತ್ತಿದ್ದಾರೆ. ಇಂತಹ ಧೋರಣೆಯನ್ನು ವೈದ್ಯಾಧಿಕಾರಿಗಳು ಕೂಡಲೇ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಡಾ. ಮಂಜುನಾಥ್ ಗುಣಗಾನ: ಡಾ. ಸಿ.ಎನ್.ಮಂಜುನಾಥ್ ನಿರ್ದೇಶಕರಾಗಿದ್ದಾಗ ಈ ರೀತಿಯ ಯಾವುದೇ ಅವಘಡಗಳು ಸಂಭವಿಸಿರಲಿಲ್ಲ. ಸಿಬ್ಬಂದಿ ಕೊರತೆಗಳಿದ್ದರೂ ಚಿಕಿತ್ಸೆಗೆ ಬರುವ ಬಡ ರೋಗಿಗಳನ್ನು ಬರೀ ಕಣ್ಣಿನಿಂದ ನೋಡದೇ ಹೃದಯಾಂತರಾಳದಿಂದ ನೋಡಿ ಅವರ ಬಳಿ ಹಣವಿರಲಿ, ಇಲ್ಲದಿರಲಿ ಉತ್ತಮ ಚಿಕಿತ್ಸೆ ನೀಡುತ್ತಿದ್ದರು. ಆಸ್ಪತ್ರೆಯಲ್ಲಿ ಯಾವುದೇ ಭ್ರಷ್ಟಾಚಾರವಿಲ್ಲದೆ ರೋಗಿಗಳನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳುವ ಮನೋಭಾವನೆ ಹೊಂದಿದ್ದರು. ಸಿಬ್ಬಂದಿಗಳ ಜೊತೆಯಲ್ಲಿಯೂ ಉತ್ತಮ ಬಾಂಧವ್ಯವನ್ನು ಇಟ್ಟುಕೊಂಡು ಆಸ್ಪತ್ರೆಯ ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿದ್ದರು ಎಂದು ಸ್ಮರಿಸಿದರು.

ಜಯದೇವ ಆಸ್ಪತ್ರೆಯಲ್ಲಿ ಸರಣಿ ಸಾವುಗಳು ಸಂಭವಿಸಿರುವುದು ಆತಂಕ ಉಂಟು ಮಾಡಿದೆ. ಇದಕ್ಕೆ ಕಾರಣರಾದ್ರು ಎಂಬ ಬಗ್ಗೆ ಸರ್ಕಾರ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಮುಲಾಜಿಲ್ಲದೆ ಕಾನೂನು ಕ್ರಮ ಜರುಗಿಸಬೇಕು. ಆಸ್ಪತ್ರೆಯಲ್ಲಿ ಸಿಬ್ಬಂದಿಗಳ ಕೊರತೆ ಇದ್ದರೆ ಕೂಡಲೇ ಅಗತ್ಯವಿರುವ ವೈದ್ಯರನ್ನು ಮತ್ತು ಇತರೆ ಸಿಬ್ಬಂದಿಯನ್ನು ನೇಮಕಾತಿ ಮಾಡಬೇಕು. ಮುಂದೆ ಇಂತಹ ಸರಣಿ ಸಾವುಗಳು ಸಂಭವಿಸದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ವಹಿಸಿ ಈ ಆಸ್ಪತ್ರೆಯ ಬಗ್ಗೆ ಜನರಲ್ಲಿ ನಂಬಿಕೆ ಬರುವಂತೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಸಂಸ ರಾಜ್ಯ ಸಂಘಟನಾ ಸಂಚಾಲಕರಾದ ನಂಜಪ್ಪ ಬಸವನಗುಡಿ, ಜಿಲ್ಲಾ ಸಂಚಾಲಕ ಹೆಚ್.ಬಿ.ದಿವಾಕರ್, ಮೈಸೂರು ನಗರ ಸಂಚಾಲಕ ಪೈಲ್ವಾನ್ ಕೃಷ್ಣ ಅಶೋಕಪುರಂ, ಅಲೆಮಾರಿ ಸಮುದಾಯದ ಅಧ್ಯಕ್ಷ ವೆಂಕಟೇಶ್, ಅಂಗವಿಕಲರ ಜಿಲ್ಲಾಧ್ಯಕ್ಷ ಕೆರೆಯೂರು ಶಿವಶಂಕರ್, ಏಕಲವ್ಯ ನಗರದ ನಂದನ್ ಕುಮಾರ್, ಶಂಕರ್, ಜಿಲ್ಲಾ ಅಲೆಮಾರಿ ಜಾಗೃತಿ ಸಮಿತಿ ಸದಸ್ಯ ಸತೀಶ, ತಿಮ್ಮರಾಯ ಕುಮಾರ, ಮಣಿ, ಪಾರ್ವತಿ, ದೇವರಾಜ, ವನಜಾ, ಸುಜಾತಾ, ಮಂಗಳ, ಬೇಬಿ, ಜೋಗಿ, ಚಲುವರಾಜು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲ್ಯಾಕ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಲಾಸಿ ಪಾಳ್ಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಲನ್ (ತ)	4 ಪ್ರದರ್ಶನಗಳು
ಸಂಗಂ	
ನೂರ್ ಸ್ವಾಮಿ	4 ಪ್ರದರ್ಶನಗಳು
ಲಿಡೋ	
ಕಿಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಲಘಟ್ಟ (ಕ)	4 ಪ್ರದರ್ಶನಗಳು

ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿವೆ 1,21,789 ವಿವಿಧ ಪ್ರಭೇದದ ಮರಗಳು!



ಮೈಸೂರಲ್ಲಿ ಭೇರುಂಡ ಫೌಂಡೇಷನ್ ನಡೆಸಿದ 'ನಮ್ಮರ ಮರಗಳ ಗಣತಿ' ವರದಿಯನ್ನು ಭೇರುಂಡ ಫೌಂಡೇಷನ್ ಮುಖ್ಯಸ್ಥರು ಹಾಗೂ ರಾಜವಂಶಸ್ಥರಾದ ತ್ರಿಶಿಕಾ ಕುಮಾರಿ ಒಡೆಯರ್ ಅವರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರಿಗೆ ಸಲ್ಲಿಸಿದರು.

ಮೈಸೂರು, ಜೂ.20(ಎಂಟಿವೈ)– ಮೈಸೂರಿನ ಭೇರುಂಡ ಫೌಂಡೇಶನ್ ಮೈಸೂರಲ್ಲಿ ನಡೆಸಿದ 'ನಮ್ಮರ ಮರಗಳ ಗಣತಿ'ಯಲ್ಲಿ ವಿವಿಧ ಪ್ರಭೇದದ 1,21,789 ಮರಗಳನ್ನು ದಾಖಲಿಸಿದೆ.

ಮೈಸೂರು ಮಹಾನಗರ ಪಾಲಿಕೆಯ 65 ವಾರ್ಡ್ ವ್ಯಾಪ್ತಿಯಲ್ಲಿ ನಡೆಸಿದ ಮರ ಗಣತಿಯಲ್ಲಿ 520ಕ್ಕೂ ಹೆಚ್ಚು ಸ್ವಯಂ ಸೇವಕರು ಭೇರುಂಡ ಸಂಸ್ಥೆ ನಡೆಸಿದ ಗಣತಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ಮರಗಳ ಸಂಖ್ಯೆ ನಮೂದಿಸುವುದರೊಂದಿಗೆ ಅವುಗಳ ಪ್ರಭೇದ, ಹಸಿರು ಹೊದಿಕೆ ಪ್ರಮಾಣ, ವಾರ್ಡ್‌ವಾರು ಮರಗಳ ಸಂಖ್ಯೆ, ಕಾರ್ಬನ್ ಡೈಆಕ್ಸೈಡ್ ಹೀರಿಕೊಳ್ಳುವ ಪ್ರಮಾಣ ಸೇರಿದಂತೆ ವಿವಿಧ ಆಯಾಮಗಳಲ್ಲಿ ದತ್ತಾಂಶ ಮತ್ತು ವೈಜ್ಞಾನಿಕ ವರದಿ ತಯಾರಿಸಿದೆ. ಮರಗಳ ಗಣತಿ ವರದಿಯನ್ನು ರಾಜವಂಶಸ್ಥರು ಹಾಗೂ ಭೇರುಂಡ ಫೌಂಡೇಷನ್ ಮುಖ್ಯಸ್ಥರೂ ಆದ ತ್ರಿಶಿಕಾ ಕುಮಾರಿ ಒಡೆಯರ್ ಅವರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರಿಗೆ ಸಲ್ಲಿಸಿದ್ದಾರೆ.

ಭೇರುಂಡ ಫೌಂಡೇಷನ್ 2026ರ ಜನವರಿಯಲ್ಲಿ ತ್ರಿಶಿಕಾ ಕುಮಾರಿ ಒಡೆಯರ್ ಅವರ ನೇತೃತ್ವದಲ್ಲಿ ಮರಗಳ ಗಣತಿ ಪ್ರಕ್ರಿಯೆ ಆರಂಭಿಸಿತ್ತು. ಜಿಪಿಎಸ್ ತಂತ್ರಜ್ಞಾನ ಬಳಸಿ ಗಣತಿದಾರರು ಮರ ಗಣತಿ ನಡೆಸಿದ್ದಾರೆ. ಇದರಲ್ಲಿ ಮರಗಳ ಸುತ್ತಳತೆ, ಅದರ ಆರೋಗ್ಯ ಸ್ಥಿತಿ, ಪ್ರಭೇದ, ಸ್ವರೂಪವನ್ನು ವಿಶ್ಲೇಷಿಸಿ ಮಾಹಿತಿ ದಾಖಲಿಸಿದ್ದಾರೆ. ಅಲ್ಲದೆ, ನಮ್ಮರ ಯೋಜನೆ ಡಿಜಿಟಲ್ ದಾಖಲೆಗಾಗಿ ಪೋರ್ಟಲ್‌ನಲ್ಲಿ ಗಣತಿ ನಡೆಸಿದ ವಾರ್ಡ್, ರಸ್ತೆ, ಮರಗಳ ಸಂಖ್ಯೆ, ಪ್ರಭೇದ ಹಾಗೂ ಇನ್ನಿತರ ಮಾಹಿತಿಯನ್ನು ನಮೂದಿಸಲಾಗಿದೆ. ಮೈಸೂರಿನ ಹಸಿರು ಪರಂಪರೆ ಸಂರಕ್ಷಿಸುವ ನಿಟ್ಟಿನಲ್ಲಿ ಮರಗಳ ಗಣತಿ ಪ್ರಮುಖ ಪಾತ್ರವಹಿಸಲಿದೆ.

ಮರಗಳ ಗಣತಿ ವರದಿಯಲ್ಲಿ 21 ಪಾಲುದಾರ ಸಂಸ್ಥೆಗಳು ಪಾಲ್ಗೊಂಡಿವೆ. ಪ್ರಸ್ತುತ ಸಲ್ಲಿಸಿರುವ ವರದಿಯೊಂದಿಗೆ ಆಗಸ್ಟ್‌ನಲ್ಲಿ ಪೂರ್ಣ ಪ್ರಮಾಣದ ವರದಿ ಸಲ್ಲಿಸಲು ಭೇರುಂಡ ಫೌಂಡೇಷನ್ ನಿರ್ಧರಿಸಿದೆ. ಗಣತಿಯಲ್ಲಿ ದಾಖಲಿಸಿರುವ ಮರಗಳ ಪ್ರಭೇದ ಕುರಿತ ವರದಿ ಪ್ರಗತಿಯಲ್ಲಿದೆ. ವಾರ್ಡ್‌ವಾರು ಸಾಂದ್ರತೆ ಮತ್ತು ಹಸಿರು ಹೊದಿಕೆ, ಕಾರ್ಬನ್ ಹೀರಿಕೊಳ್ಳುವಿಕೆ ಅಂದಾಜು ವರದಿ ಹಾಗೂ ಪಾರಂಪರಿಕ ಮರಗಳ ಪಟ್ಟಿಯ ಪೂರ್ಣ ವರದಿಯನ್ನು ಆಗಸ್ಟ್‌ನಲ್ಲಿ ಸಲ್ಲಿಸಲಾಗುತ್ತದೆ.

ಜೂ.21 ರಿಂದ ಜುಲೈ 10ರವರೆಗೆ ಟ್ರಾಫಿಕ್ ಫೈನ್ ಪಾವತಿಗೆ ಶೇ.50 ರಿಯಾಯ್ತಿ

ಮೈಸೂರು, ಜೂ.20– ಬೆಂಗಳೂರಿನ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರ ಪ್ರಸ್ತಾವನೆಯ ಮೇರೆಗೆ, ಬಾಕಿ ಇರುವ ಇ–ಚಲನ್ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇಕಡಾ 50 ರಷ್ಟು ರಿಯಾಯಿತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ. ಸಾರ್ವಜನಿಕರಿಗೆ ಜೂನ್ 21 ರಿಂದ ಜುಲೈ 10ರವರೆಗೆ ಮಾತ್ರ ದಂಡ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

ಮೈಸೂರಲ್ಲಿ ದಸರಾ ವೇಳೆ ಕಂಬಳ ಉತ್ಸವ

● ಪ್ರಕ್ರಿಯೆ ಆರಂಭಿಸಿದ ಜಿಲ್ಲಾಡಳಿತ ● ಮೂರು ಸ್ಥಳ ಪರಿಶೀಲನೆ; ಬಳಿಕ ಅಂತಿಮ



ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಕಂಬಳ ಉತ್ಸವ ಕುರಿತು ಅಧಿಕಾರಿಗಳು ಹಾಗೂ ಕಂಬಳ ಉತ್ಸವದ ಆಯೋಜಕರೊಂದಿಗೆ ಪೂರ್ವಭಾವಿ ಸಭೆ ನಡೆಸಿದರು.

ಮೈಸೂರು, ಜೂ.20(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ತುಳುನಾಡಿನ ಕಂಬಳ ಉತ್ಸವ ಆಯೋಜಿಸಲು ನಿರ್ಧರಿಸಲಾಗಿದ್ದು, ಅದಕ್ಕಾಗಿ ಮೂರು ಸ್ಥಳ ಗುರುತಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕಂಬಳ ಉತ್ಸವಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಹಾಗೂ ಕಂಬಳ ಆಯೋಜನ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಪೂರ್ವಬಾವಿ ಸಭೆ ನಡೆಸಿ ಚರ್ಚಿಸಿದ ಬಳಿಕ ಮಾತನಾಡಿದ ಅವರು, ನಾಡಹಬ್ಬ ದಸರಾ ಮಹೋತ್ಸವದಲ್ಲಿ ಈ ಬಾರಿ ಕಂಬಳ ಉತ್ಸವ ಆಕರ್ಷಣೀಯ ಕೇಂದ್ರವಾಗಲಿದೆ. ಇದೇ ಮೊದಲ ಬಾರಿಗೆ ಕಂಬಳ ಉತ್ಸವ ಹಮ್ಮಿಕೊಳ್ಳುತ್ತಿರುವುದರಿಂದ ಅದರ ಯಶಸ್ಸಿಗೆ ಅಗತ್ಯ ಕ್ರಮ ಕೈಗೊಳ್ಳ ಬೇಕು. ಕಳೆದ ವರ್ಷವೇ ಕಂಬಳ ಆಯೋಜಿಸಲು ಉದ್ದೇಶಿಸಲಾಗಿತ್ತು. ಆದರೆ ಸೂಕ್ತ ಸ್ಥಳ ದೊರಕದ ಹಿನ್ನಲೆಯಲ್ಲಿ ಸಾಧ್ಯವಾಗಲಿಲ್ಲ ಎಂದರು.

ಈ ಬಾರಿ 3 ತಿಂಗಳ ಮೊದಲೇ ಕಂಬಳ ಆಯೋಜಿಸಲು ಮೈಸೂರು ನಗರದ ವಿಜಯನಗರ ಮೊದಲನೇ ಹಂತ, ವಿಜಯನಗರ ನಾಲ್ಕನೇ ಹಂತ ಹಾಗೂ ಸಾತಗಳ್ಳಿ ರಿಂಗ್ ರೋಡ್ ರಸ್ತೆಯಲ್ಲಿ ಮೂರು ಸ್ಥಳ ಗುರುತಿಸಲಾಗಿದ್ದು, ಒಂದು ಸ್ಥಳವನ್ನು ಆಯ್ಕೆ ಮಾಡಲಾಗುವುದು. ಕಂಬಳ ಆಯೋಜನೆಗೆ ಕನಿಷ್ಠ ಏಳು ಎಕರೆ ಸ್ಥಳ ಬೇಕಿದೆ. ಸ್ಥಳ ಆಯ್ಕೆ ಮಾಡುವಾಗ ಪಾರ್ಕಿಂಗ್ ವ್ಯವಸ್ಥೆ, ವೀಕ್ಷಕರ ಗ್ಯಾಲರಿ, ಕೋಣಗಳು ಹಾಗೂ ಆಯೋಜಕರು ಉಳಿದುಕೊಳ್ಳಲು ಬೇಕಿರುವ ಸ್ಥಳವನ್ನು ನೋಡಿ ಆಯ್ಕೆ ಮಾಡಲಾಗುತ್ತದೆ. ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾಗುವ ಕಂಬಳ ಕಾರ್ಯಕ್ರಮದ ಉಪಸಮಿತಿಗೆ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗುವುದು ಎಂದರು.

ಸಭೆಯಲ್ಲಿ ಜಿ.ಪಂ. ಸಿಇಓ ಯುಕೇಶ್ ಕುಮಾರ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿಸಿಪಿ ಸುಂದರ್‌ರಾಜ್, ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ವಿಜಯ್ ಕುಮಾರ್, ಬೆಂಗಳೂರು ಕಂಬಳ ಕಾರ್ಯಾಧ್ಯಕ್ಷ ಮುರುಳಿಧರ್ ರೈ ಹಾಗೂ ಜಯಸೂರ್ಯ ರೈ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ಜೂ.28ರಂದು ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ

ಮೈಸೂರು,ಜೂ.20– ರಾಜ್ಯದಲ್ಲಿ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ನೀಡುವ ಉದ್ದೇಶದಿಂದ 2026 ರ ಜೂ.28 ರ ಭಾನುವಾರದಂದು ರಾಷ್ಟ್ರೀಯ ಲಸಿಕಾ ದಿನ (ಪಲ್ಸ್ ಪೋಲಿಯೋ) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ರಿತ್ವಿಕ್ ಪಾಂಡೆ ತಿಳಿಸಿದ್ದಾರೆ.

ಭಾರತವು ಕಳೆದ 14 ವರ್ಷಗಳಿಗೂ ಮೇಲ್ಪಟ್ಟು ಪೋಲಿಯೋ ಮುಕ್ತ ರಾಷ್ಟ್ರವಾಗಿದ್ದರೂ, ಜಗತ್ತಿನ ಕೆಲವು ಭಾಗಗಳಲ್ಲಿ ಹಾಗೂ ಭಾರತದ ನೆರೆ ರಾಷ್ಟ್ರಗಳಲ್ಲಿ ವೈಲ್ಡ್ ಪೋಲಿಯೋ ವೈರಸ್ ಹರಡುವಿಕೆ ಇನ್ನೂ ಇರುವುದರಿಂದ ಈ ಮುನ್ನೆಚ್ಚರಿಕೆ ಕ್ರಮ ಅತ್ಯಗತ್ಯವಾಗಿದೆ. ಭಾರತ ತಜ್ಞ ಸಲಹಾ ಗುಂಪಿನ ಶಿಫಾರಸಿನ ಅನ್ವಯ ಈ ಅಭಿಯಾನವನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಮೊದಲನೇ ದಿನ ಜೂ.28 ರಂದು ಪೋಲಿಯೋ ಬೂತ್‌ಗಳಲ್ಲಿ ಲಸಿಕೆ ನೀಡಲಾಗುವುದು. ನಂತರದ 2 ರಿಂದ 3 ದಿನಗಳಲ್ಲಿ ಆರೋಗ್ಯ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಲಸಿಕೆ ವಂಚಿತ ಮಕ್ಕಳಿಗೆ ಲಸಿಕೆ ಹಾಕಲಿದ್ದಾರೆ. ವಲಸಿಗ ಸಮುದಾಯದ ಮಕ್ಕಳು, ಹೆಚ್ಚು ಅಪಾಯದಂಚಿನಲ್ಲಿರುವ ಪ್ರದೇಶಗಳು ಹಾಗೂ ನಗರ ಪ್ರದೇಶದ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳಿಗೆ ವಿಶೇಷ ಆದ್ಯತೆ ನೀಡಲಾಗುತ್ತದೆ.

ಎಲ್ಲಾ ಇಲಾಖೆಗಳ ಸಹಕಾರಕ್ಕೆ ಮನವಿ: ಈ ಬೃಹತ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲಾ ಇಲಾಖೆಗಳ ಸಹಕಾರವನ್ನು ಬಯಸಿರುವ ಆರೋಗ್ಯ ಇಲಾಖೆಯು, ಹೆಚ್ಚಿನ ಪ್ರಚಾರ ನೀಡಲು ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು, ಎಲ್ಲಾ ಮಾಧ್ಯಮಗಳು, ಆಕಾಶವಾಣಿ ಹಾಗೂ ಎಫ್.ಎಮ್ ವಾಹಿನಿಗಳಲ್ಲಿ ಜಿಂಗಲ್ಸ್ ಮೂಲಕ ಈ ಅಭಿಯಾನದ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ನಿರ್ದೇಶನ ನೀಡಲಾಗಿದೆ.

ಸಾರ್ವಜನಿಕರು ಹಾಗೂ ಪೋಷಕರು ತಮ್ಮ 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಹನಿಗಳನ್ನು ಹಾಕಿಸಿ ಸಹಕರಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಅಫ್ಘನ್ ವಿರುದ್ಧ ಸರಣಿ ಕ್ಲೀನ್ ಸ್ವೀಪ್ ಮಾಡಿದ ಭಾರತ

ಚೆನ್ನೈ, ಜೂ.20(ವಿವಿಹೆಚ್)– ಕನ್ನಡಿಗ ಪ್ರಸಿದ್ಧ್ ಕೃಷ್ಣ ಮಾರಕ ಬೌಲಿಂಗ್ ದಾಳಿ ಹಾಗೂ ಯಶಸ್ವಿ ಜೈಸ್ವಾಲ್ ಅಜೇಯ ಶತಕದ ಬಲದಿಂದ ಅಫ್ಘಾನಿಸ್ತಾನ ವಿರುದ್ಧ 3ನೇ ಏಕದಿನ ಪಂದ್ಯದಲ್ಲಿ 9 ವಿಕೆಟ್‌ಗಳ ಗೆಲುವು ಸಾಧಿಸುವ ಮೂಲಕ ಟೀಂ ಇಂಡಿಯಾ ಸರಣಿಯನ್ನು ಕ್ಲೀನ್ ಸ್ವೀಪ್ ಮಾಡಿತು.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ, ಕನ್ನಡಿಗ ಪ್ರಸಿದ್ಧ್ ಕೃಷ್ಣ ದಾಳಿಗೆ ತತ್ತರಿಸಿತು. 8.2 ಓವರ್ ಬೌಲಿಂಗ್ ಮಾಡಿದ ಅವರು, ಕೇವಲ 23ರನ್ ಬಿಟ್ಟುಕೊಟ್ಟು 5 ವಿಕೆಟ್ ಗೊಂಚಲು ಪಡೆದರು.

ಈ ಹೊಡೆತದ ನಡುವೆಯೂ ಅಫ್ಘನ್, ನಾಯಕ ಹಶ್ಮತುಲ್ಲಾ ಶಾಹಿದಿ ಅವರ ಶತಕ (102 ರನ್, 131ಎಸೆತ)ದ ನೆರವಿನಿಂದ ಇನ್ನೂರರ ಗಡಿ ದಾಟಿತು. ಅಜ್ಮತುಲ್ಲಾ ಓಮರ್‌ಜೈ 50(56) ಮೊಹಮ್ಮದ್ ನಬಿ 21(23) ಹಾಗೂ ಇಬ್ರಾಹಿಂ ಜದ್ರಾನ್ 11(18) ಹೊರತುಪಡಿಸಿ 7 ಮಂದಿ ಬ್ಯಾಟರ್‌ಗಳು ಒಂದಂಕಿ ಮೊತ್ತಕ್ಕೆ ಕುಸಿದರು. ಮೂರು ಮಂದಿ 1ರನ್ ಗಳಿಸಿದರೆ, ಓರ್ವ ಡಕ್‌ಔಟ್, ಇಬ್ಬರೂ ತಲಾ 5 ರನ್ ಬಾರಿಸಿದರು.

ಇದರೊಂದಿಗೆ ಅಫ್ಘಾನಿಸ್ತಾನ 44.2 ಓವರ್‌ಗಳಲ್ಲಿ 218 ರನ್ ಕಲೆಹಾಕಿ ಸರ್ವಪತನ ಕಂಡಿತು. ಟೀಂ ಇಂಡಿಯಾ ಪರ ಕರಾರುವಕ್ಕಾದ ಬೌಲಿಂಗ್ ದಾಳಿ ನಡೆದ ಪ್ರಸಿದ್ಧ್ 5 ವಿಕೆಟ್ ಪಡೆದರೆ, ಗುರ್ನೂರ್ ಬ್ರಾರ್, ಪ್ರಿನ್ಸ್ ಯಾದವ್ ಹಾಗೂ ಹರ್ಷ್ ದುಬೆ ತಲಾ ಒಂದೊಂದು ವಿಕೆಟ್ ಪಡೆದರು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಟೀಂ ಇಂಡಿಯಾಗೆ ರೋಹಿತ್ ಶರ್ಮಾ ಹಾಗೂ ಯಶಸ್ವಿ ಜೈಸ್ವಾಲ್ ಜೋಡಿ ಉತ್ತಮ ಆರಂಭ ಕಟ್ಟಿಕೊಟ್ಟಿತು. ಈ ಜೋಡಿ ಮೊದಲ ವಿಕೆಟ್‌ಗೆ 137 ಎಸೆತಗಳಲ್ಲಿ 171ರನ್ ಕಲೆಹಾಕಿ, ಪಂದ್ಯವನ್ನು ಭಾರತದತ್ತ ವಾಲಿಸಿತು.

ಅರ್ಧಶತಕದ ದಾಖಲಿಸಿ ಬ್ಯಾಟಿಂಗ್ ಮಾಡುತ್ತಿದ್ದ ರೋಹಿತ್ ಶರ್ಮಾ 79(69) ರನ್ ಗಳಿಸಿದ್ದ ವೇಳೆ ಮೊಹಮ್ಮದ್ ಸ್ಪಿನ್ ಮೋಡಿಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಶ್ರೇಯಸ್ ಅಯ್ಯರ್, ಜೈಸ್ವಾಲ್ ಜೊತೆಗೂಡಿ ತಂಡವನ್ನು ಗೆಲ್ಲಿಸಿಕೊಟ್ಟರು.

ಅಯ್ಯರ್ 19 ಎಸೆತಗಳಲ್ಲಿ ಅಜೇಯ 20 ರನ್ ಕಲೆಹಾಕಿದರೆ, ಜೈಸ್ವಾಲ್ 86 ಎಸೆತಗಳಲ್ಲಿ 14 ಬೌಂಡರಿ, 3 ಸಿಕ್ಸರ್ ಸಹಿತ ಅಜೇಯ 110 ರನ್ ಗಳಿಸಿದರು. ಇದರೊಂದಿಗೆ ಟೀಂ ಇಂಡಿಯಾ 28.4 ಓವರ್‌ಗಳಲ್ಲಿ ಕೇವಲ 1 ವಿಕೆಟ್ ಕಳೆದುಕೊಂಡು 224ರನ್ ಚಚ್ಚಿ ಗೆಲುವು ದಾಖಲಿಸುವ ಮೂಲಕ ಸರಣಿ ಕ್ಲೀನ್ ಸ್ವೀಪ್ ಮಾಡಿತು.

ಕೊನೆಯ ಪಂದ್ಯದಲ್ಲಿ ಉತ್ತಮ ಬೌಲಿಂಗ್ ದಾಳಿ ನಡೆಸಿದ ಪ್ರಸಿದ್ಧ್ ಕೃಷ್ಣ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರೆ, ಟೀಂ ಇಂಡಿಯಾ ನಾಯಕ ಶುಭ್‌ಮನ್ ಗಿಲ್ ಸರಣಿ ಶ್ರೇಷ್ಠ ಪ್ರಶಸ್ತಿ ತನ್ನದಾಗಿಸಿಕೊಂಡರು.

ಪ್ರಧಾನಿ ಜೊತೆಗೆ ಯೋಗ ಮಾಡಲು 6 ಲಕ್ಷ ಸಂಸ್ಥೆಗಳ ನೋಂದಣಿ

ನವದೆಹಲಿ: ನಾಳೆ (ಜೂನ್ 21) ಅಂತಾರಾಷ್ಟ್ರೀಯ ಯೋಗ ದಿನಾಚರಣೆ. ಈ ಬಾರಿ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದಡಿ ಯೋಗ ದಿನವನ್ನು ಆಯೋಜಿಸಲಾಗಿದೆ. ಈ ಯೋಗ ದಿನದಂದು ಪ್ರಧಾನಿ ಮೋದಿ ಜೊತೆಗೆ ಯೋಗ ನಡೆಸಲು ದೇಶಾದ್ಯಂತ ವಿವಿಧ ಸಂಸ್ಥೆ ಮತ್ತು ಸಮುದಾಯಗಳು ಮುಂದಾಗಿದ್ದು, ಬರೋಬ್ಬರಿ 6 ಲಕ್ಷ ನೋಂದಣಿ ಆಗಿವೆ ಎಂದು ಆಯುಷ್ ಸಚಿವಾಲಯದ ಯೋಗ ಸಂಗಮ ಪೋರ್ಟಲ್ ಅಧಿಕೃತ ಹೇಳಿಕೆಯಲ್ಲಿ ಪ್ರಕಟಿಸಲಾಗಿದೆ.



ನೋಂದಾಯಿತ ಸಂಸ್ಥೆಗಳು ಜೂನ್ 21 ರಂದು ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ರಾಷ್ಟ್ರವ್ಯಾಪಿ ಯೋಗ ಸಂಗಮ ಆಂದೋಲನಕ್ಕೆ ಸೇರಲು ಮತ್ತು ಯೋಗಾಭ್ಯಾಸ ಮಾಡಲು ಅವಕಾಶ ನೀಡಿದೆ. ಭಾಗಿದಾರರನ್ನು ತಮ್ಮ ಸ್ಥಳಗಳಲ್ಲಿ ಭಾಗವಹಿಸಲು ಸಜ್ಜುಗೊಳಿಸುತ್ತದೆ. ಇದಕ್ಕಾಗಿ ಪೋರ್ಟಲ್‌ನಲ್ಲಿ ಅವಕಾಶ ನೀಡಿದ್ದು, ಇತ್ತೀಚಿನ ದಿನದಲ್ಲಿ ಇದರಲ್ಲಿ ಏರಿಕೆ ಕಂಡಿದೆ. ಇದು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಭಾಗವಾಗಲು, ಜನರಲ್ಲಿ ಹೆಚ್ಚುತ್ತಿರುವ ಉತ್ಸಾಹ ತೋರಿಸುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಪರಿಶಿಷ್ಟ ಪಂಗಡಕ್ಕೆ ಶೇ.7 ಮೀಸಲಾತಿಗೆ ಆಗ್ರಹಿಸಿ ಮೈಸೂರಲ್ಲಿ ಜು.7ರಂದು ಜಾಗೃತಿ ಸಮಾವೇಶ

ಮೈಸೂರು, ಜೂ.20– ರಾಜ್ಯದಲ್ಲಿ ಪರಿಶಿಷ್ಟ ಪಂಗಡ(ಎಸ್‌ಟಿ) ಸಮುದಾಯಕ್ಕೆ ಶೇ.7ರಷ್ಟು ಮೀಸಲಾತಿಗೆ ಆಗ್ರಹಿಸಿ ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ವತಿಯಿಂದ ರಾಜ್ಯಾದ್ಯಂತ ಜಾಗೃತಿ ಸಮಾವೇಶವನ್ನು ಹಮ್ಮಿಕೊಂಡಿದ್ದು, ಜುಲೈ 7ರಂದು ಮೈಸೂರಿನಲ್ಲೂ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ.

ಇಂದು ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಗರ ಹಾಗೂ ಗ್ರಾಮಾಂತರ ಎಸ್‌ಟಿ ಮೋರ್ಚಾ ಪದಾಧಿಕಾರಿಗಳು ಪೂರ್ವಭಾವಿ ಸಭೆ ನಡೆಸಿ, ಮೀಸಲಾತಿ ವಿಚಾರದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ಮಲತಾಯಿ ಧೋರಣೆ ಖಂಡಿಸುವುದರೊಂದಿಗೆ ಸಾಮಾಜಿಕ ನ್ಯಾಯಕ್ಕಾಗಿ ನಡೆಯಲಿರುವ ಜಾಗೃತಿ ಸಮಾವೇಶವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಸಮುದಾಯದ ಜನರಿಗೆ ಅರಿವು ಮೂಡಿಸಲು ನಿರ್ಣಯಿಸಲಾಯಿತು.

ಸಭೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು ಹಾಗೂ ಮುಖಂಡ ಎಂ.ಅಪ್ಪಣ್ಣ ಅವರು ಮಾತನಾಡಿ, ಈ ಸಮಾವೇಶದಲ್ಲಿ ಮಾಜಿ ಸಚಿವರಾದ ರಮೇಶ್ ಜಾರಕಿಹೊಳಿ, ಶ್ರೀರಾಮುಲು, ಬಾಲಚಂದ್ರ ಜಾರಕಿಹೊಳಿ, ವಿಧಾನಪರಿಷತ್ ಸದಸ್ಯ ಶಾಂತರಾಮ್ ಸಿದ್ಧಿ, ಎಸ್‌ಟಿ ಮೋರ್ಚಾ ರಾಜ್ಯ ಅಧ್ಯಕ್ಷ ಬಂಗಾರು ಹನಮಂತು ಸೇರಿದಂತೆ ಸಮುದಾಯದ ಹಲವು ನಾಯಕರು, ಮುಖಂಡರು ಭಾಗವಹಿಸಲಿದ್ದು, ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶದ ಪಕ್ಷದ ಎಲ್ಲಾ ಪ್ರಮುಖರು ಹಾಗೂ ಅಪಾರ ಸಂಖ್ಯೆಯ ಮುಖಂಡರು ಭಾಗವಹಿಸಬೇಕು ಎಂದು ಮನವಿ ಮಾಡಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಗರ ಹಾಗೂ ಗ್ರಾಮಾಂತರ ಎಸ್‌ಟಿ ಮೋರ್ಚಾ ಪದಾಧಿಕಾರಿಗಳು, ಮೀಸಲಾತಿ ಜಾಗೃತಿ ಸಮಾವೇಶದ ಪೂರ್ವಭಾವಿ ಸಭೆ ನಡೆಸಿದರು.

ಮಾಜಿ ಮೇಯರ್ ಶಿವಕುಮಾರ್ ಮಾತನಾಡಿ, ರಾಜ್ಯಾದ್ಯಂತ ರಾಜ್ಯ ಸರ್ಕಾರದ ಎಸ್‌ಟಿ ಮೀಸಲಾತಿಯಲ್ಲಿ ಉದ್ಯೋಗ ಶಿಕ್ಷಣ ಕ್ಷೇತ್ರದಲ್ಲಿ ಶೇ.7ರಷ್ಟು ಮೀಸಲಾತಿ ಬದಲು ಕೇವಲ ಶೇ.3 ರಷ್ಟು ಮೀಸಲಾತಿ ನೀಡಿ ಅನ್ಯಾಯ ಮಾಡಿದೆ. ಇದರಿಂದ ನಮ್ಮ ಸಮುದಾಯದ ಯುವಜನರು, ವಿದ್ಯಾರ್ಥಿಗಳು ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ರಾಜ್ಯ ಸರ್ಕಾರದ ಮೀಸಲು ನೀತಿಯ ವಿರುದ್ಧ ರಾಜ್ಯಾದ್ಯಂತ ಜಾಗೃತಿ ಸಮಾವೇಶದ ಮೂಲಕ ಎಚ್ಚರಿಕೆ ಸಂದೇಶವನ್ನು ನೀಡಲಾಗುತ್ತಿದೆ ಎಂದರು.

ಸಭೆಯಲ್ಲಿ ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ಜಿಪಂ ಮಾಜಿ ಸದಸ್ಯ ಬನ್ನೂರು ಲೋಕೇಶ್ ನಾಯಕ, ಎಸ್‌ಟಿ ಮೋರ್ಚಾ ನಗರ ಅಧ್ಯಕ್ಷ ಪಡುವಾರಹಳ್ಳಿ ಎಂ ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿಗಳಾದ ಕೆ.ನಾಗೇಶ್ ನಾಯಕ, ಕೃಷ್ಣಕುಮಾರ್, ಗ್ರಾಮಾಂತರ ಅಧ್ಯಕ್ಷ ಎಸ್.ಎನ್.ನವೀನ್ ಕುಮಾರ್, ಪ್ರಧಾನ ಕಾರ್ಯದರ್ಶಿ ಹುಲ್ಲಹಳ್ಳಿ ನಾಗೇಂದ್ರ, ಡಿ.ಮಹೇಶ್ ನಾಯಕ, ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯರಾದ ಗುರುವಿನಾಯಕ, ಎಂ.ಮಹೇಶ್, ಮರಿಸ್ವಾಮಿ ನಾಯಕ, ಸಿ.ಎನ್.ಚಂದ್ರು, ನಂದೀಶ್ ನಾಯಕ, ಉಮೇಶ್, ವಕೀಲರಾದ ಮಂಜುನಾಥ, ಧನು, ರಾಮೇನಹಳ್ಳಿ ಮಹದೇವ ನಾಯಕ, ತ್ಯಾಗರಾಜ್, ರವಿಕುಮಾರ್, ವೀರನಗೆರೆ ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಮುಖ್ಯಮಂತ್ರಿಗಳ ಅನುದಾನದಡಿ ಕೈಗೊಂಡಿರುವ ಕಾಮಗಾರಿಗಳ ತ್ವರಿತವಾಗಿ ಪೂರ್ಣಗೊಳಿಸಿ!

ಸಂಬಂಧಿಸಿದ ಅಧಿಕಾರಿಗಳಿಗೆ ಡಿ.ಸಿ ಸೂಚನೆ

ಮೈಸೂರು, ಜೂ.20(ಎಂಟಿವೈ)– ಮೂಲಭೂತ ಸೌಕರ್ಯಗಳ ಕಾಮಗಾರಿಗಳ ಅನುಷ್ಠಾನಕ್ಕೆ ಮುಖ್ಯಮಂತ್ರಿಗಳ ಅನುದಾನದಲ್ಲಿ ಶೇ.80ರಷ್ಟು ಬಿಡುಗಡೆಯಾಗಿದ್ದು, ಕಾಮಗಾರಿ ಚುರುಕುಗೊಳಿಸಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಸೂಚಿಸಿದ್ದಾರೆ.

ಮೈಸೂರಿನ ಜಿ.ಪಂ.ಸಭಾಂಗಣದಲ್ಲಿ ಮುಖ್ಯಮಂತ್ರಿಗಳ ಮೂಲಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಈಗಾಗಲೇ ಬಿಡುಗಡೆಯಾಗಿರುವ ಅನುದಾನವನ್ನು ಬಳಸಿ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದರೆ, ಹೊಸದಾಗಿ ಅನುದಾನ ನೀಡುವುದಿಲ್ಲ. ಕಾಮಗಾರಿಗಳ ಅನುಷ್ಠಾನಕ್ಕೆ ಕ್ರಮ ಕೈಗೊಂಡು ಅವುಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು ಎಂದರು.



ಮೈಸೂರಿನ ಜಿ.ಪಂ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಮುಖ್ಯಮಂತ್ರಿಗಳ ಮೂಲಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆ.ಆರ್.ಕ್ಷೇತ್ರದಲ್ಲಿ 18.75 ಕೋಟಿ ರೂ, ಚಾಮರಾಜ ವಿಧಾನಸಭಾ ಕ್ಷೇತ್ರದ 36.05 ಕೋಟಿ ರೂ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರದ 35 ಕೋಟಿ ರೂ. ವೆಚ್ಚದ ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೆತ್ತಿಕೊಳ್ಳುತ್ತಿದ್ದು, ಬಾಕಿ ಇರುವ 7 ಪ್ಯಾಕೇಜ್‌ಗಳ ಆಡಳಿತಾತ್ಮಕ ಅನುಮೋದನೆ ಪಡೆದು ಕಾಮಗಾರಿ ಪ್ರಾರಂಭಿಸುವಂತೆ ಸೂಚಿಸಿದರು.

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದವರಿಗೆ ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಮುಜರಾಯಿಗೆ ಸಂಬಂಧಿಸಿದ 3 ಕೋಟಿ ರೂ ವೆಚ್ಚದಲ್ಲಿ 46 ಕಾಮಗಾರಿ ನಡೆಸಲು ಉದ್ದೇಶಿಸಲಾಗಿದ್ದು, 14 ಕಾಮಗಾರಿ ಆರಂಭಿಸಲಾಗಿದೆ. 32 ಕಾಮಗಾರಿಗಳಿಗೆ ಅಗ್ರಿಮೆಂಟ್ ಮಾಡಿಕೊಳ್ಳಬೇಕಾಗಿದ್ದು, ಶೀಘ್ರದಲ್ಲಿ ಆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಕೆಆರ್‌ಐಡಿಎಲ್ ಹಾಗೂ ನಿರ್ಮಿತಿ ಕೇಂದ್ರದವರಿಗೆ ನೀಡಲಾಗಿರುವ ಕೆಲಸಗಳಿಗೆ 15 ದಿನದೊಳಗೆ ಆಡಳಿತಾತ್ಮಕ ಅನುಮೋದನೆ ಪಡೆದು ಕೆಲಸಗಳನ್ನು ಪ್ರಾರಂಭಿಸಬೇಕು. ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಮುಜರಾಯಿ ಸೇರಿದಂತೆ ಕಾಮಗಾರಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ತೊಂದರೆ ಇದ್ದಲ್ಲಿ ಬಗೆಹರಿಸಿಕೊಂಡು ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಜಿ.ಪಂ. ಸಿಇಓ ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆ ಅಧೀಕ್ಷಕ ಇಂಜಿನಿಯರ್ ಮಂಜು, ನಿರ್ಮಿತಿ ಕೇಂದ್ರದ ಪಿ.ಡಿ ಮಹೇಶ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.


ಮಾಜಿ ಸಂಸದರಾದ
ಶ್ರೀ ಪ್ರತಾಪ್ ಸಿಂಹ
ರವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು
UK FINANCE
VISMAYA
8050302424
ಶುಭಕೋರುವವರು : ಯೂ ಕೆ ಫೈನಾನ್ಸ್